ಓಂ

ಪರಮ ಪದ

ಸಾ. ಕೃ. ರಾಮಚಂದ್ರರಾವ್

ಓಂ

ಪರಮ ಪದ

ಇಂಗ್ಲೀಷ್ ಮೂಲ
ಸಾ. ಕೃ. ರಾಮಚಂದ್ರರಾವ್

ಅನುವಾದ
ಎಸ್. ಕೇಶವನ್

ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ

ಪ್ರಕಾಶಕರು :
ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ಇನ್‌ಸ್ಟಿಟ್ಯೂಟ್ ಆಫ್ ವೇದಿಕ್ ಕಲ್ಚರ್
ನಂ.63, 13ನೇ ಮೇನ್, 4ನೇ ಬ್ಲಾಕ್, ಜಯನಗರ ಪೂರ್ವ
ಬೆಂಗಳೂರು - 560 011
ದೂರವಾಣಿ : 080-26556315 / 9341233221 (ಮೊಬೈಲ್)
ಈ ಮೇಲ್ : infor@vedah.com
Web : www.vedah.org

© 2005, SAKSI

ಪುಟಗಳು	:	iv + 48
ಮೊದಲ ಆವೃತ್ತಿ	:	2005
ಬೆಲೆ	:	**ರೂ.24.00**
ಮುಖಪುಟ ಕಲೆ	:	ಟಿ.ವಿ. ಶಂಕರ್
ಮುದ್ರಕರು	:	ಶ್ರೀರಂಗ ಪ್ರಿಂಟರ್ಸ್ ಪ್ರೈ. ಲಿ. ಬೆಂಗಳೂರು - 560 019.

Om Parama Pada (Om, The Ultimate Word) [Kannada], Original in English : Prof. S. K. Ramachandra Rao. Translated by : S. Keshavan. Published by : **SAKSI**, No.63, 13th Main, 4th Block East, Jayanagar, Bangalore - 560 011. First edition : 2005. Pages : iv + 48. Price Rs. 24.00

Printed at : Sreeranga Printers Pvt. Ltd.,, Bangalore - 560 019.
Phone : 26524757

ಅಧ್ಯಾಯ ಸೂಚಿ

1.	ಶಕ್ತಿಭರಿತ ಶಬ್ದ	01
2.	ಓಂ ಹಾಗೂ ಪ್ರಾಣಾಯಾಮ	03
3.	ಉಪನಿಷತ್ತು ಮತ್ತು ಶಾಸ್ತ್ರ ಗ್ರಂಥಗಳಲ್ಲಿ 'ಓಂ'	07
4.	ಯೋಗಸೂತ್ರದಲ್ಲಿ 'ಓಂ'	11
5.	ಜೈನ ಹಾಗೂ ಬೌದ್ಧ ಧರ್ಮಗಳಲ್ಲಿ 'ಓಂ'	13
6.	'ಓಂ' - ಮಾನವನ ಆಸರೆ	14
7.	ಪ್ರಣವ-ಜಪ	19
8.	ವೇದಾಂತದ ದೃಷ್ಟಿಕೋನ	21
9.	ಋಗ್ವೇದದಲ್ಲಿ ವಿಶ್ವಾತೀತ 'ಓಂ'	23
10.	ಪ್ರಕಾಶದ ಅನಾವರಣ	26
11.	ಆಧ್ಯಾತ್ಮಿಕ ಸಾಧನೆ	30
12.	ತ್ರಿಕಾ ಪದ್ಧತಿಯ ಯೋಗದಲ್ಲಿ ಓಂ - 1	34
13.	ತ್ರಿಕಾ ಪದ್ಧತಿಯ ಯೋಗದಲ್ಲಿ ಓಂ - 2	36
14.	ರೂಪಾಂತರಕ್ಕಾಗಿ ಓಂಕಾರ	38
15.	ಸೋಽಹಂ ಸಾಧನೆ	39
16.	ಸಾಕ್ಷಾತ್ಕಾರ ಮತ್ತು ಓಂಕಾರ	41
17.	ವಿವಿಧ ಅಭಿಪ್ರಾಯಗಳು	43

1. ಶಕ್ತಿಭರಿತ ಶಬ್ದ

ಭಾರತದ ಸಂದರ್ಭದಲ್ಲಿ ಹೇಳುವುದಾದರೆ, ''ಓಂ''ಗಿಂತಲೂ ಅಧಿಕ ಶಕ್ತಿಭರಿತ ಶಬ್ದ ಅಥವಾ ಸಂಕೇತ ಇನ್ನಾವುದೂ ಇಲ್ಲ. ಅದೊಂದು 'ಪದ'ವೂ ಅಲ್ಲ ಅಥವಾ ''ಅಕ್ಷರ''ವೂ ಅಲ್ಲ; ಆದ್ದರಿಂದ ಅದರ ಬಗ್ಗೆ ಲಕ್ಷಣಾರ್ಥಕವಾದುದೇನೂ ಇಲ್ಲ. ಅದು ಸಂಸ್ಕೃತವೂ ಅಲ್ಲ, ನಿಷ್ಕೃಷ್ಟವಾಗಿ ಭಾರತೀಯವೂ ಅಲ್ಲ. ಅದು ''ಆಮೆನ್'' (Amen) ಮತ್ತು ''ಆಮಿನ್'' (Amin) ಎಂಬುವ ಅಭಿವ್ಯಕ್ತತೆಗಳಂತೆ ಗೌಪ್ಯ ಹಾಗೂ ಆಧ್ಯಾತ್ಮಿಕ ಗುಣವನ್ನು ಹೊಂದಿದೆ. ಜೈನ ಮತ್ತು ಬೌದ್ಧ ಧರ್ಮಗಳು (ಟಿಬೆಟ್, ಚೀನಾ, ಕೊರಿಯಾ ಮತ್ತು ಜಪಾನಿನ ರೂಪಾಂತರಗಳೂ ಸೇರಿದಂತೆ), ಭಾರತೀಯ ಮೂಲವನ್ನು ಹೊಂದಿರುವ ಎಲ್ಲ ಧರ್ಮಗಳೂ ಅದನ್ನು ವಿಶಿಷ್ಟವಾಗಿ ಉಪಾಸನೆ, ಸಾಧನೆ, ತಪಸ್ಸು(askesis) ಅಥವಾ ಯೋಗಗಳಲ್ಲಿ, ಅತ್ಯಂತ ಗೌರವಪೂರ್ವಕವಾಗಿ ಕಾಣುತ್ತವೆ. ಅದನ್ನು ಉಪನಿಷತ್ತುಗಳಲ್ಲಿ ''ಒಂದು ಚಿರಂತನ ಶಬ್ದ'' (ಏಕಾಕ್ಷರ) ಎಂದು ವರ್ಣಿಸಲಾಗಿದೆ; ಬ್ರಹ್ಮದಷ್ಟೇ ಪವಿತ್ರವಾದದ್ದು ಎಂದು ಪರಿಗಣಿಸಲಾಗಿದೆ. ಇದು ವಿಷಯಾತೀತ ಹಾಗೂ ಏಕಮೇವ ಸತ್ಯದ ಚಿತ್ರ ಅಥವಾ ಸಂಕೇತವಾಗಿದೆ.

ಇದರ ಅಂತರಾರ್ಥ ಏನೆಂದರೆ ಪರಮೋಚ್ಚ ಸತ್ಯವು ಶಬ್ದಾತೀತವಾದುದು; ಅದನ್ನು ಮೌನದಲ್ಲಿ, ಶಬ್ದರಾಹಿತ್ಯದಲ್ಲಿ ಕಂಡುಕೊಳ್ಳಬಹುದಾಗಿದೆ. ಆದರೆ ಇದೇ ಬೀಜಾಕ್ಷರ. ಇದರಿಂದ ಎಲ್ಲ ಶಬ್ದಗಳು ರಚಿತವಾಗಿವೆ ಮತ್ತು ಇದು ಎಲ್ಲ ಪದಗಳ ಅರ್ಥಗಳನ್ನು ಒಳಗೊಂಡಿದೆ. ಇದನ್ನೊಂದು 'ಪದ'ವಾಗಿ ತೆಗೆದುಕೊಂಡರೆ, ಅದು ಯಾವುದೇ ವ್ಯವಹಾರಿಕ ಅರ್ಥವನ್ನು ಹೊಂದಿಲ್ಲ. ಇದಕ್ಕೂ ಮೀರಿದ ಬೇರೆ ಶಬ್ದವಿಲ್ಲ; ಈ ಅರ್ಥದಲ್ಲಿ ಇದು ಸಕಲ ಜೀವಿಗಳ ಗುರಿಯಾಗಿರುವ ಉನ್ನತ ಸ್ಥಿತಿಯ ಪರಮಪದವಾಗಿದೆ. ಇದು ಉಪನಿಷತ್ತುಗಳು ಸೂಚಿಸಿರುವ ಶಬ್ದಗಳು ಮತ್ತು ಮೌನದ ನಡುವಿನ ಸೇತುವೆಯಾಗಿದೆ. ಇದು ಅನಾಹತ (ಅನಿರ್ಬಂಧ, ಅಸ್ಫುಟ).

ಇದು ''ಅ'', ''ಉ'', ''ಮ'' ಎಂಬ ಮೂರು ಧ್ವನಿಗಳಿಂದ ರಚಿತವಾಯಿತೆಂಬ ಪಾರಂಪರಿಕ ಅಭಿಪ್ರಾಯವನ್ನು (ಇದನ್ನು ಮುಂದೆ ವಿವರಿಸಲಾಗಿದೆ), ಈ ಶಬ್ದಗಳು (ಅಥವಾ ಈ ಶಬ್ದಗಳ ಏಕಾಂಶಗಳು), ಸಂಸ್ಕೃತದ ವರ್ಣಮಾಲೆಯ ಎಲ್ಲ ಅಕ್ಷರಗಳನ್ನು ಪ್ರತಿನಿಧಿಸುತ್ತವೆ ಎಂಬ ಅರ್ಥದಲ್ಲಿ ಗ್ರಹಿಸಬೇಕು. ವಾಸ್ತವದಲ್ಲಿ ಮಿಕ್ಕೆಲ್ಲಾ ಅಕ್ಷರಗಳು ಈ ಶಬ್ದಾಂಶಗಳ ವಿಸ್ತರಣೆಗಳು, ಮಾರ್ಪಾಡುಗಳು ಅಥವಾ ಸಂಯೋಜನೆಗಳಾಗಿವೆ. ಪಾರಂಪರಿಕವಾಗಿ, ''ಅ' ಶಬ್ದಾಂಶವು ದೈವತ್ವದ ಮೊಟ್ಟ ಮೊದಲ ಹೊರಹೊನಲು ಮತ್ತು ಎಲ್ಲ ಪ್ರಾಪಂಚಿಕ ವ್ಯವಹಾರಗಳ ಆಧಾರವಾದ ವಿಷ್ಣುವನ್ನು ಸಂಕೇತಿಸುತ್ತದೆಯೆಂದು ಅಭಿಪ್ರಾಯ ಪಡಲಾಗಿದೆ. ಇದು ವಿಸರ್ಗದ ಲಕ್ಷಣವಾಗಿದೆ. ಎರಡನೆಯ ಅಂಶವಾದ ''ಉ''ಕಾರವು ಒಳಗಿನಿಂದ ಹೊರಹರಿವು, ಹೊಮ್ಮುವಿಕೆ, ಉಳಿವು, ಮುಂದುವರೆಯುವಿಕೆ, ಸಂರಕ್ಷಣೆ, ಪದದ ಸಮಗ್ರೀಕರಣ ಮತ್ತು ಶಬ್ದಾರ್ಥದ ವ್ಯವಹಾರವನ್ನು ಪ್ರತಿನಿಧಿಸುತ್ತದೆ. ಕೊನೆಯ ಅಂಶವಾದ (ಅನುಸ್ವರವನ್ನು ಪ್ರತಿನಿಧಿಸುವ) ''ಮ್''ಕಾರವು,

ಮುಚ್ಚಿಕೊಳ್ಳುವುದು, ನಿರ್ಗಮನ, ಗ್ರಹಿಕೆ, ವಿಘಟನೆ, ಉಸಿರನ್ನೆಳೆದುಕೊಳ್ಳುವಿಕೆ, ಇವುಗಳನ್ನು ಸೂಚಿಸುತ್ತದೆ. ''ಅ'' ನಾಭಿಯಾಗಿದೆ, ''ಉ'' ಹೃದಯವಾಗಿದೆ ಮತ್ತು ''ಮ್'' ಶಿರವಾಗಿದೆ. (ನಾಭಿ, ಹೃತ್, ಮೂರ್ಧ) ಇವೆಲ್ಲವೂ ಜೊತೆಗೂಡಿ 'ಆತ್ಮ', 'ಪ್ರಾಣ-ಶಕ್ತಿ', 'ಜೀವನ' ವಾಗುತ್ತದೆ.

ಆದ್ದರಿಂದ ಇದು, ತನ್ನ ವ್ಯಾವಹಾರಿಕ ಹಾಗೂ ಅಲೌಕಿಕ ದೃಷ್ಟಿಗಳಲ್ಲಿ ಸ್ಪಷ್ಟವಾಗಿ ಭಿನ್ನವಾದ ಮತ್ತು ಸುಲಭವಾಗಿ ವಿಶ್ಲೇಷಿಸಬಹುದಾದ ಸರ್ವೋನ್ನತ ಸತ್ಯದ ಸಂಕೇತವಾಗಿದೆ. ಇದೊಂದು ಶಬ್ದ ಮತ್ತು ಅರ್ಥಗಳ ಸೀಮಿತ ಪ್ರಪಂಚಕ್ಕೆ ಹಾಗೂ ನಿಶ್ಯಬ್ದತೆಯ ಅಪರಿಮಿತ ಪ್ರಪಂಚಕ್ಕೆ ಆಧಾರ ಭೂತವಾದ ಅಂತರಿಕ್ಷದ ಚಿಹ್ನೆ ಅಥವಾ ಸಂಕೇತವಾಗಿದೆ. ವಾಸ್ತವಿಕವಾಗಿ ಇದೊಂದು ಮನನ ಮತ್ತು ಏಕಾಗ್ರತೆಗೆ ಸೂಕ್ತವಾದ ಮಂತ್ರವಾಗಿದೆ.

ಓಂ

2. ಓಂ ಹಾಗೂ ಪ್ರಾಣಾಯಾಮ

ಯೋಗ-ತಂತ್ರ ಮಾರ್ಗವು "ಓಂ" ಶಬ್ದವನ್ನು ಉಸಿರಾಟದ ಪ್ರಕ್ರಿಯೆಗೆ ಸಾಧನೆ ಮಾಡಿಕೊಳ್ಳುತ್ತದೆ. ಚೈತನ್ಯದ ಹರಿವನ್ನು (ಪ್ರಾಣ) ನೇರವಾಗಿ ಸಮೀಪಿಸಲಾಗುವುದಿಲ್ಲ; ಅದು ಉಸಿರಾಟದ ಪ್ರಕ್ರಿಯೆಯಲ್ಲಿ ಗ್ರಾಹ್ಯವಾಗುತ್ತದೆ: ಉಚ್ಛ್ವಾಸ (ಪ್ರಾಣ), ನಿಶ್ವಾಸ (ಅಪಾನ). ಪ್ರಾಣ ಶಕ್ತಿಯನ್ನು "ಹಂಸ"ವೆಂದು (ಸ್ವರ್ಗೀಯ ಕೊಳದಲ್ಲಿ ಈಜುವ ದೈವೀಹಂಸ) ದೃಗ್ಗೋಚರಿಸಿ ಕೊಳ್ಳಲಾಗುತ್ತದೆ. ಉಚ್ಛ್ವಾಸವು "ಸ" ಎಂಬ ಶಬ್ದವನ್ನು, ನಿಶ್ವಾಸವು "ಹಂ" ಎಂಬ ಶಬ್ದವನ್ನು ಹೊರಡಿಸುತ್ತದೆ. ವ್ಯಕ್ತಿಯು "ಹಂ" (ನಿಶ್ವಾಸ, ಅಪಾನ) ಮತ್ತು ಸಃ (ಉಚ್ಛ್ವಾಸ- ಪ್ರಾಣ) ಶಬ್ದಗಳನ್ನು ನಿಯತವಾಗಿ ಪುನರುಚ್ಚರಿಸುತ್ತಾನೆ. ಇದನ್ನೇ "ಹಂಸ-ಮಂತ್ರ" (ಅಜಪಾಜಪ) ಎನ್ನುತ್ತಾರೆ.

ಹಂಸ ಮಂತ್ರದ ವಿವರಣೆ ಹೀಗಿದೆ ;

1. ಜಪ - ವಿನಿಯೋಗ

ಓಂ ಅಸ್ಯ ಶ್ರೀ ಅಜಪಾಜಪ ಮಂತ್ರಸ್ಯ ಹಂಸಋಷಿಃ ।
ಅವ್ಯಕ್ತಾ ಗಾಯತ್ರೀ ಛಂದಃ। ಪರಮಾತ್ಮಾ ದೇವತಾ ।
ಹಂ ಬೀಜಃ । ಸಃ ಶಕ್ತಿಃ । ಸೋಽಹಂ ಕೀಲಕಂ ।
ಮೋಕ್ಷಾರ್ಥೇ ಜಪೇ ವಿನಿಯೋಗಃ ॥ (ಹಂಸೋ ಹಿ ಜೀವಃ)

2. ಹಂಸ - ಗಾಯತ್ರಿ

ಹಂಸ ಹಂಸಾಯ ವಿದ್ಮಹೇ ।
ಸೋಹಂ ಹಂಸಾಯ ಧೀಮಹಿ ।
ತನ್ನೋ ಹಂಸಃ ಪ್ರಚೋದಯಾತ್ ॥

3. ಧ್ಯಾನ - ಶ್ಲೋಕ

ಅಗ್ನಿಷೋಮ ಗುರುದ್ವಯಂ ಪ್ರಣವಕಂ
ಬಿಂದು ತ್ರಿನೇತ್ರೋ ಜ್ವಲಂ ।
ಭಾ ಸ್ವದ್ರೂಪಮುಖಂ ಶಿವಾಂಘ್ರಿಯುಗಲಂ
ಪಾರ್ಶ್ವಸ್ಥ ಸೂರ್ಯಾನಿಲಂ ॥
ಉದ್ಯದ್ ಭಾಸ್ಕರಕೋಟಿ ಸದೃಶಂ
ಹಂಸಂ ಜಗದ್ ವ್ಯಾಪಿನಂ ।
ಶಬ್ದ ಬ್ರಹ್ಮಮಯಂ ಹೃದಂಬುಜಾಪದೇ ।
ನೀಡೆ ಸದಾ ಸಂಸ್ಮರೇತ್ ॥

4. ಆತ್ಮಾಷ್ಟಕ್ಷರ ಮಂತ್ರಃ

ಓಂ ಹ್ರೀಂ ಹಂಸಃ ಸೋಽಹಂ ಸ್ವಾಹಾ ॥

5. ಯಂತ್ರ (ಷಡ್ಗುಣ್ಯ)



ಆದರೆ ಈ ಆಂತರಿಕ ಉಚ್ಚಾರಣೆಯು (ಅಜಪಾ-ಜಪ) ಸಾಮಾನ್ಯವಾಗಿ ಯಾಂತ್ರಿಕ ಹಾಗೂ ಸುಪ್ತ ಪ್ರಜ್ಞೆಯದಾಗಿರುತ್ತದೆ. ಆತ್ಮನಿಗ್ರಹದ (ತಪಸ್ಸಿನ) ಸಮಯದಲ್ಲಿ ಮಾತ್ರ ಈ ಸುಪ್ತಪ್ರಜ್ಞೆಯಲ್ಲಿನ ಪತಣದ ಅರಿವುಂಟಾಗುತ್ತದೆ. ವಿಜ್ಞಾನ-ಭೈರವ (155)ದಲ್ಲಿ ಈ ರೀತಿ ಹೇಳಿದೆ [1].

''ಹಂಸಃ ಸೋಹಂ'' ಮಂತ್ರದಲ್ಲಿ, ಓಂ ಎನ್ನುವುದು ಪ್ರಮುಖ ಸೂಕ್ಷ್ಮಾಂಶವಾಗಿದೆ. ''ಓಂ'' ಶಬ್ದದ ಮೊದಲನೇ ಅಂಶವಾದ ''ಅ'' ಅಥವಾ ''ಅಂ'', ''ಸ'' ಮತ್ತು ''ಹ''ಗಳು ಸಂಧಿಸುವ ಸ್ಥಾನವಾಗಿದೆ (ಹಂಸಃ ಸೋಹಂ); ಇದು ''ಕುಂಭಕ''ವನ್ನು ಪ್ರತಿನಿಧಿಸುತ್ತದೆ (''ಸ'' ''ರೇಚಕ'' ಮತ್ತು ಹಂ ''ಪೂರಕ''). ಒಳಗೂ ಹೋಗದೆ, ಹೊರಗೂ ಬರದೇ ಇರುವ ಶ್ವಾಸವು ಶೂನ್ಯ ವಿರಾಮವಾಗಿದೆ, ಹಾಗೆ ಪ್ರಾಣವು ''ಹಂಸಃ ಸೋಹಂ'' ಪಕ್ಷದ್ಧಯ ತ್ಯಾಗಾತ್ (ಹ ಮತ್ತು ಸ) ಪ್ರಣವಃ ಕುಂಭಕವು, ಉಚ್ಛ್ವಾಸದ ನಂತರ ಮತ್ತು ನಿಶ್ವಾಸಕ್ಕೆ ಮುನ್ನ ಶರೀರದೊಳಗಿರಬಹುದು (ಅಂತಃ -ಕುಂಭಕ), ಅಥವಾ ನಿಶ್ವಾಸದ ನಂತರ ಮತ್ತು ಉಚ್ಛ್ವಾಸಕ್ಕೆ ಮುನ್ನ ಶರೀರದಿಂದಾಚೆ ಇರಬಹುದು (ಬಹಿಃ ಕುಂಭಕ). ಶಕ್ತಿ-ಸಂಗಮ-ತಂತ್ರದಲ್ಲಿ, ''ಸೋಹಮಿತ್ಯತ್ರ ದೇವೇಶಿ ಪ್ರಣವಃ

---

[1] ಸಕಾರೇಣ ಬಹಿರ್ಯಾತಿ ಹಕಾರೇಣ ವಿಶೇತ್‌ಪುನಃ ।
ಹಂಸಹಂಸೇತ್ಯಮುಂ ಮಂತ್ರಂ ಜೀವೋ ಜಪತಿ ಸರ್ವದಾ ॥

ಈ ಶ್ಲೋಕದ ಇನ್ನೊಂದು ರೂಪಾಂತರವೆಂದರೆ :

ಹಕಾರೇಣ ಬಹಿರ್ಯಾತಿ ಸಕಾರೇಣ ವಿಶೇತ್‌ಪುನಃ ।
ಹಂಸಾತ್ಮಿಕಾಂ ಭಗವತೀಂ ಜೀವೋ ಜಪತಿ ಸರ್ವದಾ ॥
ಹಕಾರಸ್ಯ ಸಕಾರಸ್ಯ ಲೋಪೇ ಕಾಮಕಲಾ ಭವೇತ್ ॥ (ಶಕ್ತಿ-ಸಂಗಮ ತಂತ್ರ)

ಪರಿತಿಷ್ಠತಿ'' ಎಂದಿದೆ. ಸಾಮಾನ್ಯವಾಗಿ ಕುಂಭಕವು (ಉಚ್ಛ್ವಾಸ - ನಿಶ್ವಾಸಗಳ ನಡುವಿನ ವಿರಾಮ) ಸೂಕ್ಷ್ಮವಾಗಿರುತ್ತದೆ ಅಥವಾ ಗಮನಕ್ಕೆ ಬರುವುದಿಲ್ಲ. ಈ ಕುಂಭಕವು ವಾಸ್ತವದಲ್ಲಿ ಬಹುಮುಖ್ಯವಾದ ವಿರಾಮವಾಗಿದೆ. ಅಲ್ಲಿ ಪ್ರಾಣವು ಅಂತರ್ಗತವಾಗಿದೆ. (ಕಠ ಉಪನಿಷತ್ (2.2.5))[2] ಹೇಳುತ್ತದೆ :

ತಂತ್ರಶಾಸ್ತ್ರ ಗ್ರಂಥಗಳಲ್ಲಿ ಪ್ರಾಣಾಯಾಮವನ್ನು ಓಂಕಾರದೊಂದಿಗೆ ಗುರುತಿಸಿದ್ದಾರೆ [3].

''ಪ್ರಾಣಾಯಾಮ''ವನ್ನು ಈ ರೀತಿ ವಿವರಿಸಲಾಗಿದೆ :

1. ರೇಚಕ (ನಿಶ್ವಾಸ)
2. ಪೂರಕ (ಉಚ್ಛ್ವಾಸ)
3. ಕುಂಭಕ (ಹಿಡಿದಿಟ್ಟುಕೊಳ್ಳುವುದು)
4. ಅ ಉಮ್

ಕುಂಭಕವೇ ನಾಲ್ಕು ರೀತಿಯದ್ದಾಗಿದೆ :

1. ಬಾಹ್ಯ-ಕುಂಭಕ (ಹೊರಗೆ)
2. ಆಭ್ಯಂತರ - ಕುಂಭಕ (ಒಳಗೆ)
3. ಕೇವಲ - ಕುಂಭಕ (ಪೂರಕ ಅಥವಾ ರೇಚಕ ರಹಿತ)
4. ಸ್ವ-ಕುಂಭಕ (ಅನೈಚ್ಛಿಕ ಹಾಗೂ ಸೂಕ್ಷ್ಮ - ಆದ್ದರಿಂದ ಇದನ್ನು ಅಕುಂಭಕವೆಂತಲೂ ಕರೆಯುತ್ತಾರೆ)

ಉಚ್ಛ್ವಾಸ - ನಿಶ್ವಾಸಗಳ ಒಂದು ಆವರ್ತನಕ್ಕೆ ತೆಗೆದುಕೊಳ್ಳುವ ಸಮಯವನ್ನು ನಾಲ್ಕು ಸೆಕೆಂಡುಗಳೆಂದು ಯೋಗವು ಪರಿಗಣಿಸುತ್ತದೆ; ಹೀಗೆ ಹಂಸ-ಮಂತ್ರ (ಹಂಸ-ಜಪ)ದ ಅನೈಚ್ಛಿಕ ಪಠಣ ಒಂದು ನಿಮಿಷಕ್ಕೆ ಸುಮಾರು ಹದಿನೈದು ಬಾರಿಯಾಗುತ್ತದೆ. ಒಂದು ಗಂಟೆಗೆ 900(15 x 60) ಬಾರಿ ಪುನರಾವೃತ್ತಿಯಾಗುತ್ತದೆ. ಒಂದು ದಿನ-ರಾತ್ರಿಯಲ್ಲಿ (24 ಗಂಟೆ) ಅದು 21,600 (900 x 24)[4] ಬಾರಿ ಪುನರಾವೃತ್ತಿಯಾಗುತ್ತದೆ.

---

[2] ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ । ಇತರೇಣ ತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ ॥ ಕಠೋಪನಿಷತ್ (2.2.5)

ಊರ್ಧ್ವಂ ಪ್ರಾಣಮುನ್ನಯತ್ಯಪಾನಂ ಪ್ರತ್ಯಗಸ್ಯತಿ । ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೆ ॥ ಕಠೋಪನಿಷತ್ (2.2.3)

[3] ವರ್ಣತ್ರಯಾತ್ಮಕಾ ಹ್ಯೋತೆ ರೇಚಕ ಪೂರಕ ಕುಂಭಕಾಃ । ಸ ಏವ ಪ್ರಣವಃ ಪ್ರೋಕ್ತಃ ಪ್ರಆಣಾಯಾಮಶ್ಚ ತನ್ಮಯಃ ।

[4] ಷಟ್‌ಶತಾನಿ ದಿವಾರಾತ್ರೌ ಸಹಸ್ರಾಣ್ಯೇಕವಿಂಶತಿಃ । ಜಪೋ ದೇವ್ಯಾಃ ಸಮುದ್ದಿಷ್ಟಃ ಸುಲಭೋ ದುರ್ಲಭೋಜಡೈಃ ॥ ಶತಪತ ಬ್ರಾಹ್ಮಣ (12.3.2.8)

ಇದು ಅನೈಚ್ಛಿಕ, ಸ್ವಯಂ ಪ್ರೇರಿತ, ಅಜಾಗೃತ ಸ್ಥಿತಿಯಲ್ಲಿನ ಜಪ; ಮತ್ತು ವ್ಯಕ್ತಿಯು ಇದಕ್ಕೆ ತನ್ನನ್ನು ಶ್ರುತಿಗೂಡಿಸಿಕೊಂಡು ಕುಂಭಕವನ್ನು (ಉಚ್ಛ್ವಾಸವೂ ಅಲ್ಲದ, ನಿಶ್ವಾಸವೂ ಅಲ್ಲದ ಉಸಿರು, ಉಸಿರೇ ಇಲ್ಲದ ಉಸಿರು) ಅರಿತುಕೊಳ್ಳಬೇಕು. ಓಂ ಶಬ್ದವು ಪಠಿಸುವ ಅಥವಾ ಉಚ್ಚರಿಸುವ ಮಂತ್ರವಲ್ಲ, ವ್ಯಕ್ತಿಯ ಅಂತರಾಳದಲ್ಲಿ ಪ್ರತಿಧ್ವನಿಸುವ ಇದನ್ನು ಶ್ರವಣ ಮಾಡಬೇಕು ಮತ್ತು ಅನುಭವಿಸಬೇಕು. ಗಾಢವಾದ ಧ್ಯಾನದಲ್ಲಿ, ಮನಸ್ಸು ಪ್ರಾಣದಿಂದ ಪ್ರತ್ಯೇಕಗೊಂಡಾಗ, ಇದನ್ನು ಕೇಳಬಹುದು; ಮನಸ್ಸಿನಲ್ಲಿ ಯಾವುದೇ ಶಬ್ದಗಳಿಲ್ಲದೆ, ನಿಶ್ಶಬ್ದಕ್ಕೆ ಜಾರಿಕೊಂಡಾಗ ಅದನ್ನು ಅನುಭವಿಸಬಹುದು.

ಇದು ಅಂತಿಮ ವಿಶ್ರಾಂತಿ (ವಿಶ್ರಾಮ), ಆದ್ದರಿಂದ ಅಲೌಕಿಕ (ಪರ). ಅಲ್ಲಿ ಉಭಯತ್ವವಿಲ್ಲ, ಆದ್ದರಿಂದ ಅದು ಅನಾಹತ. ಇದು ವ್ಯಕ್ತಿಯ ಕೇಂದ್ರವಾಗಿದೆ (ಹೃತ್). ಇಲ್ಲಿಂದ ಅಂಕುರವಾಗುವ ಪ್ರಾಣವು ''ಪಶ್ಯಂತಿ'' ಮತ್ತು ''ಮಧ್ಯಮ''ಗಳ ಮೂಲಕ ಹೊರಹೊಮ್ಮಿ ಮೂಗಿನ ತುದಿಯ ಹೊರಗಡೆಯಿಂದ ಹನ್ನೆರಡು ಅಂಗುಲಗಳ ದೂರವನ್ನು ಕ್ರಮಿಸುತ್ತದೆ. (ದ್ವಾದಶಾಂತ). ಓಂ ಶಬ್ದವನ್ನು ಉಚ್ಚರಿಸಿದಾಗ, ಅದು ಪ್ರಾಣದ ಮಾರ್ಗವನ್ನೇ ಅನುಸರಿಸುತ್ತದೆ. ಆದರೆ, 'ಓಂ' ಕಾರವನ್ನು ಕುರಿತು ಧ್ಯಾನಮಾಡಿದಾಗ, ಅದು ವೈಖರಿಯಿಂದ (ವಾಕ್ ಇಂದ್ರಿಯ) ಒಳಹೊಕ್ಕು ಮಧ್ಯಮ ಮತ್ತು ಪಶ್ಯಂತಿಗಳ ಮೂಲಕ ಹಾದು ಹೃದಯವನ್ನು (ಪರಾ) ಮುಟ್ಟುತ್ತದೆ. ಹೃದಯದಲ್ಲಿ ಅನೈಚ್ಛಿಕ ''ಓಂ'' ಕೇಳಿಸುತ್ತದೆ ಮತ್ತು ಅನುಭವವಾಗುತ್ತದೆ.

ಭಗವದ್ಗೀತೆ (8.12) ಯಲ್ಲಿ ಈ ರೀತಿ ಹೇಳಿದೆ [5]:

ಸರ್ವೇಂದ್ರಿಯಗಳನ್ನು ಸಂಯಮಗೊಳಿಸಿ, ಮನಸ್ಸನ್ನು ಹೃದಯದಲ್ಲಿ ನಿರೋಧಿಸಿ ತನ್ನ ಪ್ರಾಣವಾಯುವನ್ನು ಶಿರಸ್ಸಿನಲ್ಲಿ ನಿಲ್ಲಿಸಿ ಯೋಗ ಧಾರಣೆಯಲ್ಲಿ ಇರಬೇಕು.

ॐ

[5] ಸರ್ವ ದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುದ್ಧ್ಯಚ ।
ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋಯೋಗ ಧಾರಣಾಂ ॥ ಭಗವದ್ಗೀತೆ (8.12)

3. ಉಪನಿಷತ್ತು ಮತ್ತು ಶಾಸ್ತ್ರ ಗ್ರಂಥಗಳಲ್ಲಿ 'ಓಂ'

''ಓಂ'' ಶಬ್ದದ ಮಹತ್ವವನ್ನು ಸ್ವಲ್ಪ ಮಟ್ಟಿಗೆ ಉಪನಿಷತ್ತುಗಳಲ್ಲಿ ವಿವರಿಸಲಾಗಿದೆ ಮತ್ತು ಉಪಾಸನೆಯಲ್ಲಿ ಅದರ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಲಾಗಿದೆ. ಛಾಂದೋಗ್ಯವು (1.2.1) ಇದನ್ನು ಪವಿತ್ರವಾದ ಶಬ್ದ (ಉದ್ಗೀತ) ಎಂದು, ಭಕ್ತಿಪೂರ್ಣ ಧ್ಯಾನಕ್ಕೆ ಯುಕ್ತವಾಗಿದೆ ಎಂದು ಪರಿಗಣಿಸುತ್ತದೆ. ಏಕೆಂದರೆ ಇದು ಅವಿನಾಶಿ ಮತ್ತು ಮಾರ್ಪಾಡಾಗದೆ ಇರುವಂತಹುದು. (ಅಕ್ಷರ)[1]

ಮಾಂಡೂಕ್ಯ ಉಪನಿಷದ್ (1) : 'ಓಂ' ಒಂದು ಅವಿನಾಶಿ ಶಬ್ದ ಮಾತ್ರವೇ ಅಲ್ಲದೆ, ಅದು 'ಸಕಲವೂ' ಆಗಿದೆ (ಇದಂ), ನಮ್ಮ ಮುಂದಿರುವ ಗ್ರಾಹ್ಯ ವಿಷಯವಾಗಿದೆ. ಪ್ರಪಂಚದಲ್ಲಿರುವ ಸಮಸ್ತವೂ ಅದರ ಇರುವಿಕೆಯ ಸೂಚಕವಾಗಿದೆ, ಅದರ ಸ್ಪಷ್ಟೋಚ್ಚಾರವಾಗಿದೆ, ಅದರ ನಿರೂಪಣೆಯಾಗಿದೆ.

ತೈತ್ತಿರೀಯ - ಉಪನಿಷತ್ (1.8)[3] : ''ಓಂ'' ಬ್ರಹ್ಮವನ್ನು ಸೂಚಿಸುತ್ತದೆ; ''ಓಂ'' ಅಸ್ತಿತ್ವದಲ್ಲಿರುವ ಎಲ್ಲವೂ ಆಗಿದೆ. ಬ್ರಹ್ಮವು ಸಂಪೂರ್ಣವಾಗಿ ವೃದ್ಧಿಗೊಂಡ ಉನ್ನತ ಸತ್ಯವಾಗಿದೆ. ಅದಕ್ಕೂ ಮೀರಿ ಬೇರೆ ಇರಲಾರದು (ಪರಿವೃದ್ಧ ಬ್ರಹ್ಮಣತ್ವತ್ ಬ್ರಹ್ಮ).

ಕಠೋಪನಿಷತ್ತು (1.2.16, 17), ಇದನ್ನು ಸರ್ವೋನ್ನತ ಸಂಕೇತ, ಅತ್ಯುನ್ನತ ಆಧಾರವೆಂದು ಕರೆದು, ಇದನ್ನು ಅರ್ಥ ಮಾಡಿಕೊಂಡವರು ಬ್ರಹ್ಮಸ್ಥಾನದಲ್ಲಿಯೇ ನೆಲೆಸುತ್ತಾರೆಂದು ಹೇಳುತ್ತದೆ. 'ಓಂ' ಬ್ರಹ್ಮದ ಸಂಕೇತವಾಗಿದೆ, ಮತ್ತು ಅದನ್ನು ಅರಿತಲ್ಲಿ ವ್ಯಕ್ತಿಯ ಆಕಾಂಕ್ಷೆಗಳು ಖಂಡಿತವಾಗಿಯೂ ಸಿದ್ಧಿಸುತ್ತವೆ[4].

ಮುಂಡಕ ಉಪನಿಷತ್ತಿನಲ್ಲಿ(2.2.4) ಒಂದು ಚಿತ್ರಸದೃಶ ವಿವರಣೆ ಇದೆ: ಓಂ ಎನ್ನುವುದು ಒಂದು ಧನುಸ್ಸು, ವ್ಯಕ್ತಿಯು ಬಾಣ; ಸರ್ವೋನ್ನತ ಹಾಗೂ ಏಕಮಾತ್ರ ಸತ್ಯವಾಗಿರುವ ಬ್ರಹ್ಮವೇ ಲಕ್ಷ್ಯವಾಗಿದೆ (ಗುರಿ). ಸದಾ ಮನೋಜಾಗ್ರತೆಯಿಂದಿರುವ ವ್ಯಕ್ತಿಯು ಬಾಣವನ್ನು ಎಸೆಯಬೇಕು ಮತ್ತು ಬಾಣವು ಲಕ್ಷ್ಯವನ್ನು ಭೇದಿಸುವ ಲಕ್ಷ್ಯದೊಂದಿಗೆ ತಾನೂ ಒಂದಾಗುತ್ತಾನೆ[5].

---

[1] ಓಮಿತ್ಯೇತದಕ್ಷರ ಇದಂಮುದ್ಗೀಥಮುಪಾಸೀತ ॥ (ಛಾಂದೋಗ್ಯ ಉಪನಿಷತ್)

[2] ಓಮಿತ್ಯೇತದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಂ (ಮಾಂಡೂಕ್ಯ ಉಪನಿಷತ್)

[3] ಓಮಿತಿ ಬ್ರಹ್ಮ ಓಮಿತೀದಂ ಸರ್ವಂ ।

[4] ಏತದ್ಧ್ಯೇವಾಕ್ಷರಂ ಬ್ರಹ್ಮ ಹ್ಯೇತದ್ಧ್ಯೇವಾಕ್ಷರಂ ಪರಮ್ । ಏತದ್ಧ್ಯೇವಾಕ್ಷರಂ
ಜ್ಞಾತ್ವಾಯೋಯದಿಚ್ಛತಿ ತಸ್ಯ ತತ್ ॥
ಏತದಾಲಂಬನಂ ಶ್ರೇಷ್ಠಮೇತದಾಲಂಬನಂ ಪರಂ । ಏತದಾಲಂಬನಂ
ಜ್ಞಾತ್ವಾಬ್ರಹ್ಮಲೋಕೆ ಮಹೀಯತೆ ॥ (ಕಠೋಪನಿಷತ್ 1.2.16, 17)

[5] ಪ್ರಣವೋ ಧನುಃ ಶರೋಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯ ಮುಚ್ಯತೆ । ಅಪ್ರಮತ್ತೇನ ವೇದ್ಧವ್ಯಂ
ಶರವತ್ತನ್ಮಯೋ ಭವೇತ್ ॥ (ಮುಂಡಕ ಉಪನಿಷತ್ 2.2.4)

ಧನುಸ್ಸು ಬಾಣಕ್ಕಾಗಿಯೇ ಇದೆ; ಧನುಸ್ಸಿನ ಮೂಲಕ ಬಾಣವನ್ನು ಎಸೆದಾಗ ಮಾತ್ರವೇ ಬಾಣಕ್ಕೆ ವೇಗವು ಬರುತ್ತದೆ. ಉಪನಿಷತ್ತು ಓಂಕಾರವನ್ನು ಬ್ರಹ್ಮದಿಂದ ಪ್ರತ್ಯೇಕವಾಗಿಸುತ್ತದೆ; ಓಂಕಾರವು ನಮ್ಮ ಕೈಗೆಟಕುವಂತಿದೆ, ಶರೀರದೊಳಗಿನ ಆತ್ಮವಾಗಿದೆ, ಆದರೆ ಬ್ರಹ್ಮವಾದರೋ ದೂರದಲ್ಲಿದೆ (ಅಜ್ಞಾನಿಗಳಿಗೆ. ಆದರೆ ಅದನ್ನು ಅರಿತವರಿಗೆ ಹತ್ತಿರದಲ್ಲಿದೆ). ವ್ಯಕ್ತಿಯು ಇಲ್ಲಿಂದ ಅಲ್ಲಿಯವರೆಗೆ ಪಯಣಿಸಬೇಕಾಗಿದೆ. ಓಂಕಾರವು ಎಲ್ಲ ಉಪನಿಷತ್ತುಗಳ ಉಪದೇಶವಾಗಿದೆ. (ಔಪನಿಷದಂ ಮಹಾಸ್ತ್ರಂ) ಮತ್ತು ಆಯುಧವು ಭಕ್ತಿಯಿಂದ ಚೂಪಾಗುತ್ತದೆ. (ಉಪಾಸಾ-ನಿಶಿತಂ) (2.2.3) ಎಂದು ಈ ಗ್ರಂಥವು ಹೇಳುತ್ತದೆ[6]. ಇಲ್ಲಿ ಓಂಕಾರವನ್ನು ಪ್ರಣವವೆಂದು ಕರೆಯುತ್ತಾರೆ, ಏಕೆಂದರೆ ಇದು ಬ್ರಹ್ಮದ ಅತ್ಯುನ್ನತ ಪ್ರಶಂಸೆಯಾಗಿದೆ.

ಪತಂಜಲಿಯ ಯೋಗ-ಸೂತ್ರ (ಸಮಾಧಿ ಪಾದ, 27)ವು ''ತಸ್ಯ ವಾಚಕಃ ಪ್ರಣವಃ'' ಎಂದು ಹೇಳುತ್ತದೆ. ಈ ಶಬ್ದವು ಈಶ್ವರ ಅಂದರೆ ಬ್ರಹ್ಮವನ್ನು ವ್ಯಕ್ತಪಡಿಸುವುದಾಗಿದೆ[7]. (ವಾಚಕ ಅಥವಾ ಅಭಿದಾಯಕ.) ಆ ಶಬ್ದ (ವಾಚ್ಯ) ಬ್ರಹ್ಮವನ್ನು ಸೂಚಿಸುವುದಾಗಿದೆ. ಅರ್ಥವನ್ನು ಹೊರಗೆಡುಹುವ ಆ ಶಬ್ದದ ಸಾಮರ್ಥ್ಯವನ್ನು ತಾಂತ್ರಿಕವಾಗಿ 'ಅಭಿದಾ-ಶಕ್ತಿ' ಎಂದು ಕರೆಯಲಾಗುತ್ತದೆ; ಈ ಅಭಿವ್ಯಕ್ತತೆಯ ಸಾಮರ್ಥ್ಯವನ್ನು ಹೊಂದಿರುವ ಈ ಶಬ್ದವು ಒಂದು ಚಿಹ್ನೆಯಾಗುತ್ತದೆ, ಒಂದು ಸಂಕೇತವಾಗುತ್ತದೆ. ಅದು (ಉಪನಿಷತ್ತುಗಳ ಭಾಷೆಯಲ್ಲಿ) ಲಕ್ಷ್ಯದ (ಮು. ಉ. (2.2.4)) ಬಗ್ಗೆ ಮಾಹಿತಿಯನ್ನು ಕೊಡುತ್ತದೆ, ಆದರೆ ಶಕ್ತಿಯನ್ನು ನೇರವಾಗಿ ಮತ್ತು ಪರಿಣಾಮಕಾರಿಯಾಗಿ (ಹರಿತವಾದ ಆಯುಧವು ಏಕಪ್ರಕಾರವಾಗಿ ಹೋಗುವಂತೆ) ಬಿಡುಗಡೆ ಮಾಡುತ್ತದೆ. ಮೇಲೆ ಹೇಳಿರುವ ಉಪನಿಷತ್ತಿನ ಹೇಳಿಕೆಯಾದ ''ವಿದ್ಧಿ''ಯ ಅರ್ಥವೆಂದರೆ ''ತಿಳಿ'' ಮತ್ತು ''ಎಸೆ'' (ಬಾಣ ಎಸೆ) (ಮು. ಉ. (2.2.3)). ಈ ಸಂಕೇತವು (ಪ್ರಣವ) ಆಯುಧ (ವ್ಯಕ್ತಿ) ಮತ್ತು ಲಕ್ಷ್ಯಗಳ (ಬ್ರಹ್ಮ) ನಡುವಿನ ಸಂಬಂಧಗಳನ್ನು ಪ್ರಕಾಶಿಸುತ್ತದೆ[8].

ಮುಂಡಕೋಪನಿಷತ್ (2.2.6) ಮತ್ತೊಂದು ಸರಿಸಮನಾದ ಕುತೂಹಲಕಾರಿಯಾದ ಚಿತ್ರಣವನ್ನು ನೀಡುತ್ತದೆ[9]. ಓಂ ಶಬ್ದವು ನಮ್ಮ ಜೀವನವನ್ನು ಪ್ರತಿನಿಧಿಸುವ ಚಕ್ರದ ಗುಂಬವಾಗಿದೆ (ಕೇಂದ್ರ). ಎಲ್ಲ ಆರೆಗಳು (spokes) (ಅಥವಾ ನಮ್ಮ ವ್ಯಕ್ತಿಗತ ಅಸ್ತಿತ್ವದ ಆಯಾಮಗಳು) ಅದರಲ್ಲಿ ಭದ್ರವಾಗಿ ಅಡಕಗೊಂಡಿವೆ, ಬಿಗಿ ಕಟ್ಟಲ್ಪಟ್ಟಿವೆ, ಇದರಿಂದಾಗಿ ಚಕ್ರವು ಸರಾಗವಾಗಿ

---

[6] ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ ಶರಂ ಹ್ಯುಪಾಸಾನಿಶಿತಂ ಸಂಧದೀತ । ಆಯಮ್ಯ ತದ್ಭಾವಗತೇನ ಚೇತಸಾ ಲಕ್ಷ್ಯಂ ತದೇವಾಕ್ಷರಂ ಸೋಮ್ಯವಿದ್ಧಿ॥ (ಮುಂಡಕ ಉಪನಿಷತ್ 2.2.3)

[7] ಪ್ರಕರ್ಷೇಣ ನೂಯತೆ ಸ್ತೂಯತೇऽನೇನೇತಿ । ಪ್ರಣೌತಿ ಸ್ತೌತಿ ಈಶ್ವರಂ । ಪ್ರಣಮಂತಿ ಅನೇನ ಇತಿವಾ ।

[8] ತಯೋಶ್ಚವಾಚ್ಯ ವಾಚಕ ಭಾವ ಲಕ್ಷಣಃ ಸಂಬಂಧೋ ನಿತ್ಯಃ ಸಂಕೇತೇನ ಪ್ರಕಾಶತೆ ॥

[9] ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ । ಸ ಏಷೋಂತಶ್ಚರತೆ ಬಹುಧಾ ಜಾಯಮಾನಃ ॥ ಓಮಿತ್ಯೇವಂ ಧ್ಯಾಯಥ ಆತ್ಮಾನಂ । ಸ್ವಸ್ತಿ ವಹಃ ಪಾರಾಯ ತಮಸಃ ಪರಸ್ತಾತ್ ॥ (2.2.6)

ತಿರುಗುತ್ತಾ, ನಿರಾಳವಾಗಿ ಚಲಿಸುತ್ತದೆ, ಕೇಂದ್ರ ಗುಂಬದಲ್ಲಿರುವ ಶೂನ್ಯಪ್ರದೇಶವೇ 'ಓಂಕಾರ'ವಾಗಿ ಚಕ್ರವು ಚಲಿಸುವಂತೆ ಮಾಡುತ್ತದೆ. ಯಜುರ್ವೇದದಲ್ಲಿ ''ಓಂ'' ಅನ್ನು ವಿವರಿಸಲು ಉಪಯೋಗಿಸಿರುವ ಶಬ್ದವಾದ 'ಖಂ' (ಆಕಾಶ, ಶೂನ್ಯ ಪ್ರದೇಶ) ಶಬ್ದದ ಮಹತ್ವವನ್ನು ಇದು ನೆನಪು ಮಾಡಿಕೊಡುತ್ತದೆ : ಓಂ ಖಂ ಬ್ರಹ್ಮ ||

ನಾನಾ ರೀತಿಯಲ್ಲಿ ಶರೀರದೊಳಗೆ ಎಲ್ಲದಕ್ಕೂ ಚಾಲನೆ ನೀಡುತ್ತಿರುವ ''ಓಂ'' ಸಕಲ ಜೀವಿಗಳಲ್ಲಿ ಅಂತರ್ಗತವಾಗಿದೆ. ಉಪನಿಷತ್ತು ಆತ್ಮವನ್ನೇ (ನಮ್ಮನ್ನೇ) ಓಂ ಎಂದು ಭಾವಿಸಿಕೊಂಡು, ಅದರ ಮೇಲೆ ಧ್ಯಾನಿಸಬೇಕೆಂದು ಕರೆ ನೀಡುತ್ತದೆ. (ಓಂ ಇತಿ ಏವಂ ಧ್ಯಾಯಧ ಆತ್ಮಾನಂ). ಇದು ನಮ್ಮನ್ನು ವ್ಯಾವಹಾರಿಕ ಅಸ್ತಿತ್ವದ ಅಂಧಕಾರದಿಂದಾಚೆ ಕರೆದೊಯ್ಯುವುದೆಂದು ನಮಗೆ ಅಭಯ ನೀಡಲಾಗಿದೆ.

ಶ್ವೇತಾಶ್ವತಾರವು (1.14)ವು ಮತ್ತೊಂದು ಅದ್ಭುತವಾದ ಚಿತ್ರಣವನ್ನು ನೀಡುತ್ತದೆ. ಅದು ಪ್ರಾಚೀನ ಪದ್ಧತಿಯಂತೆ ಯಜ್ಞಕ್ಕಾಗಿ ಅಗ್ನಿಯನ್ನು ಹೊತ್ತಿಸಲು ಒಂದು ಅರಣಿಯ ಮೇಲೆ (ಬೆಂಕಿಯನ್ನು ಉತ್ಪಾದಿಸಲು ಉಪಯೋಗಿಸುವ ಒಂದು ತೆರನ ಕಟ್ಟಿಗೆ - ಚಕಮಕಿಯ ಕಟ್ಟಿಗೆ) ಇನ್ನೊಂದು ಅರಣಿಯನ್ನು ಉಜ್ಜುವ ಪ್ರಕ್ರಿಯೆಗೆ ಅನ್ವಯಿಸುತ್ತದೆ, ತನ್ನ ವೈಯಕ್ತಿಕ ಶರೀರವೇ (ವೈಯಕ್ತಿಕ ಅಸ್ತಿತ್ವ, ಆತ್ಮ) ಅರಣಿಯಾಗಿದೆ; ಅದರ ಮೇಲೆ ಓಂ ಎಂಬುದು ಇನ್ನೊಂದು ಅರಣಿಯನ್ನಿಟ್ಟು ಉಜ್ಜಬೇಕಾಗಿದೆ. ಈ ಉಜ್ಜುವಿಕೆಯೇ (ನಿರಂತರ ಹಾಗೂ ಧ್ಯೇಯಸಹಿತವಾದ ತಿಕ್ಕುವಿಕೆ, ದೃಢತೆ.) ಧ್ಯಾನ; ಅದು ಅರಣಿಯಲ್ಲಿ ಹುದುಗಿರುವ ಬೆಂಕಿಯಂತೆ ತನ್ನ ಅಸ್ತಿತ್ವದಲ್ಲೇ ಅಡಗಿರುವ ಬ್ರಹ್ಮವನ್ನು, ಘರ್ಷಣೆಯಿಂದ ಹೊರತೆಗೆಯುತ್ತದೆ[10].

ಗೋಪಥ - ಬ್ರಾಹ್ಮಣದಲ್ಲಿ(3.11) ಇವೆಲ್ಲಕ್ಕಿಂತಲೂ ವಿಭಿನ್ನವಾದ ಓಂಕಾರದ (ಪ್ರಣವ) ಆಯಾಮವನ್ನು ಸೂಚಿಸಲಾಗಿದೆ. ಒಂದು ಕಾಲುವೆಯನ್ನು ದಾಟಲು ಒಂದು ದಂಡವನ್ನು ಉಪಯೋಗಿಸುವಂತೆ ಅಸ್ತಿತ್ವದ ಕ್ಲೇಶಗಳನ್ನು ದಾಟಲು ಪ್ರಣವವನ್ನು ಒಂದು ಊರುಗೋಲಾಗಿಸಿಕೊಳ್ಳಬೇಕು. ಈ ಆಸರೆ ಒಂದು ಕೈ ದಂಡವಾಗಿರಬಹುದು, ಅಥವಾ ಒಂದು ಸೇತುವೆಯೇ ಆಗಿರಬಹುದು. ಇಲ್ಲಿನ ಅಭಿಪ್ರಾಯವೆಂದರೆ, ಇಂತಹ ಕಾರ್ಯವಿಧಾನದ ಮೇಲೆ ಆಧಾರ ಪಡದಿದ್ದರೆ, ವ್ಯಕ್ತಿಯು ಕಂದಕದೊಳಗೆ ಬೀಳಬಹುದು ಅಥವಾ ವ್ಯವಹಾರಿಕ ಜೀವನದ ಕ್ಲೇಶಗಳಲ್ಲಿ ಮುಳುಗಬಹುದು. ವ್ಯವಹಾರ್ಯ ಅಸ್ತಿತ್ವವು ಮಿತಿಯಿಂದ ಕೂಡಿದೆ, ನಶ್ವರ, ಅನಿಶ್ಚಯ ಮತ್ತು ವಿನಾಶ ಹಾಗೂ ಸಾವಿಗೆ ಈಡು ಮಾಡುತ್ತದೆ; (ಮೃತ್ಯು) ಅದನ್ನು ಮೀರಿ ಮುನ್ನಡೆಯಬೇಕೆಂದರೆ ನಾವು ಬೇರೆಯದನ್ನು ಉಪಯೋಗಿಸಬೇಕು, (ಅಮೃತ) ಅದುವೇ ಪ್ರಣವ[11].

---

[10] ಸ್ವದೇಹ ಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಂ ।
ಧ್ಯಾನ ನಿರ್ಮಥನಾಭ್ಯಾಸಾತ್ ದೇವಂ ಪಶ್ಯೇನ್ನಿಗೂಢವತ್''

[11] ಅಮೃತಂ ವೈ ಪ್ರಣವಃ । ಅಮೃತೇನೈವ ತನ್ ಮೃತ್ಯುಂ ತರತಿ । ತದ್ಯಥಾ ಮಂತ್ರೇಣ ವಾಗರ್ತಂ ಸಂ ಕ್ರಮೇತ ಏವಂ ತತ್ ಪ್ರಣವೇನಾಪ ಸಂತನೋತಿ (ಮಂತ್ರೇಣ ಸೇತುನಾ ದಂಡೇನ ವಾ)

ಈ ಬ್ರಾಹ್ಮಣವು ಓಂಕಾರವನ್ನು ಮತ್ತಷ್ಟು ವಿವರಿಸುತ್ತಾ, ಇದು ಸಕಲ ಅಸ್ತಿತ್ವದ ಕ್ಲೇಶಗಳಿಗೆ ಖಂಡಿತವಾದ ಚಿಕಿತ್ಸೆಯಾಗಿದೆ, ಹಾಗೂ ಜೀವನದ ಸಕಲ ಭ್ರಷ್ಟತೆಯ ಪ್ರಭಾವಗಳಿಂದ ಪ್ರತ್ಯೇಕವಾಗಿ ಇರುವುದಕ್ಕೆ ಇದು ಸಹಾಯಕವೆಂದು ಹೇಳುತ್ತದೆ (1.30)[12].

ಪ್ರಶ್ನೋಪನಿಷತ್ತು (5.5), ಅವಿನಾಶಿ ಮತ್ತು ನಿರ್ವಿಕಲ್ಪ ಶಬ್ದ (ಅಕ್ಷರ) ವಾದ ಓಂಕಾರವನ್ನು, ಅದು ಮೂರು ಛಂದೋಗತಿಗಳಿಂದ (measures) ರಚಿತವಾಗಿದೆಯೆಂದು ವಿವರಿಸುತ್ತದೆ (ಅ, ಉ, ಮ); ಮತ್ತು ಯಾರು ಈ ಓಂಕಾರದೊಂದಿಗೆ ಆ ಪರಮಾತ್ಮನನ್ನು (ಬ್ರಹ್ಮ) ಧ್ಯಾನಿಸುತ್ತಾರೋ ಅವರು, ಎಲ್ಲ ಪ್ರಕಾಶ ಹಾಗೂ ಶಕ್ತಿಗೆ ಮೂಲವಾದ ಆ ಸೂರ್ಯನಲ್ಲಿ ನೆಲೆಸುತ್ತಾರೆ[13] :

ಭಗವದ್ಗೀತೆಯು (17.23) ಬ್ರಹ್ಮವನ್ನೇ ಸೂಚಿಸುವ ಮತ್ತೆರಡು ನಿರೂಪಣೆಗಳಿಂದ ಓಂಕಾರವನ್ನು ಗುರುತಿಸುತ್ತದೆ; ತತ್ (ಅದು) ಮತ್ತು ಸತ್ (ಸತ್ಯ)[14].

'ತತ್' ಪದವು ಕಣ್ಣಿಗೆ ಕಾಣಿಸದ ಅಥವಾ ನಿರ್ದಿಷ್ಟ ಗುಣಗಳಿಲ್ಲದಿರುವ, ಮತ್ತು ವಿಭಿನ್ನ ಮತ್ತು ವಿಶಿಷ್ಟವೆಂದು ದೃಗ್ಗೋಚರವಾಗದ, ಪದಗಳಲ್ಲಿ ವಿವರಿಸಲಾಗದ ಯಾವುದನ್ನೋ ಪ್ರತಿನಿಧಿಸುತ್ತದೆ. ಅದು ನಮ್ಮ ಎದುರಿನಲ್ಲಿಯೇ ಇದೆ (ಇದಂ). ''ಅದು'' ನಿರಂತರವಾದ ಸಾನಿಧ್ಯದಲ್ಲಿ ಅಡಗಿದೆ. ಅದು 'ಅದು'ವೇ ಆಗಿದೆ (ಕಣ್ಣಿಂದ ಮರೆಮಾಚಿದೆ) ಏಕೆಂದರೆ ಅದು ಪರೋಕ್ಷವಾಗಿದೆ. ಮತ್ತೊಂದು ಪದ ''ಸತ್'' ಇದು ಪೂರ್ಣವಾಗಿ ನಿರ್ವಿಕಾರ, ವ್ಯತ್ಯಾಸ ಹೊಂದುವುದಿಲ್ಲ, ತ್ರಿಕಾಲದಲ್ಲಿಯೂ ಒಂದೇ ತೆರನಾಗಿರುತ್ತದೆ (ತ್ರಿಕಾಲ-ಅಬಾಧಿತ) - ಭೂತ, ವರ್ತಮಾನ, ಭವಿಷ್ಯತ್ ಎಂಬುದನ್ನು ಸೂಚಿಸುತ್ತದೆ. ಅದು ಒಂದೇ ರೀತಿಯಲ್ಲಿರುತ್ತದೆ (ಸಮಂಬ್ರಹ್ಮ). (ಮಾಂಡೂಕ್ಯ ಉ.)[15]

ૐ

---

[12] ಆತ್ಮ ಭೈಷಜ್ಯಂ ಆತ್ಮ ಕೈವಲ್ಯಂ ಓಂಕಾರಃ।

[13] ಯಃ ಪುನರೇತಂ ತ್ರಿಮಾತ್ರೇಣೋಮಿತ್ಯನೆನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ ಸ ತೇಜಸಿ ಸೂರ್ಯೇ ಸಂಪನ್ನಃ ॥ (ಪ್ರಶ್ನೋಪನಿಷತ್ 5.5)

[14] ಓಂ ತತ್ಸದಿತಿ ನಿರ್ದೇಶೋಬ್ರಹ್ಮಣಸ್ತ್ರಿವಿಧಃ ಸ್ಮೃತಃ ॥

[15] ಭೂತಂ ಭವದ್ಭವಿಷ್ಯದಿತಿ ಸರ್ವಂ ಓಂಕಾರ ಏವ। ಯಚ್ಚಾನ್ಯತ್ರ ತ್ರಿಕಾಲಾತೀತಂ ತದಪ್ಯೋಂಕಾರ ಏವ। (ಮಾಂಡೂಕ್ಯ ಉಪನಿಷತ್ 1)

4. ಯೋಗಸೂತ್ರದಲ್ಲಿ ''ಓಂ''

ಯೋಗಸೂತ್ರದಲ್ಲಿ ಚರ್ಚಿಸಲಾಗಿರುವ ಓಂಕಾರವು ''ಈಶ್ವರ ಪ್ರಣಿಧಾನ'ದ (ಭಕ್ತಿಪೂರ್ವಕವಾಗಿ ದೇವರನ್ನು ಸಮೀಪಿಸುವ ಮಾರ್ಗ) ಸಂದರ್ಭಾನುಸಾರವಾಗಿದೆ.

ಪತಂಜಲಿಯು ತನ್ನ ಯೋಗ ಸೂತ್ರದಲ್ಲಿ (ಸಮಾಧಿ ಪಾದ 24) ಪ್ರಣವವನ್ನು ಪ್ರತಿನಿಧಿಸುವ ''ಈಶ್ವರ'' ನನ್ನು ಸಾಧಾರಣ ಮನುಷ್ಯನ ಬೇಡಿಕೆಗಳು, ಅಗತ್ಯಗಳು, ದೌರ್ಬಲ್ಯಗಳು ಮತ್ತು ಸಂಬಂಧಗಳು ಮುಟ್ಟಲಾರದಂತಹ ಒಂದು ವಿಶಿಷ್ಟವರ್ಗದ ಮಾನವತೆಯ ದೃಷ್ಟಿಯಲ್ಲಿ ವಿವರಿಸುತ್ತಾನೆ[1].

ಮಾನವನಾಗಿದ್ದರೂ, ಅವನು ಸಾಮಾನ್ಯ ವ್ಯಕ್ತಿಯಲ್ಲ. ಅವನು ವ್ಯವಹಾರಿಕ ಒತ್ತಡಗಳಿಂದ ಪ್ರತ್ಯೇಕವಾಗಿದ್ದಾನೆ (ಕೇವಲಿ). ಅವನು ಉತ್ಕೃಷ್ಟದ ಉತ್ತುಂಗದ ಸ್ಥಿತಿಯನ್ನು ಮುಟ್ಟಿದ್ದಾನೆ (ನಿರತಿಶಯ ಚರಮಕಾಷ್ಟಪ್ರಾಪ್ತ) ಮತ್ತು ಸರ್ವಜ್ಞತೆಯ ಮೂಲವಾಗುತ್ತಾನೆ (ಯೋಗಸೂತ್ರ 25). ಅವನು ಗುರುವೂ ಆಗಿದ್ದಾನೆ. ಅವನ ಪ್ರಭಾವವು ಕಾಲಾಂತರದಲ್ಲಿ ಅವಿಚ್ಛಿನ್ನವಾಗಿದೆ (ಯೋ. ಸೂ. 26). ಅವನು ''ಅಂತರ್ಯಾಮಿ'', ಪ್ರಣವ ಮಂತ್ರದ ಋಷಿವರ್ಯ. ''ಈಶ್ವರ''ನೆಂದು ವಿವರಿಸಲಾಗಿರುವ ಇಂತಹ ಮಾನವನು ವಾಸ್ತವದಲ್ಲಿ ಓಂ ಶಬ್ದದ ಸಂಕೇತವಾಗಿದ್ದಾನೆ[2].

''ಓಂ'' ಶಬ್ದವನ್ನು ಪೂಜ್ಯಭಾವದಿಂದ ಜಪಿಸಬೇಕು, ಮತ್ತು ಅದರ ವಿಸ್ತೃತ ಅರ್ಥವನ್ನು ರಚನಾತ್ಮಕವಾಗಿ ಪುನರಾವರ್ತಿಸಬೇಕು (ಅರ್ಥ-ಭಾವನ)[3].

ಮೊದಲನೆಯದು, ಪೂರ್ವಾಗ್ರಹರಹಿತ ಹಾಗೂ ಚಿತ್ತಭ್ರಮಣೆ ರಹಿತ ಪರಿಪೂರ್ಣ ಚಿತ್ತೈಕಾಗ್ರತೆ. ಎಲ್ಲ ಪ್ರಾಪಂಚಿಕ ವ್ಯವಹಾರಗಳಿಂದ ಹಿಂದೆ ಸರಿಯುವಿಕೆ, ಮತ್ತು ಮಂತ್ರಜಪದ ಭಾವನೆಯಲ್ಲಿ ಆಳವಾಗಿ ಮಗ್ನವಾಗುವಿಕೆಯನ್ನು ಸೂಚಿಸುತ್ತದೆ[4].

ಎರಡನೆಯದು, ಧ್ಯಾನದಲ್ಲಿ ಲೀನವಾಗುವುದರ ಪರ್ಯಾಯವಾಗಿದೆ (ಧ್ಯಾನ, ಧಾರಣ, ಸಮಾಧಿ) ಈ ಎಲ್ಲ ಆತ್ಮ ಸಂಯಮದ ಧ್ಯಾನದ ಪ್ರಕ್ರಿಯೆಗಳನ್ನು ಪ್ರಭುವಿನ ಮೇಲಿನ ಶ್ರದ್ಧಾಯುಕ್ತ ಗಮನವೆಂದು ಯೋಗ ಗ್ರಂಥವು ವಿವರಿಸುತ್ತದೆ. (ಈಶ್ವರ ಪ್ರಣಿಧಾನ). ಇಲ್ಲಿ ಈಶ್ವರ ಎಂದರೆ

---

[1] ಕ್ಲೇಶಕರ್ಮ ವಿಪಾಕಾಶಯ್ಯೆರ ಪರಾಮೃಷ್ಟಃ ಪುರುಷ ವಿಶೇಷ ಈಶ್ವರಃ ॥

[2] (ಯೋ. ಸೂ. 27) ತಸ್ಯ (ಈಶ್ವರಸ್ಯ) ವಾಚಕಃ ಪ್ರಣವಃ ॥

[3] (ಯೋ. ಸೂ. 28) ತಜ್ಜ ಪಸ್ತದರ್ಥಭಾವನಂ ॥

[4] ಮನಃ ಸಂಹೃತ್ಯ ವಿಷಯಾನ್ ಮಂತ್ರಾರ್ಥಗತ ಮಾನಸಃ । ನ ದೃತಂ ನ ವಿಲಂಬಂ ಚ ಜಪೇನ್ ಮೌಕ್ತಿಕಹಾರವತ್ ॥

ದೇವರೆಂದು ಅರ್ಥವಲ್ಲ, ಆದರೆ ಬಿಡುಗಡೆ ಹೊಂದಿದ ಮಾನವನ ಆತ್ಮವೆಂದು ಅರ್ಥವಾಗಿದೆ. ಅದು ಅಭೀಪ್ಸುವಿನ ಕಲ್ಪನಾತ್ಮಕ ಮಾದರಿಯಾಗಿ ಅವನನ್ನು ಪ್ರೇರೇಪಿಸಿ ಮಾರ್ಗದರ್ಶನ ನೀಡುತ್ತದೆ. ಪೂರ್ಣವಾಗಿ ಎಲ್ಲ ಒತ್ತಡಗಳಿಂದ, ಶೃಂಖಲೆಗಳಿಂದ ಅಜ್ಞಾನದಿಂದ ಬಿಡುಗಡೆ ಹೊಂದುವುದರ ಅರ್ಥದಲ್ಲಿ ಅವನು ಪ್ರಭುವಾಗಿದ್ದಾನೆ; ಅವನು ಸತ್ವ, ರಜಸ್ ಹಾಗೂ ತಮಸ್ಸಿನ ಗುಣಗಳ ತಡೆಗಳಿಂದ ದೂರವಾಗಿದ್ದಾನೆ. ಇಂತಹ ಪ್ರಭುತ್ವ (ಐಶ್ವರ್ಯ) ಮತ್ತು ಸರ್ವಜ್ಞತೆ (ಜ್ಞಾನ)ಗಳ ನಡುವೆ ಕೊನೆಮೊದಲಿಲ್ಲದ ಹಾಗೂ ಅಸ್ತಿತ್ವದಲ್ಲಿರುವ ಒಂದು ಸಂಬಂಧವಿದೆ.

ಯೋಗ ಸೂತ್ರದಲ್ಲಿನ ''ಈಶ್ವರ''ನು ಒಂದು ಆಸ್ತಿಕತೆಯ ಚೇತನವನ್ನು ಸೂಚಿಸುವುದಿಲ್ಲ ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗಿದೆ. ಅದು ವಿಶಿಷ್ಟಸ್ಥಿತಿಯಲ್ಲಿರುವ ಮಾನವನ ಆತ್ಮನಿಗೆ ಅನ್ವಯಿಸುತ್ತದೆ. 'ಋಷಿ' ಎಂಬ ಅಭಿವ್ಯಕ್ತತೆಯು ಇದೇ ಅರ್ಥವನ್ನು ನೀಡುತ್ತದೆ. ಅವನು ಪ್ರಾಪಂಚಿಕ ವ್ಯವಹಾರಗಳಿಂದ ಪ್ರತ್ಯೇಕಗೊಂಡು ಸ್ವತಂತ್ರನಾಗಿದ್ದಾನೆ (ಕೈವಲ್ಯ). ಮಂತ್ರದರ್ಶನದ ಸಮಯದಲ್ಲಂತೂ ಸ್ವತಂತ್ರವಾಗಿಯೇ ಇರುತ್ತಾನೆ. ಅವನು ತನ್ನ ಪ್ರವೃತ್ತಿಯಲ್ಲಿ ಇಂದ್ರಿಯಾತೀತನಾಗಿ ಓಂಕಾರದ ಪರಾದೃಷ್ಟಿಯಲ್ಲಿ ಏಕವಾಗುತ್ತಾನೆ. ನಂತರ ತನ್ನ ಈ ಅನನ್ಯತೆಯಿಂದ ಹೊರಬಂದು, ತಕ್ಷಣವೇ ತನ್ನ ಅನುಭವವನ್ನು ತನ್ನ ಸೂಕ್ಷ್ಮ ಅಂತರ್ದೃಷ್ಟಿಯನ್ನು ಪ್ರತಿನಿಧಿಸುವ ಮಂತ್ರಗಳ ರೂಪದಲ್ಲಿ ವ್ಯಕ್ತಪಡಿಸುತ್ತಾನೆ. ಇದರಲ್ಲಿ ಅವನೊಬ್ಬ ಕವಿಯಾಗಿದ್ದಾನೆ; ಕವಿಯೆಂಬ ಪದವನ್ನು ಋಷಿಗೆ ಅನ್ವಯಿಸುವಂತೆ ವೇದಗಳಲ್ಲಿ ಪದೇ ಪದೇ ಬಳಸಲಾಗಿದೆ. ತನ್ನ ಅನನ್ಯ ನಿಶ್ಚಿತ ಅನುಭವಕ್ಕೆ ತಕ್ಕಂತೆ ಅವನ ಕವಿತ್ವದ ವಚನಗಳು ಛಂದಸ್ಸಾಗಿದೆ. ಅವು ಅವನ ಸ್ವ ಇಚ್ಛೆಯಿಂದ ರೂಪುಗೊಳ್ಳುತ್ತವೆ ಮತ್ತು ಪರಿಣಾಮಕಾರಿಯಗಿ ಆಕರ್ಷಣೀಯವಾಗಿರುತ್ತವೆ, (ಆದ್ದರಿಂದ ಅದನ್ನು ಛಂದಸ್ಸೆನ್ನುತ್ತಾರೆ). ಮಂತ್ರಗಳಲ್ಲಿ ವಿವರಿಸುವ ಅಥವಾ ಸ್ತುತಿಸಲ್ಪಡುವ ದೇವತೆ, ವಿಭಿನ್ನ ರೂಪದ 'ಪರಾ-ಓಂ' ಆಗಿದೆ. ಋಗ್ವೇದದ ಸಕಲ ದೇವತೆಗಳೂ ಒಂದೇ ಸತ್ಯವಾಗಿದ್ದಾರೆ ಮತ್ತು ಅವರನ್ನು ಘನತೆವೆತ್ತ ಋಷಿಗಳು ವಿಭಿನ್ನ ರೀತಿಯಲ್ಲಿ ವರ್ಣಿಸುತ್ತಾರೆ [5, 6].

ಇದು ತನ್ನ ಅಲೌಕಿಕತೆಯ ಆಯಾಮದ ''ಓಂ'' ಆಗಿದೆ. ಆದ್ದರಿಂದ ಇದನ್ನು ''ತಾರಾ'' ಎನ್ನುತ್ತಾರೆ [7,8]:

ॐ

[5] ಏಕಂ ಸದ್ವಿಪ್ರಾ ಬಹುಧಾ ವದಂತಿ ।। ಋಗ್ವೇದ (1.164.46)

[6] (10.114.5) ಕವಯೋ ವಚೋಭಿರೇಕಂ ಸಂತಂ ಬಹುಧಾ ಕಲ್ಪಯಂತಿ ।।

[7] ಅತ ಏವ ತಾರಾಯೇದ್ಯದ್ಭವಾಂಬೋಧೇಃ ಸ್ವಜಪಾಸಕ್ತ ಮಾನಸಾನ್ ।

[8] ತರಸ್ತಾರ ಇತಿ ಖ್ಯಾತಃ ।।

5. ಜೈನ ಹಾಗೂ ಬೌದ್ಧ ಧರ್ಮಗಳಲ್ಲಿ ''ಓಂ''

ಜೈನ ಭಕ್ತರಿಗೆ ''ಓಂ'' ಶಬ್ದವು ಅತಿ ಪವಿತ್ರವಾದ ಏಕಾಕ್ಷರೀ ಮಂತ್ರವಾಗಿದೆ. ಇದು ಇತರೆ ಹಲವಾರು ಮಂತ್ರಗಳಿಗಿಂತಲೂ ಶ್ರೇಷ್ಠವಾಗಿದೆ, ಉದಾಹರಣೆಗೆ,

ಪಂಚಣಮೋಕ್ಕಾರ ಮಂತ್ರ (35 ಅಕ್ಷರಗಳು)

ಣಮೋ ಅರಿಹಂತಾಣಾಂ। ಣಮೋ ಸಿದ್ಧಾಣಂ। ಣಮೋ ಆಯಿರಿಯಾಣಂ।

ಣಮೋ ಉವಜ್ಝಾಯಣಂ। ಣಮೋ ಲೋಯೆ ಸವ್ವಸಾಹುಣಂ॥

ಇದರ ಸಂಕ್ಷಿಪ್ತ ರೂಪ (ಆರು ಅಕ್ಷರಗಳು) : ಅರಿಹಂತ ಸಿದ್ಧ।

ಅಥವಾ ಇನ್ನೊಂದು ಸಂಕ್ಷಿಪ್ತ ರೂಪ (5 ಅಕ್ಷರಗಳು) : ಅ-ಸಿ-ಆ-ಉ-ಸಾ

ಅಥವಾ 4 ಅಕ್ಷರಗಳು : ಅರಿಹಂತ್

ಅಥವಾ 2 ಅಕ್ಷರಗಳು : ಸಿದ್ಧ

ಮಹಾಯಾನ ಬೌದ್ಧ ಧರ್ಮದಲ್ಲಿ, ಪ್ರಸಿದ್ಧವಾದ ವಜ್ರ-ಜಪವು ''ಓಂ'' ನಿಂದಲೇ (ಉಚ್ಛ್ವಾಸಕ್ಕೆ) ಪ್ರಾರಂಭವಾಗುತ್ತದೆ, ಉಸಿರನ್ನು ನಿಲ್ಲಿಸಿಕೊಳ್ಳಲು 'ಆಹ್' ಎಂದು ಪರಿವರ್ತಿತವಾಗುತ್ತದೆ. ನಂತರ ''ಹುಂ'' (ನಿಶ್ವಾಸಕ್ಕೆ) ಎಂದು ರೂಪಾಂತರವಾಗುತ್ತದೆ. ''ಓಂ'' ಅನ್ನು ಗಂಟಲಿನ - ಕೇಂದ್ರದಲ್ಲಿ (ವಿಶುದ್ಧ) ''ಆಹ್'' ಅನ್ನು ನಾಭಿ ಕೇಂದ್ರದಲ್ಲಿ (ಮಣಿಪೂರ) ಮತ್ತು ''ಹುಂ'' ಅನ್ನು ಹೃದಯ - ಕೇಂದ್ರದಲ್ಲಿ (ಅನಾಹತ) ಉಚ್ಚರಿಸುವ ಪದ್ಧತಿಯಿದೆ. ''ಓಂ'' ಕೆಂಪು ಬಣ್ಣದ್ದಾಗಿದೆ (ಗಾಳಿಯ ಮೂಲಾಂಶ, ಪ್ರಾಣ) ''ಆಹ್'' ಹಳದಿ (ಅಗ್ನಿ ಮೂಲಾಂಶ) ಮತ್ತು 'ಹುಂ' ನೀಲಿ ಮಿಶ್ರಿತ ಕಪ್ಪು (ನೀರಿನ ಮೂಲಾಂಶ) ಸಾಗರ, ಶೂನ್ಯ. ''ಆಹ್''ನ ಮೂಲಕ ''ಓಂ'' 'ಹುಃ' - ಆಗಿ ಪರಿವರ್ತನೆಗೊಳ್ಳುವುದಕ್ಕೆ ''ಪರಾವೃತ್ತಿ'' ಎನ್ನುತ್ತಾರೆ. ''ಓಂ'', ಶೂನ್ಯತೆಯಾಗಿದೆ - ಅಸ್ತಿತ್ವದ ಮೂರು ಅಂಶಗಳ ಮೂಲ ಗುಣಗಳಿಂದ ಕೂಡಿದೆ. ಕಾಯಾ (ಅಸ್ತಿತ್ವ, ಭೌತಿಕತೆ) ವಾಕ್ (ಅಭಿವ್ಯಕ್ತತೆ; ಶಬ್ದ) ಮತ್ತು ಚಿತ್ತ (ಪ್ರಜ್ಞೆ). ಈ ಮೂರು ಅಂಶಗಳಿಂದ, ಓಂ, ಆಹ್ ಮತ್ತು ಹುಃ ಹೊರಹೊಮ್ಮುತ್ತವೆ (ಯಥಾಕ್ರಮಂ, ನಿಶ್ಚಾರಯಾಮಾಸ). ವಜ್ರಯಾನದ ಮತ್ತಷ್ಟು ದೃಷ್ಟಿಕೋನಗಳು ಮುಂದೆ ಕಾಣಸಿಗುತ್ತವೆ. ''ಓಂ ಮಣಿಪದ್ಮೇ ಹುಂ'' ಎನ್ನುವ ವಜ್ರ-ಜಪವು ವಿಶಿಷ್ಟವಾಗಿ ಟಿಬೆಟ್ಟಿನಲ್ಲಿ ಜನಪ್ರಿಯವಾಗಿದೆ. ಇಲ್ಲಿ ''ಮಣಿ'' ಎಂಬ ಪದವು ಅಸಾಧಾರಣ, ಪ್ರಕಾಶಯುತ ಮತ್ತು ಶುದ್ಧ ಮುತ್ತು (pearl) - ಇವು ''ಓಂ''ನೊಂದಿಗೆ ಅನನ್ಯತೆಯನ್ನು ಹೊಂದಿವೆ. ಇದನ್ನು ಹೃದಯ - ಕಮಲದಲ್ಲಿ (ಪದ್ಮೇ), ಉಸಿರಿನ ನಿಶ್ವಾಸದ ಮೂಲಕ (ಹುಃ) ಗ್ರಹಿಸಬೇಕು. ಪ್ರಜ್ಞೆಯನ್ನು ಶೂನ್ಯವನ್ನಾಗಿಸಿ ಮತ್ತು ಆಲೋಚನಾರಹಿತವನ್ನಾಗಿಸಿ ಗ್ರಹಿಸಬೇಕು.

ॐ

6. ಓಂ - ಮಾನವನ ಆಸರೆ

ನಂತರದ ಪದ್ಧತಿಗಳಲ್ಲಿ ಓಂಕಾರವನ್ನು ವೇದಗಳೊಂದಿಗೆ ಬಹು ಸಮೀಪವಾಗಿ ತಪ್ಪದೆ ಜೋಡಿಸಲಾಗುತ್ತಿದೆ. ಒಂದು ಮಂತ್ರದ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ''ಓಂ'' ಉಚ್ಚಾರಣೆ ಆಗಬೇಕೆಂಬ ಮನುವಿನ (ಸ್ಮೃತಿ 2.74) ನಿಯಮವಿದೆ[1]. ಮಂತ್ರಕ್ಕೆ ಮುನ್ನ ಉಚ್ಚರಿಸುವ ಓಂಕಾರವು ಮಂತ್ರದ ಸಾಮರ್ಥ್ಯದ ಸೋರುವಿಕೆಯನ್ನು ತಡೆಗಟ್ಟುತ್ತದೆ; ಕೊನೆಯಲ್ಲಿ ಹೇಳುವ ಓಂಕಾರವು, ಮಂತ್ರದ ಶಕ್ತಿಯನ್ನು ಸಂರಕ್ಷಿಸುವಲ್ಲಿ ಸಹಾಯವಾಗುತ್ತದೆ. ಇದನ್ನು ತಾಂತ್ರಿಕವಾಗಿ ''ಸಂಪುಟ'' ಎನ್ನುತ್ತಾರೆ.

ಸಕಲ ವೇದಗಳೂ ಓಂಕಾರದಿಂದಲೇ ಪ್ರಾರಂಭ ಆಯಿತೆನ್ನುತ್ತಾರೆ (ಪ್ರಣವಾದ್ಯಾಸ್ತ ಥಾ ವೇದಾಃ) ಮತ್ತು ವೇದ ಜ್ಞಾನದ ಅಂತಿಮ ಹೇಳಿಕೆಯೂ 'ಓಂ' ಕಾರವೇ ಆಗಿದೆ.

ಗೃಹಸ್ಥರು ಮಂತ್ರಗಳನ್ನು ''ಓಂ'' ನಿಂದಲೇ ಪ್ರಾರಂಭಿಸಬೇಕು; ಇಲ್ಲವಾದಲ್ಲಿ ಮಂತ್ರ ಪಠಣವು ವ್ಯರ್ಥವಾಗುತ್ತದೆ. ವನಗಳಲ್ಲಿ ವಾಸಮಾಡುವವರು ಮತ್ತು ತಪಸ್ವಿಗಳು ಮಂತ್ರಗಳನ್ನು ''ಓಂ''ನಿಂದ ಪ್ರಾರಂಭಿಸಿ ''ಓಂ'' ನಿಂದಲೇ ಅಂತ್ಯಗೊಳಿಸಬೇಕು[2].

ವೇದಗಳನ್ನು 'ಓಂಕಾರ''ದೊಂದಿಗೆ ಜೋಡಿಸುವ ಈ ಆಗ್ರಹ ಯಾಕೆ ? (ಸರ್ವ ಮಂತ್ರ ಪ್ರಯೋಗೇಷು ಪ್ರಣವಃ ಪ್ರಥಮಃ ಸ್ಮೃತಃ). ಕಠೋಪನಿಷತ್ತು (1.2.15)[3] ಇದಕ್ಕೊಂದು ವಿವರಣೆಯನ್ನು ನೀಡುತ್ತದೆ. ಎಲ್ಲ ವೇದಗಳು ಮಾನವನಿಗೆ ಯಾವ ಅಡಿಪಾಯವನ್ನು ಸೂಚಿಸಿವೆಯೋ, ಅದು ಸಂಕ್ಷಿಪ್ತವಾಗಿ ''ಓಂ'' ಆಗಿದೆ. ಈ ಆಸರೆಯನ್ನು ಪಡೆಯಲು ಎಲ್ಲ ರೀತಿಯ ಕಠಿಣ ವ್ರತಗಳನ್ನು ಕೈಗೊಳ್ಳುತ್ತಾರೆ; ಇದಕ್ಕಾಗಿಯೇ ಬ್ರಹ್ಮವನ್ನು ಹೊಂದಲು ದೃಢ ಪ್ರಯತ್ನವಾಗಿದೆ.

ಇದಕ್ಕೆ ಅನುಗುಣವಾದ ಶ್ಲೋಕ ಭಗವದ್ಗೀತೆಯಲ್ಲಿದೆ:

ವೇದವನ್ನು ಬಲ್ಲವರು ಯಾವುದನ್ನು ಅಕ್ಷರವೆಂದು ಹೇಳುತ್ತಾರೆಯೋ, ವೈರಾಗ್ಯಶೀಲರಾದ ಯತಿಗಳು ಯಾವುದನ್ನು ಪ್ರವೇಶಿಸುತ್ತಾರೆಯೋ, ಯಾವುದನ್ನು ಇಚ್ಛಿಸುತ್ತಾ ಬ್ರಹ್ಮಚರ್ಯವನ್ನು

---

[1] ಬ್ರಹ್ಮಣಃ ಪ್ರಣವಃ ಕುರ್ಯಾದಾದಾವಂತೆ ಚ ಸರ್ವದಾ । ಸ್ರವತ್ಯನೋಂಕೃತಂ ಪೂರ್ವಂ ಪುರಸ್ತಾಚ್ಚ ವಿಶೀರ್ಯತಿ ॥

[2] ಪ್ರಣವಾದ್ಯಂ ಗೃಹಸ್ಥಾನಂ ತಚ್ಛೂನ್ಯಂ ನಿಷ್ಫಲಂ ಭವೇತ್ ।
ಆದ್ಯಂತಯೋರ್ವನ ಸ್ಥಾನಾಂ ಯತೀನಾಂ ಮಹತಾಮಪಿ ॥

[3] ಸರ್ವೇ ವೇದಾ ಯತ್ಪದ ಮಾಮನಂತಿ । ತಪಾಂಸಿ ಸರ್ವಾಣಿ ಚ ಯದ್ವದಂತಿ ॥
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ । ತತ್ತೇ ಪದಂ ಸಂಗ್ರಹೇಣ
ಬ್ರವೀಮ್ಯೋಮಿ ತ್ಯೇತತ್ ॥

ಆಚರಿಸುತ್ತಾರೆಯೋ, ಆ (ಅಕ್ಷರ) ಪದವನ್ನು ನಿನಗೆ ಸಂಗ್ರಹವಾಗಿ ಹೇಳುತ್ತೇನೆ[4]. (ಭಗವದ್ಗೀತೆ 8.11)

ಪ್ರಶ್ನೋಪನಿಷತ್ತು (5.7) ವೇದಗಳ ಸಂದರ್ಭದಲ್ಲಿ 'ಓಂಕಾರ'ದ ಪಾತ್ರವನ್ನು ಮತ್ತಷ್ಟು ಸ್ಪಷ್ಟಗೊಳಿಸುತ್ತದೆ[5]. ಋಗ್ವೇದದಿಂದ ವ್ಯಕ್ತಿಯು ನಮ್ಮ ಮುಂದಿರುವ ಈ ಪ್ರಪಂಚವನ್ನು ಹೊಂದುತ್ತಾನೆ; ಯಜುರ್ವೇದದಿಂದ ಮಧ್ಯ-ಲೋಕವನ್ನೂ, ಸಾಮವೇದದದಿಂದ ಸ್ವರ್ಗಲೋಕವನ್ನೂ ಪಡೆಯುತ್ತಾನೆ. ಇವೆಲ್ಲವೂ ''ಓಂಕಾರ''ಒಂದರಿಂದಲೇ ಮಾತ್ರ ಸಾಧ್ಯ. ಇದಕ್ಕಾಗಿಯೇ, ಓಂಕಾರವು, ಬ್ರಹ್ಮ, ಪ್ರಶಾಂತ, ಅವಿನಾಶಿ, ನಿರ್ವಿಕಲ್ಪ, ಅಮರ, ಭಯರಹಿತ ಮತ್ತು ಆತಂಕರಹಿತ, ಮೇಲಾಗಿ ಸರ್ವೋತ್ಕೃಷ್ಟ. ಮೂರು ವೇದಗಳು ಮೂರು ಲೋಕಗಳನ್ನು ಪ್ರತಿನಿಧಿಸುತ್ತವೆ; ಅವು ಮೂರು ಪವಿತ್ರ ಉಚ್ಚಾರಣೆಗಳನ್ನು ವ್ಯಕ್ತಪಡಿಸುತ್ತವೆ (ವ್ಯಾಹೃತಿ) :

ಭೂಃ, ಭುವಃ, ಸುವಃ (ಅಥವಾ ಸ್ವಃ) - ಇವು ಓಂಕಾರದ ಮೂರು ಅಂಶಗಳಾದ ಅ, ಉ, ಮ್ ಅನ್ನು ಸಂಕೇತಿಸುತ್ತವೆ.

ಓಂಕಾರದ ಮೂರು ಅಂಶಗಳು 'ಅ, ಉ, ಮ' ಮೂರು ವ್ಯಾಹೃತಿಗಳನ್ನು ಪ್ರತಿನಿಧಿಸುತ್ತವೆ (ತಂತ್ರಸಾರ 1.14.15). ಗಾಯತ್ರಿಯಲ್ಲಿ 24 ಅಕ್ಷರಗಳು. ಇವು 24 ವರ್ಣ ದೇವತೆಗಳ ಸಂಕೇತ. ಗಾಯತ್ರಿಯ ಮೂರು ಪಾದಗಳು ಅದರಿಂದ ಉತ್ಪತ್ತಿಯಾಗುತ್ತವೆ. ಪುರುಷ ಸೂಕ್ತವು ಗಾಯತ್ರಿಯ ನುಡಿಗಳಾಗಿವೆ. ವೇದಗಳು ಸಾಂಪ್ರದಾಯಕ ದೃಷ್ಟಿಯಿಂದ ಪುರುಷ ಸೂಕ್ತದ ವಿಸ್ತೃತ ವಿವರಣೆಯಾಗಿದೆ[6].

ಆದರೆ, ಮೂರು ವೇದಗಳಿಂದ ಓಂಕಾರದ ಮೂರು ಅಂಶಗಳು ಹೇಗೆ ಉತ್ಪತ್ತಿಯಾದುವೋ ಹಾಗೆಯೇ ವ್ಯಾಹೃತಿಗಳೂ ಮೂರು ವೇದಗಳಿಂದ ಉತ್ಪತ್ತಿಯಾದುವೆಂದು (ಕ್ಷೀರವನ್ನು ಕರೆದ ಹಾಗೆ) ಮನುವು ಹೇಳುತ್ತಾನೆ. (ಸ್ಮೃತಿ 2.76)[7]:

ಮೂರು ವ್ಯಾಹೃತಿಗಳೊಡನೆ ನಾಲ್ಕನೆಯದನ್ನಾಗಿ (ತಾರಾ) ತೊಡಗಿಸಿಕೊಳ್ಳುವುದರ

---

[4] ಯದಕ್ಷರಂ ವೇದವಿದೋ ವದಂತಿ ವಿಶಂತಿ ಯದ್ಯತಯೋ ।
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇಪದಂ ಸಂಗ್ರಹೇಣ ಪ್ರವಕ್ಷ್ಯೇ ॥

[5] ಋಗ್ಭಿರೇತಂ ಯಜುಭಿರಂತರಿಕ್ಷಂ ಸ ಸಾಮಭಿರ್ಯತತ್ ಕವಯೋ ವೇದಯಂತೇ ।
ತಮೋಂ ಕಾರೇಣೈವಾ ಆಯತನೇನಾನ್ವೇತಿ ವಿದ್ವಾನ್ ಯತ್ತ ಚ್ಛಾಂತಮಜರಮಮೃತಮ ಭಯಂ ಪರಂಚೇತಿ ॥

[6] ವೇದಮಾತಾ ತು ಗಾಯತ್ರೀ ದ್ವಿಗುಣದ್ವಾಶಕ್ಷರಾತ್ । ಚತುರ್ವಿಂಶನ್ ಮೂರ್ತಯೋಸ್ಯಾ ಕಥಿತಾ ವರ್ಣದೇವತಾಃ ।
ತದ್ಭೇದಂ ಪೌರುಷಂ ಸೂಕ್ತಂ ವೇದಾಃ ಪುರುಷಸೂಕ್ತಗಾಃ ॥

[7] ಅಕಾರಂ ಚಾಪ್ಯುಕಾರಂ ಚ ಮಕಾರಂ ಚ ಪ್ರಜಾಪತಿಃ । ವೇದತ್ರಯಾನ್ನಿರದೃಹದ್ ಭೂರ್ಭುವಂ ಸುವರಿತಿ ॥

ಸಂಸ್ಕಾರದ ಅವಶ್ಯಕತೆಯ ದೃಷ್ಟಿಯಿಂದ ಪ್ರಣವವನ್ನು ಒಟ್ಟಾಗಿ (ಸಮಾಸ) ಮತ್ತು ಪ್ರತ್ಯೇಕವಾಗಿ (ವ್ಯಾಸ) ಉಪಯೋಗಿಸಿಕೊಳ್ಳಲಾಗುತ್ತದೆ (ತಂತ್ರಸಾರ 1.38)[8].

ಈ ರೀತಿಯಾಗಿ ಪ್ರಣವವನ್ನು ವ್ಯಾಹೃತಿಯೊಂದಿಗೆ ಸೇರಿಸಿಕೊಳ್ಳುವುದು, ಎಲ್ಲ 3 ವೇದಗಳ ಪಠಣದ ಸಂಕೇತವಾಗಿದೆ. ಆದರೂ ಪ್ರಣವದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಲಾಗಿದೆ.

ಪ್ರಣವವನ್ನು ಒಂದು ಸಂಪೂರ್ಣ ಮಂತ್ರವೆಂದೇ ಪರಿಗಣಿಸಲಾಗಿದೆ ಎಂಬುದನ್ನು ಗಮನಿಸಬೇಕಾಗಿದೆ. ಏಕೆಂದರೆ, ಇದು ಪ್ರಸ್ತುತ ವಿಷಯ ಹಾಗೂ ಉತ್ಕೃಷ್ಟ ಚೇತನವಾದ ಬ್ರಹ್ಮಕ್ಕೆ ನೇರವಾಗಿ ಅನ್ವಯಿಸಲ್ಪಟ್ಟಿದೆ. (ವಿಹಿತಾರ್ಥಿ ಸ್ಯಾಭಿಧಾಯ ಕೋ ಮಂತ್ರಃ); ಮತ್ತು ಇದು ಮುಂಬರುವ ಪರಿಣಾಮಕ್ಕೆ ಸೂಚಕವಾಗಿದೆ (ಮನನ ಹೇತುರ್ಮಂತ್ರಃ). ಈ ಮಂತ್ರವು, ನಾವು ಏನನ್ನು ಮಾಡಬೇಕು, ಹೇಗೆ ಮಾಡಬೇಕು, ಮಾನಸಿಕ ಕ್ರಿಯೆಯ ಧ್ಯೇಯವೇನು ಎಂಬುದನ್ನು ತಿಳಿಸುತ್ತದೆ; ಮತ್ತು ಎಲ್ಲ ಮಂತ್ರಗಳೂ ಅಂತಿಮವಾಗಿ ಬ್ರಹ್ಮವನ್ನು ಸೂಚಿಸುತ್ತವೆ (ಪರಮ ಚೇತನ)[9].

ಒಂದು ಮಂತ್ರವಾಗಿ, ಪ್ರಣವವು ಮಾಂತ್ರಿಕ ವರ್ಣದ ನಾಲ್ಕು ಹಂತಗಳ ವೃದ್ಧಿಯನ್ನು ಹೊಂದಿದೆ :

(ಅ) ಎಲ್ಲ ಶಬ್ದಗಳ (ಪರಾ) ಅಗಾಧವಾದ ಮೂಲ ;
(ಆ) ಸಾವಧಾನದ ಉಚ್ಚಾರಣೆ (ಪಶ್ಯಂತಿ);
(ಇ) ಅಶ್ರವ್ಯ ಉಚ್ಚಾರಣೆ (ಮಧ್ಯಮ); ಮತ್ತು
(ಈ) ಶ್ರವ್ಯ ಉಚ್ಚಾರಣೆ (ವೈಖರಿ)

ಪ್ರಣವ ಮಂತ್ರದ ಋಷಿ, ಛಂದಸ್ಸು ಮತ್ತು ಆ ಮಂತ್ರದ ದೇವತೆಗಳನ್ನೂ ತಿಳಿಸಲಾಗಿದೆ (ಯತಿ - ಪ್ರಣವ - ಕಲ್ಪ)[10].

ಪ್ರಣವ ಮಂತ್ರಕ್ಕೆ ಋಷಿಯು ''ಅಂತರ್ಯಾಮಿ''. ಛಂದಸ್ಸು ದೇವಿ ಗಾಯತ್ರಿ (3 ಪಾದಗಳಲ್ಲಿ ಮತ್ತು 24 ವರ್ಣಗಳಲ್ಲಿ) ಮತ್ತು ದೇವತೆ ''ಪರಮಾತ್ಮ''ನನ್ನು ಆಶ್ರಯಿಸುತ್ತಾರೆ (ಪ್ರತಿಪಾದ್ಯ). ಋಷಿ ಮತ್ತು ಪರಮಾತ್ಮ ಒಂದೇ ಆಗಿದ್ದಾರೆ. ಅವರು ಒಂದೇ ಆತ್ಮದ ಎರಡು ರೂಪಗಳಾಗಿದ್ದಾರೆ (ಅಂತರಾತ್ಮ ಮತ್ತು ಪರಮಾತ್ಮ). ಬಾಹ್ಯ ಪ್ರಪಂಚದಲ್ಲಿ ವ್ಯವಹರಿಸಿದರೂ, ಅವನನ್ನು ಎಲ್ಲ ಕಾಲಕ್ಕೂ ಬದಲಾವಣೆರಹಿತನೆಂದು ವಿವರಿಸಲಾಗಿದೆ[11]:

---

[8] ಸಮಾಸ ವ್ಯಾಸ ಯೋಗೇನ ವ್ಯಾಹೃತೀನಾಂ ಚತುಷ್ಟಯಂ । ತಾರೇಣ ವ್ಯಾಹೃತೀ ಭಿಶ್ಚ ಜ್ಞೇಯಾನ್ಯಂಗನಿ ಪಂಚಚ ॥

[9] ಕ್ರಿಯಾ ಕರ್ಮೇಜ್ಯ ಕರ್ತೃಣಾ ಮಾರ್ಥಂ ಮಂತ್ರೋವದದತ್ಯಾಥ । ಮನನಾತ್ ತ್ರಾಣನಾತ್ ಮಂತ್ರಃ ಸರ್ವ ವಾಚ್ಯಸ್ಯ ವಾಚಕಃ ॥ (ರಾಮ-ಪೂರ್ವ-ತಪಿನ್ಯುಪನಿಷತ್)

[10] ಋಷಿ ಛಂದೋ ದೈವತಾನಿ ಬ್ರೂಯಾತ್ ತಸ್ಯ ಕ್ರಮಾತ್ ಸುಧೀಃ । ಅಂತರ್ಯಾಮಿಾರುತಿ ಗಾಯತ್ರಿ ಪರಮಾತ್ಮೇತಿ ಅನುಕ್ರಮಾತ್ ॥

[11] ಯಚ್ಚಾಪ್ನೋತಿ ಯದಾದತ್ತೆ ಯಚ್ಚಾತ್ತಿ ವಿಷಯಾನಿಹ । ಯಚ್ಚಾಸ್ಯ ಸಂತತೋ ಭಾವಸ್ತಸ್ಮಾದಾತ್ಮೇತಿ ಭಣ್ಯತೇ ॥

ವ್ಯವಹಾರ್ಯ ಅಸ್ತಿತ್ವ (ಅಪರಾ ಅಥವಾ ವ್ಯವಹಾರ) ಮತ್ತು ವಿಶ್ವಾತೀತ ಅಸ್ತಿತ್ವಕ್ಕೂ (ಪರಾ ಅಥವಾ ಪರಮಾರ್ಥ) ನಡುವಿನ ವ್ಯತ್ಯಾಸವು ಭಾರತೀಯ ಚಿಂತನೆಗೆ ಮೂಲಸೂತ್ರವಾಗಿದೆ. ಉಪನಿಷತ್ತುಗಳಲ್ಲಿ ಈ ಅಭಿಪ್ರಾಯವನ್ನು ಮತ್ತೆ ಮತ್ತೆ ಕಾಣುತ್ತೇವೆ; ಋಗ್ವೇದದ ಮಂತ್ರಗಳಲ್ಲಿಯೂ ಸಹ ಇದನ್ನು ಕಾಣಬಹುದು. ಉಪನಿಷತ್ತುಗಳು ಬ್ರಹ್ಮದ ಎರಡು ರೂಪಗಳನ್ನು ತಿಳಿಸುತ್ತವೆ (ದ್ವೆ ಬ್ರಹ್ಮಣೀ ವೇದಿತವ್ಯೆ ಪರಾ ಚೈವಾಪರಾ ಚ). ಬ್ರಹ್ಮದ ವಾಚಕವಾದ ಪ್ರಣವವೂ ಸಹ ಈ ಎರಡು ಆಯಾಮಗಳನ್ನು ಹೊಂದಿರುವುದನ್ನು ಪ್ರಶ್ನೋಪನಿಷತ್ತು (5.2) ಸೂಚಿಸುತ್ತದೆ (ಓಂಕಾರೋ ಬ್ರಹ್ಮವಾಚಿ)[12]:

ಸರ್ವೋತ್ಕೃಷ್ಟ ಮತ್ತು ಏಕಮೇವ ಸತ್ಯವಾದ ಓಂಕಾರವನ್ನು ನುಡಿಗಳಲ್ಲಿ ವ್ಯಕ್ತ ಪಡಿಸದಿದ್ದರೂ ಅದು ಸಕಲ ಅಸ್ತಿತ್ವಗಳಲ್ಲಿ ಅಂತರ್ಗತವಾಗಿ ಅಡಗಿದೆ. ಇದು ಪರಾ (ಅಲೌಕಿಕ ದೃಷ್ಟಿ). ಆದರೆ ಮೂರು ಘಟಕಗಳು, ಮೂರು ವ್ಯಾಹೃತಿಗಳು, ಗಾಯತ್ರಿಯ ಮೂರು ಪಾದಗಳು, ಅಸ್ತಿತ್ವದ ಮೂರು ಲೋಕಗಳು, ಮೂರು ವೇದಗಳು - ಇವೆಲ್ಲವೂ ಓಂಕಾರದ ಉಚ್ಚಾರಣೆಗಳಾಗಿವೆ (ವ್ಯವಹಾರ್ಯ, ಅಪರಾ). ಇನ್ನೊಂದು ರೀತಿಯಲ್ಲಿ ಮಂತ್ರದ ಪ್ರಾರಂಭದಲ್ಲಿ ಉಚ್ಚರಿಸುವ ಓಂಕಾರವು ''ಪರಾ'' ದೃಷ್ಟಿಯಾಗಿದೆ, ಮತ್ತು ಮಂತ್ರವೇ ಅದರ ''ಅಪರಾ'' ದೃಷ್ಟಿಯಾಗಿದೆ. ಈ ವಿಕಸನದ ಅರ್ಥದಲ್ಲಿ ಮಂತ್ರವನ್ನು ಬ್ರಹ್ಮವೆನ್ನುತ್ತಾರೆ.

ಐಹಿಕ ರೂಪ ಮತ್ತು ನಾಮಗಳನ್ನು ಅವುಗಳ ಅಂತಿಮ ಸ್ರೋತಗಳಾಗಿ (sources) ಪರಿವರ್ತನೆಗೊಳಿಸುವುದು ಉದ್ದೇಶವಾಗಿದೆ ಎಂಬುದನ್ನು ಗಮನಿಸಬೇಕು. ರೂಪವು ಶಿವನಿಂದ ಸೃಷ್ಟಿಯಾಗುತ್ತದೆ ಮತ್ತು ನಾಮವು ಅಂತಿಮವಾಗಿ ಶಕ್ತಿಯಿಂದ ಜನ್ಯವಾಗುತ್ತದೆ. ''ಶಿವ''ನು ಪರಿಶುದ್ಧ ಪ್ರಜ್ಞೆಯಾಗಿದ್ದಾನೆ (ಸಮೃತ್, ಅಥವಾ ಆಕಾಶ), ಮತ್ತು ''ಶಕ್ತಿ''ಯು ಬಲ ಅಥವಾ ಸಾಮರ್ಥ್ಯವಾಗಿದೆ. ಮೂಲಭೂತ ಅಂಶಗಳಿಂದ ರಚಿತವಾದ ರೂಪಗಳೆಲ್ಲವೂ ಶೂನ್ಯದಲ್ಲಿ (ಆಕಾಶ) ಅದೃಶ್ಯವಾಗಿ ಶಿವನಲ್ಲಿ ವಿಲೀನವಾಗುತ್ತವೆ (ಆಕಾಶದ ಮೂಲಭೂತ ಒಡೆಯ) ಮತ್ತು ಉಚ್ಚಾರಣೆಯ ಮೂಲಕ ರಚಿತಗೊಂಡ ಎಲ್ಲ ಶಬ್ದಗಳು, ಅಂತಿಮವಾಗಿ ಶಬ್ದರಹಿತ ಶಬ್ದದೊಳಗೆ ವಿಲೀನವಾಗುತ್ತದೆ (ಶಬ್ದ), ಅದೇ ''ಶಕ್ತಿ''. (ಧ್ಯಾನಬಿಂದು ಉಪನಿಷತ್)[13].

ಈ ಪರಿವರ್ತನೆಯು ವ್ಯವಹಾರ್ಯ ಅಸ್ತಿತ್ವದಿಂದ (ಅಪರಾ) ವಿಶ್ವಾತೀತ ಸತ್ಯ (ಪರಾ) ದೆಡೆಗಿನ ಚಾಲನೆಯಾಗಿದೆ. ಇದು ತಪಸ್ಸಿನ (ಆತ್ಮ ಸಂಯಮದ) ವಿಕಸನೆ ಎಂದು ಪರಿಗಣಿಸಿದರೆ, ಅಲೌಕಿಕ ಸತ್ಯವು ಬ್ರಹ್ಮವಾಗುತ್ತದೆ. ಇದು ವಿಕಾಸದ ಅಂತಿಮ ಹಂತದ ವಿಕಸನೆಯ ಅರ್ಥದಲ್ಲಿ ಅಲೌಕಿಕ ಸತ್ಯವು ಬ್ರಹ್ಮವಾಗಿದೆ (ಬೃಹೀ ವೃದ್ಧೌ)[14].

---

[12] ಏತದ್ವೈ ಸತ್ಯಕಾಮ ಪರಂ ಚಾಪರಂ ಬ್ರಹ್ಮ ಯದೋಂಕಾರಃ ॥

[13] ಸಶಬ್ದಂ ಚಾಕ್ಷರೆ ಕ್ಷೀಣೇ ನಿಃಶಬ್ದಂ ಪರಮಂ ಪದಮ್ ॥

[14] ಬೃಹೀ ವೃದ್ಧೌ। ಬೃಂಹತೇರ್ನೋಚ್ಚ॥

ಮನಿನ್ ಪ್ರತ್ಯಯಃ। ಬೃಂಹತಿ ವರ್ಧತೆ ಇತಿಯಃಬ್ರಹ್ಮ॥

ಇಲ್ಲಿ ಪ್ರಶ್ನ ಉಪನಿಷದ್ ಮಂತ್ರದ ಋಷಿಯು, ಅದರ ಸ್ಪಷ್ಟೋಕ್ತಿಯ ರೂಪಕ್ಕೆ (ಬ್ರಹ್ಮ) ಕಾರಣವಾಗಿದ್ದಾನೆ. ವಾಸ್ತವವಾದ ಅಪೌರುಷೇಯತೆಯ ಮೂಲವು ಅದರ ಪರಾದೃಷ್ಟಿಯಾದ ಓಂಕಾರವಾಗಿದೆ. ಏಕೆಂದರೆ, ಮಂತ್ರದ ವಿಕಸಿತ ರೂಪವು ಮಾನವ ಮಾಧ್ಯಮದ್ದು ಎಂಬುದು ನಿಸ್ಸಂದಿಗ್ಧವಾಗಿದೆ (ಅಪರಾ ದೃಷ್ಟಿ). ಓಂಕಾರದ ಪರಾದೃಷ್ಟಿಯ ಋಷಿಯು ಆಂತರಿಕ ನಿಯಂತ್ರಕನಾದ (ಅಂತರ್ಯಾಮಿ) ತಾನೇ ಸ್ವಯಂ ಆಗಿದ್ದಾನೆ - ಪರಮಾತ್ಮನ ವಿಶ್ವಾತೀತ ದೃಷ್ಟಿಯೊಡನೆ ಅನನ್ಯವಾಗಿದ್ದಾನೆ. ಇದರಲ್ಲಿ ಮಾನವನ ಕೈವಾಡವಿಲ್ಲ, ಅವನಿಂದ ಆದುದೂ ಅಲ್ಲ (ಆದ್ದರಿಂದ ಅನಾದಿ); ಇದು ಅನಂತ ಮತ್ತು ನಿತ್ಯವಾಗಿದೆ. ಇದು ತನ್ನಂತಾನೇ ಉದ್ಭವಿಸುತ್ತದೆ, ಮತ್ತು ವಿವೇಚನೆಯಿಂದಾದ ಪ್ರೇರಣೆಯಲ್ಲ. ಇದು ಅಕ್ಷರ (ವರ್ಣ) ಮತ್ತು ಪದರೂಪದಲ್ಲಿ ಉಚ್ಚರಿಸುವ ಓಂಕಾರವಲ್ಲ. ನಿಜವಾದ ಓಂಕಾರವು ಮಾನವ ಶರೀರವೂ ಸೇರಿದಂತೆ ಎಲ್ಲ ಕಡೆಯಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಪ್ರತಿಧ್ವನಿಸುತ್ತದೆ.

ॐ

7. ಪ್ರಣವ-ಜಪ

ಈ ಸಂದರ್ಭದಲ್ಲಿ ಪ್ರಣವ ಜಪದ ತಂತ್ರವು ವೈಖರಿ ಆಯಾಮದ ಉಚ್ಚಾರಣೆಯಲ್ಲಿ (ಅಂದರೆ ವಾಕ್ತಂತುಗಳು, ಗಂಟಲು ಮತ್ತು ಬಾಯಿಯಿಂದ ಉದ್ದೇಶಪೂರ್ವಕವಾಗಿ ಉತ್ಪನ್ನವಾಗುವ ಶ್ರವ್ಯ ಶಬ್ದಗಳು) ಪ್ರಾರಂಭಗೊಂಡು, ಅಂತರ್ಮುಖವಾಗಿ ಮುಂದುವರೆಯುತ್ತದೆ ಎಂಬುದನ್ನು ಗಮನಿಸಬೇಕು. ಈ ಉಚ್ಚಾರಣೆಯು, ಸಂಯಮಗೊಳಿಸಿದ ಹಾಗೂ ಸೂಕ್ಷ್ಮವಾದ, ದೃಷ್ಟಿಗೋಚರ ಹಾಗೂ ಅಸ್ಫುಟವಾದ ಶಬ್ದ (ಪಶ್ಯಂತಿ)ದೊಳಗೆ ಪ್ರವೇಶಿಸಿ, ಅಂತಿಮವಾಗಿ ಹೃದಯದಲ್ಲಿ (ಹೃತ್-ಪರಾ-ವಾಕ್) ಸದಾ ಪ್ರತಿಧ್ವನಿಸುತ್ತಿರುವ ಓಂಕಾರದಲ್ಲಿ ವಿಲೀನವಾಗುತ್ತದೆ. ಇದು ಸಾಮಾನ್ಯ ಉಚ್ಚಾರಣೆಯ ಪ್ರವೃತ್ತಿಗೆ ವ್ಯತಿರಿಕ್ತವಾಗಿದೆ (ವ್ಯುತ್ ಕರ್ಮ) - ಇದು ''ಪರಾ'' ದಲ್ಲಿ ಉಗಮವಾಗಿ, ಹೊರಹೊಮ್ಮಿ ''ಪಶ್ಯಂತಿ'', ''ಮಧ್ಯಮ'' ಹಾಗೂ ''ವೈಖರಿ''ಯಲ್ಲಿ ಕ್ರಮವಾಗಿ ಚಲಿಸುತ್ತದೆ. ಇದು ಓಂಕಾರದ ಉಚ್ಚಾರಣೆಯನ್ನು ಚಿತ್ರಿಸಿದರೆ, ಇದರ ಹಿಮ್ಮುಖ ಕ್ರಮವು ಓಂಕಾರದ ಮೇಲಣ ಧ್ಯಾನವನ್ನು ಪ್ರತಿನಿಧಿಸುತ್ತದೆ.

ಇದು ಮಾಂಡೂಕ್ಯದಲ್ಲಿನ ಉಪಾಸನೆಯೊಡನೆ ಸದೃಶವಾಗಿದೆ. ಆತ್ಮವು (ಜೀವ) ಮೂರು ರೂಪಗಳನ್ನು ಧರಿಸುತ್ತದೆ. ಇವುಗಳನ್ನು ಪಾದಗಳು ಎನ್ನುವರು. ಬಲಗಣ್ಣಿನಲ್ಲಿ ಜಾಗ್ರತ (ಉದಾ : ಎಲ್ಲ ಇಂದ್ರಿಯಗಳು), ಕಂಠದಲ್ಲಿ ಸ್ವಪ್ನ, ಮತ್ತು ಹೃದಯದಲ್ಲಿ ಗಾಢನಿದ್ರೆ (ಸುಷುಪ್ತಿ) (ದಕ್ಷಿಣಾಕ್ಷಿಣಿ ವಿಶ್ವಸ್ಸೈ ಜಸಃ ಕಂಠೇ ಹೃದಿ ಪಾಜ್ಞಃ) ಓಂಕಾರವು ಈ ಪಾದಗಳಿಗೆ ಹೊಂದಿಕೆಯಾಗುವಂತೆ ಮೂರು ಮಾತ್ರೆಗಳಿಂದ ಕೂಡಿದೆ. ಉಪನಿಷತ್ತು : 'ಪಾದಾ ಮಾತ್ರಾಃ ಮಾತ್ರಾಶ್ಚ ಪಾದಾಃ' ಎಂದು ಹೇಳುತ್ತದೆ. ಇಲ್ಲಿ, ಓಂಕಾರದ ಮೇಲಣ ಧ್ಯಾನವು ನಾಭಿಯಿಂದ ಪ್ರಾರಂಭವಾಗುತ್ತದೆ (ನಾಭೌ ಅಕಾರಃ), ಹೃದಯದವರೆಗೆ ಹೋಗುತ್ತದೆ (ಹೃದಿ ಉಕಾರಕ) ಮತ್ತು ಶಿರವನ್ನು ಮುಟ್ಟುತ್ತದೆ (ಮೂರ್ಧ್ನಿ ಮಕಾರಃ)

ಪ್ರಶ್ನೋಪನಿಷತ್ತಿನ (5.1) ರೀತ್ಯ ಈ ಓಂಕಾರದ ಮೇಲೆಯೇ ಮಾನವನು ನಿರಂತರವಾಗಿ ಧ್ಯಾನಮಗ್ನನಾಗಿರಬೇಕು[1].

ಮಂತ್ರೋಚ್ಚಾರಣೆಯ (ಶಬ್ದ ಮತ್ತು ಅರ್ಥ) ರೂಪದ ಈ ಮಂತ್ರದ ಋಷಿಯು, ತನ್ನೆಲ್ಲಾ ಕಾರ್ಯಾಚರಣೆಯ ಆಯಾಮಗಳಲ್ಲಿ ಒಬ್ಬ ಮಾನವನೆಂಬುದರಲ್ಲಿ ಸಂಶಯವಿಲ್ಲ (ಆದ್ದರಿಂದ ಅವನನನ್ನು ಪುರುಷನೆನ್ನುತ್ತಾರೆ). ಆದ್ದರಿಂದ ಈ ಮಂತ್ರವು ಮಾನವ ಮೂಲವೆಂಬುದಾಗಿ (ಪೌರುಷೇಯ) ವಿವೇಕಯುಕ್ತವಾಗಿ ವಿವರಿಸಬಹುದು ಎಂದೆನಿಸುತ್ತದೆ. ಪ್ರಾರಂಭ ಮತ್ತು ಅಂತ್ಯದಲ್ಲಿನ ಓಂಕಾರವು ಮಂತ್ರೋತ್ಪತ್ತಿಯು ಓಂಕಾರದಿಂದಲೇ ಆಗಿ ಓಂಕಾರದಲ್ಲೇ ಲೀನವಾಗುತ್ತದೆ ಎಂಬುದನ್ನು ಸೂಚಿಸುತ್ತದೆ.

---

[1] ಅಥ ಹೈನಂ ಶೈಬ್ಯಃ ಸತ್ಯ ಕಾಮಂ ಪಪ್ರಚ್ಛ ಸಯೋಹವ್ಯೆ ತದ್ಭಗವನ್ ಮನುಷ್ಯೇಷು ಪ್ರಾಯಣಾಂತಮೋಂಕಾರ ಮಭಿಧ್ಯಾಯಿತ ॥

ಆದ್ದರಿಂದ ಸ್ವಾಭಾವಿಕವಾಗಿ ಓಂಕಾರವು ಮಂತ್ರವನ್ನು ವ್ಯಾಪಿಸಿ ಅದಕ್ಕೆ ಆಧಾರವಾಗಿದೆ. ಯಾವುದೇ ಶಬ್ದ ಅಥವಾ ಅಕ್ಷರಗಳಿಂದ ಮಂತ್ರಗಳು ರಚಿತವಾಗಿರಲಿ, ಅವುಗಳಿಗೆಲ್ಲ ಓಂಕಾರವೇ ಪ್ರಾಣವಾಗಿದೆ. ಸಂಸ್ಕೃತದ ಎಲ್ಲ ಐವತ್ತು ಅಕ್ಷರಗಳೂ ಓಂಕಾರದ ಮೊದಲಂಶವಾದ ''ಅ'' ನಿಂದಲೇ ಉತ್ಪತ್ತಿಯಾಗಿವೆ ಎಂದು ಪರಿಗಣಿಸಲಾಗಿದೆ. ಆದ್ದರಿಂದ ಎಲ್ಲ ಅಕ್ಷರಗಳ ಮೂಲವೂ ಓಂಕಾರದಲ್ಲಿದೆ [2].

ಮಂತ್ರಗಳನ್ನು ದೃಷ್ಟಿಸುವ ಅಥವಾ ದೃಗ್ಗೋಚರಗೊಳಿಸಿಕೊಳ್ಳುವ ಮಂತ್ರದ ಋಷಿಯನ್ನು (ಉದಾ : ವಿಶ್ವಾಮಿತ್ರ, ಅವನ ಪುತ್ರ ಮಧುಚ್ಛಂದಸ್, ಅಥವಾ ಯಾರೇ ಆಗಿರಲಿ) ಸಾಮಾನ್ಯ ಮಾನವನೆಂದು ಪರಿಗಣಿಸಬಾರದು (ಮಂತ್ರದ್ರಷ್ಟೃ). ಅವನು ಮಂತ್ರಗಳನ್ನು ಅಸಾಧಾರಣ ಸ್ಥಿತಿಯಲ್ಲಿ ಅಂತಃಪ್ರಕಾಶದಿಂದ ಉನ್ನತ ಮನೋಸ್ಥಿತಿಯಲ್ಲಿ ಮನೋಗೋಚರಗೊಳಿಸಿಕೊಳ್ಳುವಾಗ, ಅವನು ಸರ್ವಜ್ಞನಾಗಿರುತ್ತಾನೆ, ಮತ್ತು ಸಾಮಾನ್ಯವಾದ ಗ್ರಹಣ ಶಕ್ತಿಗೆ ಮೀರಿದ ವಿಷಯಗಳನ್ನು ಅರಿತಿರುತ್ತಾನೆ. ಅವನು ಈ ವ್ಯಾವಹಾರಿಕ (transactional) ಪ್ರಪಂಚದಿಂದ ದೂರವಾಗಿ ವಿಶ್ವಾತೀತ (transcendental) ಆಯಾಮಗಳ ಸತ್ಯತೆಯೊಂದಿಗೆ ಸಾಂಗತ್ಯ ಹೊಂದಿರುತ್ತಾನೆ. ಆ ಸ್ಥಿತಿಯಲ್ಲಿ ಅವನ ಪ್ರಜ್ಞೆಯು ಸಾಮಾನ್ಯ ಮಾನವನಂತಿರುವುದಿಲ್ಲ, ಮತ್ತು ಆ ಉನ್ನತ ಅಥವಾ ಸ್ವಾಮ್ಯತೆಯ ಸ್ಥಿತಿಯಲ್ಲಿ ಅವನ ಉಕ್ತಿಗಳನ್ನು ಮಾನವ ಮೂಲದ್ದೆಂದು (ಪೌರುಷೇಯ) ಹೇಳಲಾಗುವುದಿಲ್ಲ.

ॐ

[2] ಪಂಚಾಶದ್ವರ್ಣ ಭಿನ್ನಶ್ಚ ಸರ್ವ ಶಬ್ದಾ ಅತೋಪಿ । ಓಂಕಾರೇ ಸರ್ವಾ ವಾಕ್ ಸಂತೃಣ್ಣಾ ॥

8. ವೇದಾಂತದ ದೃಷ್ಟಿಕೋನ

ವೇದಾಂತ ಸೂತ್ರದಲ್ಲಿ (4.1.5), ವೇದಾಂತದ ದೃಷ್ಟಿಕೋನವು ನಿರ್ದಿಷ್ಟವಾಗಿ ರೂಪುಗೊಂಡಿದೆ. ಅದೇನೆಂದರೆ, ವ್ಯಕ್ತಿಯು ಸಕಲವನ್ನೂ ಪ್ರಮುಖವಾಗಿ ಪರಮಾತ್ಮನೆಂದೇ ಕಂಡುಕೊಳ್ಳಬೇಕು. ಬ್ರಹ್ಮದೃಷ್ಟಿರುತ್ಕರ್ಷಾತ್ ।

ಓಂಕಾರವನ್ನು ಅಲೌಕಿಕ (transcendental) ಹಾಗೂ ವ್ಯಾವಹಾರಿಕ (transactional) ಬ್ರಹ್ಮವೆಂದು ಪರಿಗಣಿಸಬೇಕು. ಮಾಂಡೂಕ್ಯ ಉಪನಿಷತ್ತು, ಓಂಕಾರವನ್ನು ''ಅಕ್ಷರ''ವೆಂದು ಪರಿಗಣಿಸಿ, ಅದನ್ನು ''ಏತತ್'' ಎಂದು ಹೃದಯವನ್ನೂ ''ಇದಂ ಸರ್ವಂ'' ಎಂದು ಬಾಹ್ಯ ಪ್ರಪಂಚವನ್ನೂ ಖಚಿತವಾಗಿ ಹೇಳಿರುವಾಗ, ಅದು ಅಲೌಕಿಕತೆ ಹಾಗೂ ವ್ಯಾವಹಾರಿಕತೆಯ ಅನನ್ಯತೆಯನ್ನು ಸೂಚಿಸುತ್ತದೆ. ಈ ಅರ್ಥದಲ್ಲಿ 'ಅಕ್ಷರ' ವೆಂಬ ನಿರೂಪಣೆಯು ನಾಲ್ಕು ಸೂಕ್ಷ್ಮ ವ್ಯತ್ಯಾಸದ ಅರ್ಥಗಳನ್ನು ಹೊಂದಿದೆ.

1. (ನ ಕ್ಷರ ತೀತಿ), ಕೃಶವಾಗುವುದಿಲ್ಲ, ಕ್ಷಯಿಸುವುದಿಲ್ಲ, ಬದಲಾವಣೆಯಾಗುವುದಿಲ್ಲ ಅಥವಾ ಸಾಯುವುದಿಲ್ಲ.

2. (ಅ + ಕ್ಷರತಿ) 'ಅ' ಎಂಬುದರಿಂದ ಸಕಲ ಇಂದ್ರಿಯಗೋಚರ ವಿಷಯಗಳೂ ಹೊರಹೊಮ್ಮುತ್ತವೆ, ಉತ್ಪತ್ತಿಯಾಗುತ್ತವೆ, ಕಂಡುಬರುತ್ತವೆ; ಮತ್ತು 'ಅ' ಎನ್ನುವುದು ಬ್ರಹ್ಮ (ಅಕಾರೋವೈ ವಿಷ್ಣುಃ).

''ಅ'' ಶಬ್ದವು ಕಂಠದಿಂದ ಹೊರಹೊಮ್ಮುತ್ತದೆ. ಇದು ನಾದವಾಗಿದೆ ಅಥವಾ ಅಭಿವ್ಯಕ್ತವಾಗದ ಸ್ವರಾಕ್ಷರವಾಗಿದೆ. ಇದು ಅತ್ಯಗತ್ಯವಾಗಿದೆ ಮತ್ತು ಎಲ್ಲ ಉಚ್ಚಾರಣೆಗಳಿಗೂ ಮೂಲವಾಗಿದೆ.

3. ವಾಕ್ಕಿನಿಂದ ರಚನೆಯಾಗಿರುವ ಪೂರ್ಣ ವ್ಯವಹಾರ್ಯ ಪ್ರಪಂಚವನ್ನು ಆವರಿಸಿರುವ ಅ+ಕ್ಷ+ರ, ಅ ಇಂದ ಕ್ಷ ವರೆಗಿನ ಸಂಸ್ಕೃತ ವರ್ಣಮಾಲೆಯ ಶಬ್ದವಾಗಿದೆ; ಮತ್ತು

4. ಅಕ್ಷ + ರ; ನಶಿಸದಂತಹ ಸಾಮರ್ಥ್ಯವು ಅಂತರ್ಗತ ಗೊಂಡಿರುವ (ಕಾರ್ಯಶೀಲತೆ - ಅಕ್ಷ - ಅರ್ಥದಲ್ಲಿ). ಎಲ್ಲ ವಿವಿಧ ಅನುಭವಗಳಲ್ಲಿಯೂ ನಿಸ್ಸಂದಿಗ್ಧವಾಗಿರುವ ಏಕಮೇವ ಪ್ರಜ್ಞೆಯೆಡೆಗೆ ಬೆರಳು ಮಾಡಿ ತೋರಿಸುತ್ತದೆ.

ಮೂರು ಅಕ್ಷರಗಳಿಂದ (ಅ, ಉ, ಮ್) ರಚನೆಯಾಗಿರುವ ''ಓಂ'' ಶಬ್ದವನ್ನು ತಂತ್ರದಲ್ಲಿ, ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ ಪರಮಾತ್ಮನೊಡನೆ (ಬ್ರಹ್ಮ) ಅನನ್ಯವಾಗಿ ಪರಿಗಣಿಸಲಾಗಿದೆ; ಮತ್ತು ಇದು ವ್ಯಾವಹಾರಿಕ ಅಸ್ತಿತ್ವದ ಆಯಾಮಕ್ಕೂ ಮೀರಿದುದಾಗಿದೆ [1].

---

[1] ತ್ರಯಕ್ಷರಾತ್ಮಕತಾರೇಣ ಪರೇಶಃ ಪ್ರತಿಪದ್ಯತೆ ।
ಪಾತಾ ಹರ್ತಾಚ ಸಂಸ್ರಷ್ಟಾ ಯೋ ದೇವಃ ಪ್ರಕೃತೇಃಪರಃ ॥

ಸರ್ವ ವ್ಯಾಪಕತೆಯಿಂದ ಮತ್ತು ಸ್ಪಂದನಗಳಿಂದ ಸಕಲ ಇಂದ್ರಿಯಗ್ರಾಹ್ಯ ಸೃಷ್ಟಿಗೆ ಕರ್ತನಾದ ಆ ಶಿವನೇ ಓಂಕಾರವೆಂದು ಯೋಗಶಾಸ್ತ್ರವು ತಿಳಿಸುತ್ತದೆ [2].

ಇದನ್ನು ಗ್ರಹಿಸಲು ಅಥವಾ ಇನ್ನಾವುದೇ ರೀತಿಯಿಂದ ನಿರ್ವಹಿಸಲು ಸಾಧ್ಯವಾದ ರೂಪಕ್ಕೂ ಮೀರಿದುದಾಗಿದೆ. ಆದ್ದರಿಂದ ಹೆಚ್ಚು ಪ್ರಾಮುಖ್ಯವಾಗಿದೆ [3].

ಈ ಸತ್ಯವು ಎಲ್ಲರ ಹೃದಯಾಂತರಾಳದಲ್ಲಿ 'ಅಡಗಿದೆ' ಎಂದು ಹೇಳಲಾಗಿದೆ; ಆದರೆ ಎಲ್ಲವೂ ಈ ಗೂಡಿನಲ್ಲಿ ವಿಶ್ರಾಂತಿ ಪಡೆಯುತ್ತದೆ, ಎಲ್ಲವೂ ಇದರಿಂದ ಹೊರಹೊಮ್ಮುತ್ತದೆ ಮತ್ತು ಇಲ್ಲಿಗೇ ಹಿಂದಿರುಗುತ್ತದೆ, ಮತ್ತು ಇದು ಎಲ್ಲದರ ಉದ್ದಗಲಗಳ ಎಳೆಗಳಾಗಿವೆ, ಎಲ್ಲವನ್ನೂ ವ್ಯಾಪಿಸಿದೆ. (ಶುಕ್ಲ ಯಜುರ್ವೇದ 32.8)[4]:

ವಿಶ್ವದ ಸರ್ವ ದೇವತೆಗಳೂ ಇದರಲ್ಲಿ ನಿವಾಸಿಸುತ್ತಾರೆ [5]. ಹಾಗೆಯೇ ಎಲ್ಲ ಮಂತ್ರಗಳೂ ತಮ್ಮ ಮೂಲವನ್ನು ಮತ್ತು ಪೂರ್ಣತೆಯನ್ನು ಪ್ರಣವದಲ್ಲೇ ಕಂಡುಕೊಳ್ಳುತ್ತವೆ; ಸಕಲ ಋಷಿವರ್ಯರು ತಮ್ಮ ಅಂತಿಮ ಅನನ್ಯತೆಯನ್ನು ಪ್ರಣವ ಮಂತ್ರದ ಅಂತರ್ಯಾಮಿಯಲ್ಲಿ ಕಂಡುಕೊಳ್ಳುತ್ತಾರೆ. ವೇದಗಳ ಅಪೌರುಷೇಯತೆಯ ರಹಸ್ಯವು ಇಲ್ಲಿ ಅಡಗಿದೆ.

ॐ

---

[2]ಕಾರ್ಯಂ ಯತ್ರ ವಿಭಾವ್ಯತೇ ಕಿಮಪಿ ತತ್ ಸ್ಪಂದೇನ ಸವ್ಯಾಪಕಂ । ಸೃಷ್ಟಿಶ್ಚೈವ ತಥೇವ ಮಾಕೃತಿವಿಶೇಷ ತ್ವಾದ ಭೂ ತ್‌ಸ್ಪಂದಿನೀ । ಶಬ್ದಶ್ಪೋ ಅಭವತ್ತದಾ ಪ್ರಣವ ಇತ್ಯೋಂಕಾರ ವಾಚ್ಯಃ ಶಿವಃ ॥

[3]ಅರೂಪವದೇವ ಹಿ ತತ್ ಪ್ರಧಾನತ್ವಾತ್ । (ವೇದಾಂತ ಸೂತ್ರ 3.2.14)

[4]ಓಂ ವೇನಸ್ತತ್ ಪಶ್ಯನ್ನಿಹಿತಂ ಗುಹಾ ಸದ್ಯತ್ರ ವಿಶ್ವಂ ಭವತ್ಯೇಕ ನೀಡಂ ।

ಯಸ್ಮಿನ್ನಿದಂ ಸಂ ಚ ವಿಚೈತಿ ಸರ್ವಂ ಸ ಓತಃಪ್ರೋತಶ್ಚ ವಿ ಭೂಃ ಪ್ರಜಾಸು ॥

[5]ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ । ಋಗ್ವೇದ (1.164.39).

9. ಋಗ್ವೇದದಲ್ಲಿ ವಿಶ್ವಾತೀತ ''ಓಂ''

ಈ ಸಂದರ್ಭದಲ್ಲಿ, ವಾಮದೇವ ಋಷಿಯ ಮಂತ್ರ ಋಗ್ವೇದ (4.58.1) ಸಾಕಷ್ಟು ಪ್ರಾಮುಖ್ಯತೆಯನ್ನು ಗಳಿಸುತ್ತದೆ[1]. ಇದು ವಿಶ್ವಾತೀತವಾದ (transcendental) ಓಂಕಾರವನ್ನು (ಪರಾ-ಪ್ರಣವ) ಸಮುದ್ರ, ಅಪರಿಮಿತ, ರೂಪರಹಿತ ಮತ್ತು ಸರ್ವವ್ಯಾಪಿ ಎಂದು ಹೆಸರಿಸಿದೆ. ಋಗ್ವೇದದಲ್ಲಿನ ಸಮುದ್ರದ ಚಿತ್ರಣವು ಪೃಥ್ವಿಯಿಂದ ಆಕಾಶದವರೆಗೆ ಆವರಿಸಿರುವ ಅಂತರಿಕ್ಷದ ಸಂಕೇತವಾಗಿದೆ (7.6.7, 8.102.4, 10.5.1 ಮತ್ತು 10.45.3). ಋಷಿಯ ಸ್ವಯಂ-ಮಂತ್ರವು ರಭಸದಿಂದ ಮುನ್ನುಗ್ಗುತ್ತಿರುವ ಅಲೆಯಂತಿದೆ (ಊರ್ಮಿ). ಇದು ವಿಶಿಷ್ಟವಾದ ಹಾಗೂ ಮಹತ್ತ್ವವಾದ ರೂಪವನ್ನು ಹೊಂದಿದೆ (ಇಲ್ಲಿ ಸ್ವಾದದ ಹರ್ಷೋನ್ಮಾದ, ಮಧು), ಮತ್ತು ಅದು ಗೋಚರವಾಗುವ ಪ್ರಕಾಶವನ್ನು ಸನಿಹಕ್ಕೆ ಆಕರ್ಷಿಸುತ್ತದೆ (ಉಪಾಂಶು). ಸಮುದ್ರವು ದೂರದಲ್ಲಿದ್ದರೂ ಅಲೆಗಳು ನಮ್ಮನ್ನು ತಲುಪುತ್ತವೆ. ಸಮುದ್ರವು ಅಮೃತ, ಆದರೆ ಅಲೆಯು ಮಿತಿಯುಳ್ಳದ್ದು ಹಾಗೂ ಅನಿತ್ಯ; ಅಲೆಗಳಿಗೆ ಏರಿಳಿತಗಳಿವೆ, ಅವು ಹುಟ್ಟುತ್ತವೆ ಮತ್ತು ಲಯವಾಗುತ್ತವೆ. ಆದರೆ ಅಲೆಯ ಉಬ್ಬರವು ಇಳಿದಾಗ ಅದು ಪುನಃ ಸಾಗರದೊಂದಿಗೆ ಮಿಳಿತಗೊಂಡು ಅಮೃತವಾಗುತ್ತದೆ. (ಅಮೃತತ್ವಂ ಸಮಾನಾತ್). ಮಂತ್ರವು ಪ್ರಣವದಿಂದ ಬಂದು ಅಶಾಶ್ವತವಾಗುತ್ತದೆ. ಆದರೆ ಅದು ಪ್ರಣವಕ್ಕೆ ಹಿಂದಿರುಗಿ ಅಮರವಾಗುತ್ತದೆ. ಇದೇ ಅಪೌರುಷೇಯತೆಯ ಮಹತ್ತ್ವ.

ಮಂತ್ರವು ಸಮುದ್ರದಲ್ಲಡಗಿರುವ ಪ್ರಕಾಶದ ಬಗ್ಗೆ ತಿಳಿಸುತ್ತಾ ಅದನ್ನೇ ಘೃತವೆನ್ನುತ್ತದೆ. ಹಲವಾರು ಅರ್ಥಗಳಲ್ಲಿ ಘೃತವೆಂಬ ಪದವು ಋಗ್ವೇದದಲ್ಲಿ ಅನೇಕ ಕಡೆ ಕಾಣಸಿಗುತ್ತದೆ. (ಉದಾ: 2.3.11, 2.5.6, 3.1.18, 3.27.5, 4.10.6, 5.11.1, 10.12.3, 10.51.8, 10.70.8, 10.91.15, 10.122.2 ಇತ್ಯಾದಿ). ಅದರ ಅರ್ಥವು ಬೆಳಕು, ಸ್ಪಷ್ಟತೆ, ಪ್ರಕಾಶ ಹಾಗೂ ಉಜ್ಜ್ವಲ. ಈ ಪ್ರಕಾಶವು ''ಒಂದೇ ಸತ್ಯ''ಕ್ಕೆ ಅನ್ವಯವಾಗುತ್ತದೆ (ಏಕಂಸತ್); ಇದು ಮಂತ್ರಗಳಲ್ಲಿ ಸ್ಪಂದಿಸುವ ದೈವೀಶಕ್ತಿಗಳಿಂದ ಮರೆಮಾಡಲ್ಪಟ್ಟಿದೆ (ಗುಹ್ಯಂ). ಇದು ದೈವೀಶಕ್ತಿಗಳಿಗೆ ಮಾತನಾಡಲು ನಾಲಿಗೆಯು (ಜಿಹ್ವ) ಸಿಕ್ಕಿದ ಹಾಗೆ ಆಗಿದೆ. ಅವುಗಳಿಂದ ''ಪರಾ'' ಆಯಾಮಗಳು ''ಅಪರಾ'' ಆಯಾಮಗಳಾಗಿ ಪರಿವರ್ತಿಸಲ್ಪಟ್ಟಿವೆ.

ಹಾಗಿದ್ದಾಗ್ಯೂ, ಅದು ವಾಸ್ತವವಾದ ನಾಭಿಯಾಗಿ, ಅಮೃತತ್ವದ ಮೂಲವಾಗಿ ಮುಂದುವರೆಯುತ್ತದೆ. ಅಲೆಗಳು ಸಮುದ್ರವನ್ನು ಅಡಗಿಸುತ್ತವೆ, ಆದರೆ ಸಮುದ್ರವೇ ಅಲೆಗಳಂತೆ ಕಾಣುತ್ತದೆ. ಛಂದಸ್ಸೆಂಬ ಪದದ ಅರ್ಥ ನಿಖರವಾಗಿ ಹೀಗಿದೆ: ಮಂತ್ರದ ಕ್ರಿಯಾರೂಪ ಸತ್ಯವನ್ನು

---

[1]ಸಮುದ್ರಾತ್ ಊರ್ಮಿರ್ಮಧುಮಾಂಗ್ ಉದಾರತ್ ಉಪಾಂಶುನಾ ಸಮಮೃತತ್ವಮ್ ಆನಟ್।
ಘೃತಸ್ಯ ನಾಮ ಗುಹ್ಯಂ ಯದಸ್ತಿ ಜಿಹ್ವಾ ದೇವಾನಾಮಮೃತಸ್ಯ ನಾಭಿಃ ॥

ಅಡಗಿಸುತ್ತದೆ (ಛಾದನೆ), ಆದರೆ, ಆಹ್ಲಾದಕತೆಯನ್ನು ಬಿಂಬಿಸುತ್ತದೆ[2]. ಸುವಿದಿತ ಹಾಗೂ ರಹಸ್ಯಾರ್ಥವುಳ್ಳ ಮಹತ್ತ್ವವಾದ ಇನ್ನೊಂದು ಮಂತ್ರವಿದೆ (4.58.3). ಮಂತ್ರವು ಉಸಿರಾಡುತ್ತದೆ ಎಂಬುದೂ ಸ್ಪಷ್ಟವಾದ ರಹಸ್ಯವಾಗಿದೆ. ಅದರಲ್ಲಿ ಉಲ್ಲೇಖಿಸಿರುವ ಅಗ್ನಿ, ಯಜ್ಞ, ಸೂರ್ಯ, ಶಬ್ದ-ಬ್ರಹ್ಮ ಇತ್ಯಾದಿಗಳು ಸೂಚಿಸುವ ಸಂಖ್ಯೆ ಮತ್ತು ಅಂಗಗಳನ್ನು ಆವರಿಸಿಕೊಂಡಿರುವ ಅಸ್ಪಷ್ಟತೆಯನ್ನು ಸಮರ್ಥಿಸಿಕೊಂಡಿದ್ದಾರೆ ಎಂಬುದನ್ನು ವ್ಯಾಖ್ಯಾನಕಾರರು ಕಂಡುಕೊಂಡಿದ್ದಾರೆ. ಮಂತ್ರದಲ್ಲಿನ ಮೊಟ್ಟ ಮೊದಲಿನ ಮಂತ್ರದಲ್ಲಿರುವ ''ಗುಹ್ಯಘೃತ'' (ಅಡಗಿರುವ ಪ್ರಕಾಶ) ಎಂಬುದರ ಮೇಲಣ ನಿರೂಪಣೆಯನ್ನು ಇಲ್ಲಿ ವಿವೇಚಿಸಬಹುದಾಗಿದೆ.

(4.5.8) ಮಂತ್ರದ ಅರ್ಥವು ಹೀಗೆ ಎಂದೆನಿಸುತ್ತದೆ : ಈ ವಿಚಿತ್ರ ವೃಷಭವು ಅನಿತ್ಯವಾದ ಜೀವಿಗಳನ್ನು (ಮರ್ತ್ಯಾಂಗ್ ಆವಿವೇಶ) ಪ್ರವೇಶಿಸುತ್ತದೆ, ಸದಾ ಗುಟುರು ಹಾಕುತ್ತದೆ (ರೋರವಿತಿ). ಇದನ್ನು ಪ್ರಕಾಶಮಾನವಾದ ಕ್ರೀಡಾಸಕ್ತ ಮಹಾನ್ ದೇವತೆ (ಮಹೋ ಮಹಾನ್ ದೇವಾಃ), ಎಂದು ವರ್ಣಿಸಲಾಗಿದೆ (ಶಬ್ದ ವ್ಯುತ್ಪತ್ತಿಯಲ್ಲಿ ದ್ಯೋತನ ಮತ್ತು ಕ್ರೀಡಾ ಎಂದು ಸೂಚಿಸುತ್ತದೆ). ''ದೇವತೆ''ಯೂ ಆದ ಈ 'ವೃಷಭ' ಯಾವುದು ? ಅದರ ಮುಂದಿನ ಮಂತ್ರ (4.58.4) ಇದನ್ನು ಅಂಧಕಾರದ ಶಕ್ತಿಗಳು ಕದ್ದು ಅಡಗಿಸಿಟ್ಟಿವೆ ಎಂದು ಹೇಳುತ್ತದೆ . ಅದು ಮಾನವ ಜೀವಿಗಳನ್ನು ಪ್ರವೇಶಿಸಿದರೂ ಅದು ಅಲ್ಲಿ ಅಡಗಿದೆ. ಇದು ರಹಸ್ಯವಾಗಿಯೇ ಉಳಿದಿದೆ.

''ವೃಷಭ''ವೆನ್ನುವ ಪದಕ್ಕೆ ''ಎತ್ತು'' ಎಂಬ ಸಾಮಾನ್ಯವಾದ ಅರ್ಥವಿದೆ. ಆದರೆ ಋಗ್ವೇದದ ಬಹಳಷ್ಟು ಉಲ್ಲೇಖಗಳು (1.36.8, 1.36.10, 1.140.2, 3.27.13, 4.3.7, 4.3.10, 10.11.6, 10.115.8 ಇತ್ಯಾದಿ) ಇದನ್ನು ಶಕ್ತಿ, ಪ್ರಭುತ್ವ, ಬಲ, ಭಾವೋದ್ರೇಕ ಮತ್ತು ಅಪಾರತೆಯ ಪ್ರತೀಕವೆಂದು ಸೂಚಿಸುತ್ತವೆ. ಇದು ''ಸಮುದ್ರ''ವೆಂಬ ಪದಕ್ಕೆ ಪರ್ಯಾಯ ಎಂಬುದನ್ನು ಸುಲಭವಾಗಿ ಕಂಡುಕೊಳ್ಳಬಹುದು. ಸಮುದ್ರದ ಭೋರ್ಗರೆಯುವ ಅಲೆಗಳಂತೆಯೇ ಎತ್ತಿನಿಂದಲೂ ಅಬ್ಬರವು ಹೊರಹೊಮ್ಮುತ್ತದೆ. ''ಎತ್ತಿನ ಗುಟುರು ಹಾಕುವಿಕೆಯು'' (1.140.6, 10.8.1) ಮಂತ್ರೋಚ್ಚಾರಣೆಯನ್ನು ಪ್ರತಿನಿಧಿಸುತ್ತದೆ (ಅಪರ ''ಓಂ'') ಮತ್ತು ''ಎತ್ತು'' ಪರ ''ಓಂ'' ಆಗಿದೆ. ಮಂತ್ರವು ಈ ರೀತಿ ''ಗುಟುರು'' ಹಾಕುವ ''ಎತ್ತ''ನ್ನು ವಿವರಿಸುತ್ತದೆ. ಅದಕ್ಕೆ ತಲೆಯಲ್ಲಿ ಸಮೃದ್ಧವಾದ ನಾಲ್ಕು ಕೊಂಬುಗಳಿವೆ (ಶೃಂಗ 4.58.2, 1.140.6, 5.2.9, 8.100.13).ಇಲ್ಲಿ ಓಂಕಾರ ಶಬ್ದದ ನಾಲ್ಕು ಅಂಶಗಳನ್ನು ಸೂಚಿಸಲಾಗಿದೆ. ಅ, ಉ, ಮ ಮತ್ತು ತುರ್ಯ. ಮೊದಲ ಮೂರು ಸ್ಥಿತಿಗಳು (ಅವಸ್ಥೆ), ನಾಲ್ಕನೆಯದು ಅವಸ್ಥೆಯನ್ನು ಮೀರಿದ ಅಸ್ತಿತ್ವವೇ ಆಗಿದೆ. ಈ ಉಲ್ಲೇಖವು ಅಸ್ತಿತ್ವದ ನಾಲ್ಕು ಬಗೆಯದಾಗಿದೆ. ಅದರಲ್ಲಿನ ಮೂರು ವ್ಯವಹಾರ್ಯವಾಗಿವೆ. ಜಾಗೃತಿ, ಕನಸು ಮತ್ತು ಗಾಢನಿದ್ರೆ. ಅದಕ್ಕೂ ಮೀರಿದ ಸ್ಥಿತಿ (ತುರ್ಯ), ಇಂದ್ರಿಯಾತೀತ ಸ್ಥಿತಿ (transcendental). ಇವುಗಳು ಕೊಂಬುಗಳ ಹಾಗೆ ಕೇವಲ ಸಹಜ ಹೊರ

ಶೃಂಗಾ ತ್ರಯೋ ಅಸ್ಯಪಾದಾ ದ್ವೇ ಶೀರ್ಷೇ ಸಪ್ತ ಹಸ್ತಾಸೋ ಅಸ್ಯ । ತ್ರಿದಾ ಬದ್ಧೊ
ವೃಷಭೋ ರೋರವೀತಿ ಮಹೋ ದೇವೋ ಮರ್ತ್ಯಾಂಗ್ ಆವಿವೇಶ ॥ (4.58.3)

ಬೆಳವಣಿಗೆ, ದೃಗ್ಗೋಚರ, ಅಭಿಜ್ಞೇಯ ಹಾಗೂ ಎಣಿಕೆಗೆ ಸಿಕ್ಕುವುದಾಗಿವೆ. ಪಾದಗಳು ಮೂರು (ಪಾದ, ಪಾದ್ಯತೆ ಅನೇನ ಎಂಬುದರಿಂದ ಬಂದುದು). ಮೂರು ವ್ಯಾಹೃತಿಗಳು (ಭೂಃ, ಭುವಃ ಮತ್ತು ಸುವಃ). ಇದು ನಮಗೆಲ್ಲರಿಗೂ ತಿಳಿದ ಹಾಗೆ ಮೂರು ಸ್ಥಿತಿಗಳಿಗೂ ಅನ್ವಯ (ಜಾಗೃತ, ಕನಸು ಮತ್ತು ನಿದ್ರೆ), ಮತ್ತು ಇವುಗಳ ಮೂಲಕ ನಾಲ್ಕನೆಯ ಸ್ಥಿತಿಯನ್ನು ಮುಟ್ಟುತ್ತೇವೆ (ತುರ್ಯ). ಆದ್ದರಿಂದ ಅವುಗಳನ್ನು ಪಾದಗಳೆಂದು ಕರೆಯಲಾಗಿದೆ. ಎರಡು ಶಿರಗಳು ಸ್ಪಷ್ಟವಾಗಿ ಅಸ್ತಿತ್ವದ ''ಪರಾ'' ಮತ್ತು 'ಅಪರಾ' ಆಯಾಮಗಳಾಗಿವೆ. ''ಏಳು'' ಹಸ್ತಗಳು (ಗ್ರಹಣ ದೃಷ್ಟಿಯುಳ್ಳ ಅಂಗಗಳು) ಪ್ರಣವ ಮತ್ತು ವ್ಯಾಹೃತಿಗಳ ಏಳು ಓಂಕಾರಗಳಿಗೆ ಅನ್ವಯಿಸುತ್ತವೆ :

ಓಂ (ಆದ್ಯೋಂಕಾರಃ ಪ್ರಣವಃ)
ಓ ಭೂಃ ಓಂ (ಸಂಪುಟ ವ್ಯಾಹೃತಿಃ)
ಓಂ ಭುವಃ ಓಂ (ಸಂಪುಟ ವ್ಯಾಹೃತಿಃ)
ಓಂ ಸುವಃ ಓಂ (ಸಂಪುಟ ವ್ಯಾಹೃತಿಃ)
ಏಕೋಂಕಾರ ಸಂಪುಟಾ ಚ ಷಡೋಂಕಾರೇತಿ ಸಾ ತ್ರಿಧಾ ॥

ಸಂಖ್ಯೆ ಏಳು, ನಾವು ನಮ್ಮನ್ನು ಏಳು ಇಂದ್ರಿಯಗಳ ಮೂಲಕ, ಬಾಹ್ಯಕ್ಕೆ - ವ್ಯಾವಹಾರಿಕ ಪ್ರಪಂಚಕ್ಕೆ ಚಾಚಿಕೊಳ್ಳುವುದಕ್ಕೆ ಅನ್ವಯವಾಗುತ್ತದೆ. ಅವು, ಐದು ಜ್ಞಾನಗ್ರಹಣದ ಇಂದ್ರಿಯಗಳಾಗಿವೆ (ನೇತ್ರಗಳು, ಕಿವಿಗಳು, ನಾಸಿಕ, ನಾಲಿಗೆ ಮತ್ತು ಚರ್ಮ), ಮನಸ್ಸು ಮತ್ತು ಬುದ್ಧಿ (ಇಚ್ಛಾಶಕ್ತಿಯ ಇಂದ್ರಿಯಗಳು). ಮೊದಲ ಐದು ಇಂದ್ರಿಯಗಳು ಜಾಗೃತ ಸ್ಥಿತಿಯನ್ನು ಸೂಚಿಸುತ್ತವೆ. ಆರನೆಯದು ಕನಸನ್ನು ಮತ್ತು ಏಳನೆಯದು ನಿದ್ರೆಯನ್ನು (ತಮಸ್) ಸೂಚಿಸುತ್ತದೆ.

''ಎತ್ತನ್ನು'' ಮೂರು ಗೂಟಗಳಿಗೆ ಕಟ್ಟಲಾಗಿದೆ (ಬದ್ಧಾಃ). ಓಂಕಾರವು (ಎತ್ತು) (4.58.3) ಮಂತ್ರದ ಮೂರು ಮಾತ್ರೆಗಳ ಮೇಲೆ ನಿಂತಿದೆ (ಅ, ಉ, ಮ). ಪ್ರಶ್ನ ಉ (5.3-5.5), ಈ ಪ್ರತಿಯೊಂದು ಮಾತ್ರೆಯ ಮೇಲಣ ಧ್ಯಾನವನ್ನು ತಿಳಿಯಪಡಿಸುತ್ತದೆ (ಏಕಮಾತ್ರಮಭಿಧ್ಯಾಯಿತ)[3], ಅವುಗಳಲ್ಲಿ ಎರಡರ ಮೇಲೆ ಒಟ್ಟಿಗೆ (ದ್ವಿಮಾತ್ರೇಣ ಮನಸಿ ಸಂಪದ್ಯತೆ)[4], ಮತ್ತು ಅವುಗಳ ಎಲ್ಲ ಮೂರರ ಮೇಲೆ (ತ್ರಿಮಾತ್ರೇಣ ಓಮಿತ್ಯೇತೇನೈವಾಕ್ಷರೇಣ)[5] ಅಂದರೆ ಅನುಕ್ರಮವಾಗಿ ಅ, ಉ ಮತ್ತು ಮ, ಮೇಲೆ 'ಓಂ'.

ॐ

---

[3] ಪ್ರಶ್ನ ಉಪನಿಷತ್ (5.3)

[4] ಪ್ರಶ್ನ ಉಪನಿಷತ್ (5.4)

[5] ಪ್ರಶ್ನ ಉಪನಿಷತ್ (5.5)

10. ಪ್ರಕಾಶದ ಅನಾವರಣ

ಮುಂದಿನ ಮಂತ್ರವು (4.58.4) ವಾಸ್ತವವಾದ ಪ್ರಕಾಶವು ಮೂರುಸ್ತರಗಳ ಅಸತ್ಯ ಪ್ರಕಾಶದಿಂದ (ಪಣಿಭಿಃ) ಮುಚ್ಚಿರುವುದಕ್ಕೆ ಅನ್ವಯವಾಗಿದೆ; ಮತ್ತು ಜ್ಞಾನಿಗಳು ಆ ಪ್ರಕಾಶವನ್ನು (ಘೃತ), ಇಂದ್ರ (ವಾಯುಮಂಡಲ), ಸೂರ್ಯ (ಆಕಾಶ) ಮತ್ತು ಅಗ್ನಿ (ಭೂಮಂಡಲ), ಇವರುಗಳು ಪ್ರತಿನಿಧಿಸುವ ಓಂಕಾರದ ಅಂಶಗಳಾದ ಅ, ಉ ಮತ್ತು ಮಕಾರಗಳ ಸಹಾಯದಿಂದ, ಅನಾವರಣಗೊಳಿಸುವುದಕ್ಕೆ ಅನ್ವಯವಾಗುತ್ತದೆ (4.58.4)[1].

ವೇದಗಳ ನಿರೂಪಣೆಯಲ್ಲಿ ಪಣಿಗಳೆಂದರೆ ಪಶುಗಳ್ಳರು; (ಶಬ್ದಾರ್ಥ ಶಾಸ್ತ್ರದ ಪ್ರಕಾರ ತಮ್ಮ ಸ್ವಾರ್ಥಸಾಧನೆಗಾಗಿ ಶ್ರಮ ಪಡುವವರು - ಪಣ್); ಅವರು ಕಳ್ಳತನದಲ್ಲಿ ಹಸುಗಳನ್ನು ಅಟ್ಟಿಸಿಕೊಂಡು ಹೋಗಿ ಅವುಗಳನ್ನು ನಿರ್ಜನ ಪ್ರದೇಶದ ಗವಿಗಳಲ್ಲಿ ಬಚ್ಚಿಡುವರು. ಅವರುಗಳು ನಮ್ಮೊಳಗೇ ಪ್ರಕಾಶಿಸುತ್ತಿರುವ ಚೈತನ್ಯದ ಬೆಳಕಿನಿಂದ ನಮ್ಮ ಗಮನವನ್ನು ದೂರ ಸರಿಸುವ ಇಂದ್ರಿಯಗಳ ಕಾರ್ಯವನ್ನು ಹಾಗೂ ಕೆಳಸ್ತರದ ಮಾನಸಿಕ ಪ್ರಕ್ರಿಯೆಗಳನ್ನು ಪ್ರತಿನಿಧಿಸುತ್ತಾರೆ (ವೇದಗಳ ಅರ್ಥದಲ್ಲಿ ''ಪಶು''ಗಳೆಂದರೆ ''ಬೆಳಕಿನ ರಶ್ಮಿಗಳು''). ಅವುಗಳ ಮಾಯೆಯು ಮೂರು ಸ್ತರಗಳದ್ದಾಗಿದೆ : ಶರೀರ, ವಾಕ್ಕು ಮತ್ತು ಮನಸ್ಸುಗಳಲ್ಲಿ ರತವಾಗಿರುವುದು. ಈ ಮೂರು, ನಾವು ವಾಸಿಸುವ ಈ ವ್ಯಾವಹಾರಿಕ ಪ್ರಪಂಚದ ಮುಖ್ಯ ರೂವಾರಿಗಳಾಗಿವೆ. ಅವು ನಮ್ಮನ್ನು ಬಾಹ್ಯ ದೃಷ್ಟಿಕೋನವನ್ನು ಹೊಂದುವಂತೆ ಮಾಡುತ್ತವೆ ಮತ್ತು ವಾಸ್ತವವನ್ನು ನಮ್ಮಿಂದ ಮರೆಮಾಚುತ್ತದೆ. ''ಘೃತ''ವೆಂದು ಕರೆಯುವ ಈ ವಾಸ್ತವ ಪ್ರಕಾಶವು ತೇಜೋವಂತರಿಂದ (ದೇವಸಃ), ಆಂತರಿಕ-ದೃಷ್ಟಿ ಇರುವ ಋಷಿಗಳಿಂದ, ಆಂತರ್ಯದಲ್ಲಿರುವ ಬೆಳಕಿನ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುವ ಜ್ಞಾನಿಗಳಿಂದ ಮಾತ್ರ ಗ್ರಹಿಸಲು ಸಾಧ್ಯ.

ಮುಂದಿನ ಮಂತ್ರವು ಸಾಗರವನ್ನು ಹೃದಯಕ್ಕೆ ಹೋಲಿಸುತ್ತದೆ. ಅಂತರ್ಮುಖಿಯಾಗಿ ಇರುವವನಿಗೆ ಹೃದಯದಲ್ಲಿರುವ ಸಾಗರದಿಂದ (ಹೃದ್ಯಾತ್ ಸಮುದ್ರ್ಯಾತ್) ಆಂತರ್ಯದ ಪ್ರಕಾಶವು ನೂರು ಪ್ರವಾಹಗಳಲ್ಲಿ ಹರಿಯುತ್ತದೆ (ಅರ್ಶಂತಿ, ಶತ-ವ್ರಜ)[2].

ಹೃದಯ ಸಾಗರವನ್ನು (5.58.11) ರಲ್ಲಿಯೂ ಉಲ್ಲೇಖಿಸಲಾಗಿದೆ (ಸಮುದ್ರೇ - ಹೃದಿ). (4.58.1)ರಲ್ಲಿ ತಿಳಿಸಿರುವ ಅಲೆಗಳನ್ನು ಇಲ್ಲಿ ನೂರು (ಅಸಂಖ್ಯಾತ) ಪ್ರವಾಹಗಳಿಗೆ ಅನ್ವಯಿಸಲಾಗಿದೆ (ಶತ-ವ್ರಜ).

---

[1] ತ್ರಿಧಾಹಿತಂ ಪಣಿಭಿರ್ಗುಹ್ಯ ಮಾನಂ ಗವಿ ದೇವಾಸೋ ಘೃತ ಮನ್ವ ವಿಂದನ್ । ಇಂದ್ರ ಏಕಂ ಸೂರ್ಯ ಏಕಂ ಜಜಾನ ವೇನಾ ದೇಕಂ ಸ್ವಧ್ಯಾ ತಿಷ್ಠತಕ್ಷುಃ ॥ (4.58.4)

[2] ಏತಾ ಅರ್ಷಂತಿ ಹೃದ್ಯಾತ್ ಸಮುದ್ರಾತ್ ಶತವ್ರಜಾ ರಿಪುಣಾ ನಾವ ಚಕ್ಷೇ । ಘೃತಸ್ಯ ಧಾರಾ ಅಭಿಚಾಕ ಶೀಮಿ ಹಿರಣ್ಯಯೋ ಮಧ್ಯ ಆಸಾಂ ॥ (4.58.5)

ಆಧ್ಯಾತ್ಮಿಕ ಕ್ರಮದಲ್ಲಿ ಮೂರು ಹೃದಯಗಳನ್ನು ಗುರುತಿಸಲಾಗಿದೆ. (1) ಮೂಲಾಧಾರದಲ್ಲಿ (2) ಹೃದಯ (ಅನಾಹತದಲ್ಲಿ), (3) ಮನಸ್ಸು, ಬುದ್ಧಿ-ಶಕ್ತಿ, ಅಹಂಭಾವ ಹಾಗೂ ವಿವೇಚನೆಗಳ ನೆಲೆಯಾದ ಶಿರಸ್ಸಿನಲ್ಲಿ.

ಈ ಮೂರನ್ನು, ತಂತ್ರದಲ್ಲಿ, ವಿಶ್ವಾತೀತ ಚೇತನವನ್ನು ವ್ಯಾವಹಾರಿಕ ಚೇತನಕ್ಕೆ ಬಂಧಿಸುವ ಮೂರು ಗ್ರಂಥಿಗಳಾದ ಬ್ರಹ್ಮಗ್ರಂಥಿ, ವಿಷ್ಣುಗ್ರಂಥಿ ಮತ್ತು ರುದ್ರಗ್ರಂಥಿಗಳೆಂದು ಗುರುತಿಸಲಾಗಿದೆ.

ಬ್ರಹ್ಮಗ್ರಂಥಿಯಿಂದ (ಮೂಲಾಧಾರ ಕೇಂದ್ರದಿಂದ) ಚೈತನ್ಯದ ಪ್ರವಾಹವು ಹರಿಯುತ್ತದೆ; ವಿಷ್ಣುಗ್ರಂಥಿಯಲ್ಲಿ (ಅನಾಹತ ಕೇಂದ್ರದಲ್ಲಿ) ಪ್ರಜ್ಞೆಯ ಸಾಗರವಿದೆ (ಹೃದ್ಯಾತ್ ಸಮುದ್ರಾತ್); ಮತ್ತು ರುದ್ರ ಗ್ರಂಥಿಯಿಂದ (ಆಜ್ಞಾ ಕೇಂದ್ರವಾದ - ಭ್ರೂ ಮಧ್ಯದಿಂದ) ಆಲೋಚನೆಗಳು, ಆಕಾಂಕ್ಷೆಗಳು, ನಿರ್ಣಯಗಳು, ಸ್ವಾರ್ಥಕ್ರಿಯೆಗಳು ಹೊರಹೊಮ್ಮುತ್ತವೆ.

ಈ ಸೂಕ್ತದ ಋಷಿಯು ಪ್ರಕಾಶದ ಧಾರೆಯನ್ನು (ಘೃತಸ್ಯ ಧಾರಾ) (4.58.1, 2, 5-10) ಅನಾಹತ ಕೇಂದ್ರದ ಪರಿಶುದ್ಧ ಪ್ರಜ್ಞೆಯ ಪ್ರವಾಹವನ್ನು ತಮ್ಮ ವ್ಯಕ್ತಿತ್ವದಲ್ಲಿ ಕಂಡಿದ್ದಾರೆ (ಅಭಿಚಾಕಶೀಮಿ), ಪ್ರಕಾಶವನ್ನು ಕದ್ದೊಯ್ಯುವ (ಪ್ರಕಾಶದ ಸಂಕೇತವಾದ ಪಶುಗಳು) ವೈರಿಗಳಾದ ಪಣಿಗಳು ಇದನ್ನು ಕಾಣಲಿಲ್ಲ (ರಿಪುಣಾನಾವಚಕ್ಷೇ) (4.58.5). ಪರಿಶುದ್ಧವಾದ ಪ್ರಜ್ಞೆಯನ್ನು ಮುಚ್ಚಿಡುವ ಆಲೋಚನೆ ಮತ್ತು ಆಕಾಂಕ್ಷೆಗಳೇ ಪಣಿಗಳಾಗಿವೆ. ಈ ಪ್ರಕಾಶದ ಹರಿವಿನ ಮಧ್ಯದಲ್ಲಿ (ಮಧ್ಯ ಆಸಾಂ) ಸುವರ್ಣವರ್ಣದ ಮನಸೆಳೆಯುವ ಉಜ್ವಲವಾದ ಈ ಬೆಳಕಿದೆ (ಹಿರಣ್ಯಯೋ). ಬಾಹುಳ್ಯ ಹಾಗೂ ಕಪಟಗಳ ನಡುವೆಯೂ ಈ ಏಕಮೇವ ಸತ್ಯವು ಕಾಂತಿಯುತವಾಗಿ ಹೊಳೆಯುತ್ತದೆ (ಏಕಂ ಸತ್)[3].

ಬೇಟೆಗಾರನ ಹಿಡಿತದಿಂದ (ಕ್ಷಿಪೋಣೋ ಇಷಮಾಣಾಃ) - ಜಿಂಕೆಯು (ಮೃಗಾ ಇವ) ವೇಗವಾಗಿ ತಪ್ಪಿಸಿಕೊಂಡು ಓಡಿಹೋಗುವಂತೆ, ಹೃದಯಾಂತರಾಳದಲ್ಲಿ (ಅಂತಹೃದಾ) ಮನಸ್ಸು ಯಾವಾಗ ಪರಿಶುದ್ಧ ಹಾಗೂ ಪವಿತ್ರಗೊಳ್ಳುವುದೋ, ಆಗ ಪ್ರಕಾಶದ ಕಿರಣಗಳು (ಧೇನಾ), ತ್ವರಿತಗತಿಯ ಪ್ರವಾಹದಂತೆ (ಸರಿತೋನ ಸಮ್ಯಕ್ ಸ್ರವಂತಿ) ಸಂಪೂರ್ಣವಾಗಿ ಹರಿಯುತ್ತವೆ.

ಊರ್ಮ್ಯಾಃ (ಅಲೆಗಳು) ಎಂಬ ಪದವು ಇಲ್ಲಿ ಮತ್ತೊಮ್ಮೆ ಕಾಣಸಿಗುತ್ತದೆ. ಹೃದಯದೊಳಗಿನ ಪ್ರಕಾಶವೇ ವಿಶ್ವಾತೀತ (transcendental) ಓಂಕಾರವಾಗಿದೆ; ಅಲೆಗಳಂತೆ ಹೊರಹೊಮ್ಮುವ ಪ್ರವಾಹಗಳು ವ್ಯವಹಾರ್ಯ (transactional) ಓಂಕಾರವನ್ನು ಪ್ರತಿನಿಧಿಸುತ್ತದೆ. ಪ್ರಾಪಂಚಿಕ ಆಲೋಚನೆಗಳು ಸಂಪೂರ್ಣವಾಗಿ ಅನುಪಸ್ಥಿತವಾದಾಗ ಮಾತ್ರ ಇದು ಸಂಭವ. ದುರಾಸೆಯಿಂದ ಕೂಡಿದ ಹಿಂಸಾತ್ಮಕ ಬೇಡನಿಂದ ದೂರ ಓಡಿ ಹೋಗುವ ಜಿಂಕೆಯ ರೂಪಕವು (metaphor) ಪ್ರಜ್ಞೆಯ ಪರಿಶುದ್ಧತೆ ಮತ್ತು ಪವಿತ್ರತೆಯನ್ನು ಉಳಿಸಿ, ಅಳಿದುಹೋಗುವ

---

[3] ಸಮ್ಯಕ್ ಸ್ರವಂತಿ ಸರಿತೋ ನ ಧೇನಾ ಅಂತಹೃದಾ ಮನಸಾ ಪೂಯ ಮಾನಾಃ ।
ಏತೇ ಅರ್ಷಂತ್ಯೂರ್ಮಯೋ ಘೃತಸ್ಯ ಮೃಗಾ ಇವ ಕ್ಷಿಪಣೋರೀಷ ಮಾಣಾಃ ॥ (4.58.6)

ಆಲೋಚನೆಗಳನ್ನು ಸೂಚಿಸುತ್ತದೆ. ಸಂವೇದನೆಗಳಿಂದ, ಗ್ರಹಿಕೆಗಳಿಂದ, ಕಲ್ಪನೆಗಳಿಂದ ಮತ್ತು ಭಾವನೆಗಳಿಂದ ಉದ್ಭವಿಸುವ ಆಲೋಚನೆಗಳಿಂದ ಮನಸ್ಸು ಪರಿಶುದ್ಧವಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳಬೇಕಾದರೆ, ಮನಸ್ಸು ವ್ಯಾವಹಾರಿಕವಾಗಿ ಸ್ಥಗಿತಗೊಳ್ಳುತ್ತದೆ; ಅದು ಬರಿದಾದ ಮತ್ತು ನಿರಾಕಾರವಾದ ಪ್ರಜ್ಞೆಯ ಸ್ಥಿತಿಯನ್ನು ಮುಟ್ಟುತ್ತದೆ. ಅದು ತನ್ನ ಸಾಮಾನ್ಯ ಗುಣಗಳನ್ನು ಮೀರಿ, ಹೃದಯದಲ್ಲಿ ನೆಲೆಗೊಳ್ಳುತ್ತದೆ (ಅಂತರ್ ಹೃದಾ). ಆಗ ಅದನ್ನು ಅವಿಚ್ಛಿನ್ನ ಹಾಗೂ ಆನಂದದಾಯಕ ಕಿರಣ ಅಥವಾ ಸತ್ಯದ ಬೆಳಕಿನ (ಘೃತಸ್ಯ ಊರ್ಮಯಃ) ಕಿರಣಗಳಿಂದ ಪರಿಶುದ್ಧಗೊಳಿಸಬಹುದಾಗಿದೆ.

ಈ ಬೆಳಕಿನ ಪ್ರವಾಹವು ಸದಾ ನಮ್ಮಲ್ಲೇ ಅಂತರ್ಗತವಾಗಿದೆ; ಆದರೆ ಆಲೋಚನಾ-ತರಂಗಗಳು ಕತ್ತಲೆ-ಬೆಳಕಿನ ಆಟದ ಮೂಲಕ ಅದಕ್ಕೆ ಪರದೆ ಹಾಕುತ್ತದೆ. ಮನಸ್ಸು ಯಾವಾಗ ಈ ಪ್ರಾಪಂಚಿಕ ವಿಷಯ ಹಾಗೂ ಆಕಾಂಕ್ಷೆಗಳಲ್ಲಿ ತೊಡಗಿರುವುದೋ ಆಗ ಪ್ರಜ್ಞೆಯ ಪರಿಶುದ್ಧವಾದ ಜಲವು ಕೆಸರಿನ ಹಾಗೆ ಪ್ರಕ್ಷುಬ್ಧಗೊಂಡು ಕದಡಿದಂತೆ ಕಾಣುತ್ತದೆ. ಇದನ್ನು 'ಶತ್ರು' (ರಿಪು)ವೆಂದು ''ಪಶುಗಳನ್ನು ಕಸಿದುಕೊಂಡು ಹೋಗುವವರೆಂದು (ಪಣಿ)'' ಮತ್ತು ''ಬೇಟೆಗಾರ''ನೆಂದು ಪರಿಗಣಿಸಲಾಗಿದೆ (ಕ್ಷಿಪಾಣೋಹ, ಕ್ಷೇಪಕಾತ್). ಇದು ಕತ್ತಲೆ-ಬೆಳಕುಗಳ ನಡುವಿನ ಹೋರಾಟವಲ್ಲ, ಆದರೆ ನಿಜ ಬೆಳಕು ಮತ್ತು ಹುಸಿ ಬೆಳಕುಗಳ ನಡುವಿನ ಹೋರಾಟವಾಗಿದೆ.

ಈ 'ಹೋರಾಟ' ಅಥವಾ ಪ್ರತಿಭಟನೆಯನ್ನು ಇನ್ನೊಂದು ಮಂತ್ರದಲ್ಲಿ ಉಲ್ಲೇಖಿಸಲಾಗಿದೆ (4.58.11) ''ಸಮಿಥೆ'' (ಅರ್ಥಾತ್ ಸಂಗ್ರಾಮೆ)[4].

ಇದು ಜಲದ ವಿವಿಧ ಪ್ರವಾಹಗಳ ನಡುವಿನ ಹೋರಾಟವಾಗಿದೆ (ಅಪಾಮನೀಕೆ) : ಮೊದಲನೆಯದು, ವ್ಯಕ್ತಿಯ ಬಾಹ್ಯದಿಂದ ಉದ್ಭವಿಸುವ ರಭಸದಿಂದ ಉರುಳುವ ಪ್ರವಾಹದ ಸಂಗ್ರಹವಾಗಿದೆ (ಬಾಹ್ಯ ವಸ್ತುಗಳು ಮತ್ತು ಆಲೋಚನೆಗಳಿಂದ ಇಂದ್ರಿಯ ಹಾಗೂ ಮನಸ್ಸಿನಿಂದ ಉದ್ಭವಿಸುವಂತಹವು); ಮತ್ತೊಂದು, ವ್ಯಕ್ತಿಯ ಹೃದಯದಿಂದ (ಹೃದಯಾಂತಃ) ಹೊರಹೊಮ್ಮುವ ಅವಿಚ್ಛಿನ್ನವಾದ, ನಿಶ್ಚಲವಾದ ಹಾಗೂ ಪ್ರಶಾಂತವಾದ ಪ್ರವಾಹದ ಹರಿವಾಗಿದೆ. ಇದನ್ನು ನಿಜವಾದ ಬೆಳಕಿನ ಕಿರಣಗಳೆಂದು ವಿವರಿಸಲಾಗಿದೆ (ಘೃತಸ್ಯ ಧಾರಾ ಅಥವಾ ಊರ್ಮಯಃ). ಈ ಬೆಳಕಿನ ಉಗಮ ಸ್ಥಾನವಾದ ಹೃದಯವನ್ನು ಅಂತರಾಳದ ಸಮುದ್ರ ಎನ್ನುತ್ತಾರೆ (ಸಮುದ್ರ ಹೃದ್ಯಾಂತಃ).

ಸಂಸ್ಕೃತದ ''ಅಪಾ'' ಅಥವಾ ''ಆಪಃ'' (ನೀರು) ಎಂಬ ಪದವು ''ಅಪ್'' ಎಂಬ ಧಾತುವಿನಿಂದ ಉತ್ಪತ್ತಿಯಾಗಿದೆ ಎಂಬುದು ಕುತೂಹಲಕಾರಿಯಾಗಿದೆ. ''ಆಪ್'' ಎಂದರೆ ''ಚಲಿಸು'' ''ಆಗಿರು'' ಮತ್ತು ''ಜನ್ಮಕೊಡು'' (ಅಪತ್ಯದಲ್ಲಿರುವಂತೆ). ನೀರಿನ ಸಾಮಾನ್ಯ ಅರ್ಥಕ್ಕೆ

---

[4] ಧಾಮನ್ ತೆ ವಿಶ್ವಂ ಭುವನಮಧಿ ಶ್ರಿತಮಂತಃ ಸಮುದ್ರೆ ಹೃದ್ಯಂತರಾಯುಷಿ । ಅಪಾಮನೀಕೆ ಸಮಿಥೆ ಯ ಆಭೃತಃ ತಮಶ್ಯಾಮ ಮಧುಮಂತಂ ತಮೂರ್ಮಿಮ್ ॥ (4.58.11)

ಅದರ ಚಲನಶಕ್ತಿಯೇ ಕಾರಣವಾಗಿದೆ. ವೇದಗಳ ಅರ್ಥದಲ್ಲಿ ನೀರು ಬೆಳಕನ್ನು ಹಾಯಿಸುತ್ತದೆ ಮತ್ತು ತೇಜೋಮಯವಾಗಿದೆ (ಸ್ವರ್ವತಿರ್ ಆಪಃ (1.10.8) ಮತ್ತು ಆಪೋ ದಿವ್ಯಃ). ಅವು ಸಮುದ್ರದಿಂದ (ಹೃದಯದಿಂದ) ಹುಟ್ಟಿ ಹರಡುತ್ತವೆ. ಬೆಳಕು, ನಿಜವಾದ ಬೆಳಕು, ಸಮೃದ್ಧ ಹಾಗೂ ಸುಖೋಷ್ಣವೆಂದು ಅರ್ಥಕೊಡುವ ಘೃತವೂ ಸಹ ನೀರೇ ಆಗಿದೆ; ಅದು ಅಲೆಗಳು ಹಾಗೂ ಪ್ರವಾಹಗಳಂತೆ ಏಳುತ್ತದೆ (ಧಾರಾ ಅಥವಾ ಊರ್ಮಯಃ). ಅದು ಪ್ರಕಾಶಕ್ಕೆ, ಆಲೋಚನಾ ತರಂಗಗಳಿಲ್ಲದಿರುವಂತಹ ಪರಿಶುದ್ಧ ಜ್ಞಾನದ ಸ್ವಚ್ಛತೆಗೆ ಅನ್ವಯಿಸುತ್ತದೆ.

ಹೋರಾಟವು ಹೃದಯ ಸಮುದ್ರಕ್ಕೆ ಹೊರಗಿನಿಂದ ಬರುವ ನೀರು ಮತ್ತು ಹೃದಯ ಸಮುದ್ರದಿಂದ ಉದ್ಭವಿಸಿ ಹೊರಹೊಮ್ಮುವ ನೀರಿನ ನಡುವೆ ಆಗುತ್ತದೆ. ಇದು ''ಅಪಾಮನೀಕೆ ಸಮಿಥೆ'', ಮೊದಲನೆಯದು ವ್ಯವಹಾರ್ಯ (transactional) ಓಂಕಾರವನ್ನು (ಅಪರಾ) ಎರಡನೆಯದು ವಿಶ್ವಾತೀತ (transcendental) ಓಂಕಾರವನ್ನು (ಪರಾ) ಸೂಚಿಸುತ್ತದೆ.

ॐ

11. ಆಧ್ಯಾತ್ಮಿಕ ಸಾಧನೆ

ಓಂಕಾರವನ್ನು ಒಳಗೊಂಡ ಆಧ್ಯಾತ್ಮಿಕ ಶಿಕ್ಷಣವು (ಸಾಧನೆ ಅಥವಾ ಯೋಗ) ಹಲವು ಸ್ವರೂಪಗಳನ್ನು ತಳೆಯುತ್ತದೆ. ಅವೆಲ್ಲವೂ ಓಂಕಾರದ ಎರಡು ದೃಷ್ಟಿಕೋನಗಳನ್ನು ಪರಿಗಣಿಸುತ್ತವೆ: ವ್ಯವಹಾರ್ಯ (ಅಪರಾ) ಮತ್ತು ವಿಶ್ವಾತೀತ (ಪರಾ). ಮೊದಲನೆಯದು ಓಂಕಾರವನ್ನು ಸಂಕೇತಿಸುವ ಚಿತ್ರವನ್ನು ಪೂಜ್ಯ ವಸ್ತುವನ್ನಾಗಿ ಅಂಗೀಕರಿಸುತ್ತದೆ (ಮುದ್ರಾ-ಲಿಪಿ ಅಥವಾ ಸಮಜ್ಞಾ). ಇದೊಂದು ಅಕ್ಷರ ಅಥವಾ ಪದವಲ್ಲ ಎಂಬುದನ್ನು ಮುಖ್ಯವಾಗಿ ಗಮನಿಸಬೇಕು. ಇದು ಪದಗಳಿಗೂ ಮತ್ತು ಶಬ್ದಕ್ಕೂ ಅತೀತವಾದುದು. ಇದು ಅ, ಉ, ಮ ಗಳ ಸಮನ್ವಯತೆಯನ್ನು ಸೂಚಿಸುತ್ತಾ ವ್ಯಾವಹಾರಿಕ ಜೀವನದ ಮೂರು ಆಯಾಮಗಳನ್ನು ಪ್ರತಿನಿಧಿಸುತ್ತದೆ; ಜಾಗೃತಿ, ಕನಸು ಮತ್ತು ಗಾಢನಿದ್ರೆ.

ಈ ಸ್ಥಿತಿಗಳನ್ನು ಮೀರಿದ, ಆದರೆ ಅವುಗಳಲ್ಲೇ ಅಂತರ್ಗತವಾಗಿರುವ ಓಂಕಾರವು, ಆಧ್ಯಾತ್ಮಿಕ ಸಾಧನೆಗಳ ಪರಿಣಾಮದಿಂದ ಅನೈಚ್ಛಿಕವಾಗಿ ಅಂತರಂಗದಲ್ಲಿಯೇ ಸ್ಥಿತವಾಗಿರುತ್ತದೆ. ಇದನ್ನು ವ್ಯಕ್ತಿಯ ಕೇಂದ್ರವಾದ ''ಹೃದಯ'' (ಹೃತ್) ದೊಂದಿಗೆ ಪರ್ಯಾಯವಾಗಿ ''ಅನಾಹತ'' (ಅನಿರ್ಬಂಧ, ಕಾರಣರಹಿತ)ವೆಂದು ವಿವರಿಸಲಾಗಿದೆ. ಈ ಮೂರು ಸ್ಥಿತಿಗಳನ್ನು ಅಧ್ಯಾರೋಪಣ (superimposition) ವೆಂಬುದಾಗಿಯೂ, ಆದ್ದರಿಂದ ಅವು ಅವಾಸ್ತವಿಕ ಎಂಬುದಾಗಿಯೂ ವಿವರಿಸಲಾಗಿದೆ. ನಾಲ್ಕನೆಯ ಸ್ಥಿತಿಯು (ತುರೀಯ) ಈ ಮೂರು ಸ್ಥಿತಿಗಳಿಗೆ ಅಪವಾದವಾಗಿದೆ. ಇದು ಆತ್ಮವೇ ಆಗಿದೆ. ಇದು ಸುಪ್ತಾವಸ್ಥೆಯಲ್ಲಿರುವ ತಾಂತ್ರಿಕ ಕುಂಡಲಿನಿಯಾಗಿದೆ; ಮೇಲೇರುವ ಕುಂಡಲಿನಿಯು ವ್ಯವಹಾರ್ಯ ಅಂಶವಾಗಿದೆ.

ಮಾಂಡೂಕ್ಯ ಉಪನಿಷತ್ತು ಓಂಕಾರ-ನಿರ್ಣಯದೊಂದಿಗೆ ಪ್ರಾರಂಭಿಸುವಾಗ, ಅದು ಓಂಕಾರವನ್ನು ಆತ್ಮದೊಂದಿಗೆ ಗುರುತಿಸುತ್ತದೆ. ಈಶ್ವರನು ಪ್ರಣವದ (ಓಂ) ನಾಮದಿಂದಲೇ ಗುರುತಿಸಲ್ಪಟ್ಟಿದ್ದಾನೆಂದು ಯೋಗವು ವಿವರಿಸುತ್ತದೆ ಎಂಬುದನ್ನು ಮೊದಲೇ ತಿಳಿಸಲಾಗಿದೆ (ತಸ್ಯ ವಾಚಕಃ ಪ್ರಣವಃ). ಇಲ್ಲಿ ಅಡಕವಾಗಿರುವ ಸೂಚ್ಯವೆಂದರೆ ಅರಿತುಕೊಳ್ಳಬೇಕಾದ ಅರ್ಥ (ವಿಷಯ) ಅಥವಾ ಅಭಿಧೇಯತೆ (ವಾಚ್ಯ ಅಭಿದೇಯ) ಮತ್ತು ಅದನ್ನು ಅರಿತುಕೊಳ್ಳಬೇಕಾದ ಮಾರ್ಗದ (ವಾಚಕ ಅಥವಾ ಅಭಿದಾನ) ನಡುವಿನ ವ್ಯತ್ಯಾಸ. ವ್ಯಾಕರಣಕಾರರು ವಾಚಕ ಅಥವಾ ಶಬ್ದದ ಬಗ್ಗೆ ಹಾಗೂ ವಾಚ್ಯ ಅಥವಾ ಅದರ ಅರ್ಥದ ಬಗ್ಗೆ ಹೇಳುತ್ತಾರೆ. ಶಬ್ದವು ಸತ್ಯವಾಗಿದೆ, ಆದರೆ ಅರ್ಥವನ್ನು ಅದಕ್ಕೆ ಸೇರಿಸಲಾಗಿದೆ, ಅದರ ಮೇಲೆ ಪ್ರಕ್ಷೇಪಿಸಲಾಗಿದೆ (projected). ಶಬ್ದಕ್ಕಿಂತಲೂ ಅತೀತವಾದುದು ಅವರಿಗೆ ಯಾವುದೂ ಇಲ್ಲ, ವೇದಾಂತಿಗಳು, ವಾಚ್ಯ (ಅರ್ಥ) ಮತ್ತು ವಾಚಕ (ಶಬ್ದ)ದ ನಡುವಿನ ವ್ಯತ್ಯಾಸವನ್ನು ವಾಸ್ತವಿಕವೆಂದು (ವಾಚ್ಯವಾಚಕಾಭೇದನ್ಯಾಯಾತ್) ಒಪ್ಪುವುದಿಲ್ಲ, ಅವರು ಸತ್ಯವು (ಸತ್, ಎಂದರೆ ಓಂ, ಆತ್ಮ) ಶಬ್ದ ಮತ್ತು ಅರ್ಥಕ್ಕಿಂತಲೂ ಅತೀತವಾದುದೆಂದು ಸಮರ್ಥಿಸುತ್ತಾರೆಯಾದರೂ, ಅದು ವಾಚ್ಯ ಮತ್ತು ವಾಚಕಕ್ಕೆ ನೆಲೆ (ಆಸ್ಪದ) ಎಂದು ಹೇಳುತ್ತಾರೆ.

ಓಂಕಾರವು ವಾಚಕವಾಗಿ ಸಂಕೇತವಾಗಿದೆ (ಮುದ್ರಾಲಿಪಿ) ಮತ್ತು ವಾಚ್ಯವಾಗಿ ಆತ್ಮ (ಅಥವಾ ಬ್ರಹ್ಮ)ವಾಗಿದೆ. ಓಂಕಾರವನ್ನು ಸ್ಪಷ್ಟವಾದ ರೀತಿಯಲ್ಲಿ(ವೈಖರಿ) ಉಚ್ಚರಿಸುವಾಗ ಅದು ವಾಚಕವಾಗುತ್ತದೆ, ಆದರೆ ಅದನ್ನು ಜಪಿಸುವಾಗ ಅದು ಮಧ್ಯಮಾ ಮತ್ತು ಪಶ್ಯಂತಿ ಮೂಲಕ ಹಾದು, ಅದು ತನ್ನ ವ್ಯಾವಹಾರಿಕ ಗುಣಗಳನ್ನು ಕಳದುಕೊಂಡು, ''ಪರಾ'' ಸ್ತರದಲ್ಲಿ ಅದು ವಿಶ್ವಾತೀತ ಗುಣಗಳನ್ನು ಪಡೆಯುತ್ತದೆ. ಇಲ್ಲಿ ಅದು ವಾಚಕವೂ ಅಲ್ಲ, ಅಥವಾ ಅದನ್ನು ವಾಚ್ಯವೆಂದು ಗುರುತಿಸಲೂ ಆಗುವುದಿಲ್ಲ. ಅದು ಇವೆರಡಕ್ಕೂ ಅತೀತವಾದುದು.

ತ್ರಿಕಾ ದೃಷ್ಟಿಯಲ್ಲಿ ಸತ್ಯವು (ಪ್ರಜ್ಞೆ-ಆತ್ಮ) ಮೊದಲು ತಾನು ವಿಶ್ವದ ವಸ್ತುಗಳೆಲ್ಲದರಲ್ಲೂ ಮಿಡಿಯುವ ಚೇತನದ ಪ್ರಾಣವಾಗಿ ಪರಿವರ್ತನೆಗೊಳ್ಳುತ್ತದೆ (ಪ್ರಾಕ್ ಸಂವಿತ್ ಪ್ರಾಣೇ ಪರಿಣತಾ). ಇದು ಪರಮಾರ್ಥ (transcendental) ಮತ್ತು ಸಂವೃತಿಗಳು (transactional) ಸಂಧಿಸುವ ಬಿಂದುವಾಗಿದೆ. ಪ್ರಾಣವೇ ಪ್ರಣವವಾಗಿದೆ.

ಓಂಕಾರದ ಮುದ್ರಾ-ಲಿಪಿಯು ''ಸಂವಿತ್'' ಪ್ರಾಣವಾಗಿ ಪರಿವರ್ತನೆಗೊಳ್ಳುವುದನ್ನು ನಿರೂಪಿಸುತ್ತದೆ.

ಆಜ್ಞಾ (ಭ್ರೂ ಮಧ್ಯೆ)	ಶಿವ (ಅಂತರ್-ದ್ವಾದಶಾಂತ)
ನಾಸಾಗ್ರ (ಮೂಗಿನ ತುದಿ)	ನಾದ (ವಿಮರ್ಶ); ಶಕ್ತಿ
ಕಂಠ (ಗಂಟಲು)	ಪ್ರಾಣ (ಬಾಹ್ಯದ ಉಸಿರು) ಸ
ಮೂಲಾಧಾರ (ಹೊಕ್ಕಳು)	(ಬಹಿರ್-ದ್ವಾದಶಾಂತ)
(ಸಂವಿತ್)	ಅಪಾನ (ಒಳ ಉಸಿರು) ಹ
ಮಾತ್ರಾ	(ಪ್ರಾಣ)
ಬಿಂದು (ಪ್ರಕಾಶ)	

ಸಂಕೇತದ ಮೊದಲ ''ಮಾತ್ರೆ''ಯು ''ಅ'' ಶಬ್ದದ ಮೊದಲರ್ಧವಾಗಿದೆ; ಎರಡನೆಯ ''ಮಾತ್ರೆ''ಯು ''ಉ'' ಶಬ್ದದ ಉತ್ತರಾರ್ಧವಾಗಿದೆ; ತಲೆಯಲ್ಲಿ ಮಿಡಿಯುವ ''ಮ್'' ಶಬ್ದವು (ಮೂರ್ಧ) ಮೇಲ್ಗಡೆ ಅರ್ಧಚಂದ್ರಾಕಾರದಿಂದ ಸೂಚಿತವಾಗಿದೆ - ನಾದ. ಇವೆಲ್ಲವೂ ವ್ಯವಹಾರ್ಯ (ಅಪರಾ) ಓಂಕಾರವಾಗಿದ್ದರೆ, ಅರ್ಧ ಚಂದ್ರಾಕಾರದ ಮೇಲಿರುವ ಬಿಂದುವು ವಿಶ್ವಾತೀತ (ಪರಾ) ಓಂಕಾರವನ್ನು ಸೂಚಿಸುತ್ತದೆ. ವ್ಯಾವಹಾರಿಕ ಜಟಿಲತೆಗಳಿಂದ ನಿವೃತ್ತಗೊಂಡಿರುವ ಶಿವನ ದೃಷ್ಟಿಯಿಂದ ಈ ಬಿಂದುವನ್ನು ಶಿವನೊಂದಿಗೆ ಗುರುತಿಸಲಾಗಿದೆ. ಬಿಂದುರ್ಮ ಈಶ್ವರೋ ಜ್ಞೇಯಸ್ತಿರೋ ಭಾವ ಉದಾಂಹೃತಃ ॥

ಈ ಬಿಂದುವು ಸ್ಫೋಟಗೊಂಡಾಗ, ಬಾಹುಳ್ಯದ ವ್ಯವಹಾರ್ಯ ಪ್ರಪಂಚವು ಅಸ್ತಿತ್ವಕ್ಕೆ ಬರುತ್ತದೆ.

ಬಿಂದುಸ್ಫೋಟನ ಮಾತ್ರೇಣ ವರ್ಣಾನಾಂ ಚ ಸಮುದ್ಭವಂ ॥

(ಅಂತರ್‌ದ್ವಾದಶಾಂತ)
ಬಿಂದು - ಪ್ರಕಾಶ
ಶಿವ
ಆಜ್ಞಾ
ನಾದ-ವಿಮರ್ಶ
'ಮ್' ಶಕ್ತಿ
ನಾಸಾಗ್ರ
(ಬಹಿರ್
ದ್ವಾದಶಾಂತ)
ಉ
ಅ
ಕಂಠ
ಪ್ರಾಣ
ಮೂಲಾಧಾರ

''ಅತೀತ'' ಅಥವಾ ನಾಲ್ಕನೆಯದೆಂದು (ತಾರಾ-ತುರ್ಯ) ವಿವರಿಸಲಾಗಿರುವ ಇದು ಶಿವ ಅಥವಾ ಸಂವಿತ್; ಆತ್ಮ (ಅಥವಾ ಬ್ರಹ್ಮ). ಶಿವನೇ ಶುದ್ಧ ಪ್ರಜ್ಞೆಯ ಪ್ರಕಾಶವಾಗಿದ್ದಾನೆ ಮತ್ತು ಅರ್ಧ ಚಂದ್ರಾಕಾರದಂತೆ ಪ್ರತಿನಿಧಿಸುವ ಶಕ್ತಿಯೇ ಸಾಮರ್ಥ್ಯ ಮತ್ತು ವಿವೇಚನೆಯಾಗಿದೆ (ವಿಮರ್ಶಾ).

ಸಾಂಪ್ರದಾಯಿಕ ಚಕ್ರಗಳೊಂದಿಗಿನ (ಶಕ್ತಿ ಮತ್ತು ಅರಿವಿನ ಮನೋಭೌತಿಕ ಕೇಂದ್ರಗಳು) ಸಂಬಂಧವೂ ಸ್ಪಷ್ಟವಾಗಿದೆ. ಚಕ್ರಗಳು ಶರೀರದಲ್ಲಿ ಶ್ರೇಣಿ ವ್ಯವಸ್ಥೆಗೆ ಅನುಸಾರವಾಗಿ ನಿಯೋಜಿಸಲಾಗಿರುವ, ಹಾಗೂ ವ್ಯಕ್ತಿಯ ಆಧ್ಯಾತ್ಮಿಕ ಶಿಕ್ಷಣ ಅಥವಾ ಆತ್ಮ ನಿಗ್ರಹದ ಮೇಲೆ ಗಮನವನ್ನು ಹರಿಸುವುದಕ್ಕಾಗಿರುವ ಸಾರಭೂತವಾದ ಕೇಂದ್ರಗಳಾಗಿವೆ. ಆ ಕೇಂದ್ರಗಳಲ್ಲಿ ವ್ಯಕ್ತಿಗತ ಪ್ರಜ್ಞೆಯನ್ನು (ವಿಜಸ್ತಿ-ಸಂವಿತ್) ಸೀಮಿತಗೊಳಿಸಿ ಗ್ರಹಿಸಬಹುದಾಗಿದೆ. ಮುಖ್ಯವಾಗಿ, ವ್ಯಕ್ತಿಗತ ಪ್ರಜ್ಞೆ ಮತ್ತು ಶಕ್ತಿಯ (ಶಿವ-ಶಕ್ತಿ) ಕೇಂದ್ರಗಳೆಂದರೆ, ಮೂಲಾಧಾರ (ಹೊಕ್ಕುಳಿನ ಸಮೀಪ - ಇದನ್ನು ನಾಭೀಚಕ್ರವೆಂದೂ ಕರೆಯುತ್ತಾರೆ), ಅನಾಹತ (ಹೃದಯದಲ್ಲಿ - ಹೃತ್‌ಚಕ್ರ), ವಿಶುದ್ಧ (ಗಂಟಲಿನಲ್ಲಿ - ಕಂಠ ಚಕ್ರ ಅಥವಾ ತಾಲು ಚಕ್ರ), ನಾಸಾಗ್ರ (ಮೂಗಿನ ತುದಿ) ಮತ್ತು ಆಜ್ಞಾ (ಭ್ರೂ ಮಧ್ಯೆ). ಇದಕ್ಕೂ ಮೇಲೆ ಸಹಸ್ರಾರ (ತಲೆಯ ಮುಕುಟದ ಮೇಲೆ ಸಹಸ್ರದಳ - ಕಮಲ). ಇದು ವ್ಯಕ್ತಿಗತ ಪ್ರಜ್ಞೆಯ ವೈಶ್ವೀಕರಣವನ್ನು (ಶಿವನನ್ನು) ಪ್ರತಿನಿಧಿಸುತ್ತದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಇದು ವ್ಯಕ್ತಿಯ ಶರೀರದ ವಿವರಣೆಯಲ್ಲ, ಇದು ಬೇರೆ ವ್ಯವಹಾರ್ಯ ಕೇಂದ್ರಗಳಿಗಿಂತ ವಿಲಕ್ಷಣವಾದದ್ದು, ಅತೀಂದ್ರಿಯವಾದದ್ದು.

ಓಂ

12. ತ್ರಿಕಾ ಪದ್ಧತಿಯ ಯೋಗದಲ್ಲಿ ಓಂ - 1

ತ್ರಿಕಾ ಪದ್ಧತಿಯ ಯೋಗವು ವ್ಯಕ್ತಿಯಲ್ಲಿ ಹನ್ನೆರಡು ಶ್ರೇಣೀಕೃತ ಸ್ತರ ಅಥವಾ ಆಯಾಮಗಳನ್ನು ಪರಿಗಣಿಸುತ್ತದೆ. ಅದರಲ್ಲಿ ಕೊನೆಯದು ''ಶೂನ್ಯ''. ಮೊದಲ ಮೂರು ಪ್ರಣವದ (ಓಂಕಾರದ) ಅಂಶಗಳು.

ಅ (ನಾಭಿ ಅಥವಾ ಮೂಲಾಧಾರ)

ಉ (ಹೃತ್, ಹೃದಯ ಅಥವಾ ಅನಾಹತ)

ಮ್ (ಬಾಯಿ - ಅಂಗುಳಿ, ತಾಲು ಅಥವಾ ವಿಶುದ್ಧ)

ಬಿಂದು : ಕಣ್ಣುಗಳ ಹುಬ್ಬುಗಳು ಕೂಡುವಕಡೆ ಮನಸ್ಸು ನೆಲೆಸಿದೆ (ಭ್ರೂ ಮಧ್ಯೆ, ಅಥವಾ ಆಜ್ಞಾ ; ನಾಸಾಗ್ರ)

ಅರ್ಧಚಂದ್ರ : ಹಣೆಯ ಮೇಲೆ (ಲಲಾಟ)

ಇದು ಓಂಕಾರದ ಅಪರಾ ದೃಷ್ಟಿಯನ್ನು ಸೂಚಿಸಿದರೆ, ಪರಾ ಆಯಾಮವು ಲಲಾಟದ ಮೇಲೆ; ಓಂಕಾರ ಚಿಹ್ನೆಯ ಮುದ್ರಾ-ಲಿಪಿಗೂ ಮೇಲ್ಭಾಗದಲ್ಲಿ ಈ ಕೆಳಕಂಡ ಕೇಂದ್ರಗಳನ್ನು ಹೊಂದಿದೆ :

ನಿರೋಧಿನಿ : ಹಣೆಗೂ ಮೇಲೆ (ಕೇಶಾಂತ - ಸಹಸ್ರಾರ)

ನಾದ : ತಲೆಯ ಅಗ್ರ (ಶಿಖರ) (ಮೂರ್ಧ ಅಥವಾ ಉಷ್ಣೀಷ)

ನಾದಾಂತ : ಬ್ರಹ್ಮ-ರಂಧ್ರ ಅಥವಾ ವೈಶ್ವಿಕಪ್ರಜ್ಞೆಗೆ ಬ್ರಹ್ಮಾಂಡ ಮಾರ್ಗದರ್ಶನ ನೀಡುವ ರಂಧ್ರ.

ವ್ಯಾಪಿನೀ : ವೈಯಕ್ತಿಕ ಪ್ರಜ್ಞೆಯು (ಪಿಂಡಾಂಡ) ವೈಶ್ವಿಕಪ್ರಜ್ಞೆಯೊಡನೆ (ಬ್ರಹ್ಮಾಂಡ) ಸಂಧಿಸುವ, ಶರೀರದ ಮೇಲ್ಗಡೆ ಇರುವ ವ್ಯಾಪಕ ಕೇಂದ್ರ.

ಸಮನಾ : ಮನಸ್ಸು ವೈಯಕ್ತಿಕ ಪ್ರಜ್ಞೆಯೊಡನೆ ಸಮವ್ಯಾಪಕವಾಗಿರುವ ಕೇಂದ್ರ : ಶರೀರ ಪ್ರಜ್ಞೆಯು ಇಲ್ಲದಿರುವಿಕೆ.

ಉನ್ಮನಾ : ವೈಯಕ್ತಿಕ ಪ್ರಜ್ಞೆಯೊಡನೆ ಮಿಳಿತಗೊಂಡ ಮನಸ್ಸಿನ ಅತೀತ ಸ್ಥಿತಿ. ವೈಯಕ್ತಿಕ ಪ್ರಜ್ಞೆಯನ್ನು ವಿಶ್ವ ಪ್ರಜ್ಞೆಯೊಡನೆ ಲೀನಗೊಳಿಸುವಿಕೆ.

ಶೂನ್ಯ : ಶೂನ್ಯತೆ (ಆತ್ಮನ್) ಅಸ್ತಿತ್ವ ಮತ್ತು ಅಸ್ತಿತ್ವವು ಒಂದಾಗುವಲ್ಲಿ ಶೂನ್ಯತೆ; ವ್ಯವಹಾರ್ಯ ಆಯಾಮವು ಸಂಪೂರ್ಣವಾಗಿ ಮಾಯವಾಗಿರುತ್ತದೆ. ಈ ಸ್ತರಗಳು ತಪಸ್ಸಿನ (askesis) ಸ್ಥಿತಿಯಲ್ಲಿ(ಆತ್ಮನಿಗ್ರಹ) ಮಾತ್ರ ಸಮಂಜಸವಾಗಿರುತ್ತದೆ. ವಾಸ್ತವದಲ್ಲಿ ಅವು ಆಧ್ಯಾತ್ಮಿಕ ಆರೋಹಣ ಅಥವಾ ವಿಕಸನದ (ಯೋಗ) ಹಂತಗಳಾಗಿವೆ. ಅವು ಅನುಕ್ರಮವಾದ ವ್ಯಾವಹಾರಿಕ (ಲೌಕಿಕ) ಮಾರ್ಗದಿಂದ ನಿವೃತ್ತಿಯನ್ನೂ ಮತ್ತು ಅಲೌಕಿಕ ಮಾರ್ಗದೆಡೆಗೆ (ಲೋಕೋತ್ತರ) ವ್ಯವಸ್ಥಿತವಾದ ಸದೃಶತೆಯನ್ನು ಸೂಚಿಸುತ್ತವೆ. ಹಾಗೆಂದು, ಇವೆರಡೂ ಮಾರ್ಗಗಳು ಸಂಪೂರ್ಣವಾಗಿ ಒಂದರಿಂದ ಇನ್ನೊಂದು ಭಿನ್ನವಾದವುಗಳೆಂಬ ಅರ್ಥವಲ್ಲ, ವಾಸ್ತವದಲ್ಲಿ, ಅವು ಜೊತೆಯಲ್ಲೇ ಇರುತ್ತವೆ, ಬೇರ್ಪಡಿಸಲಾಗುವುದಿಲ್ಲ, ತಪಸ್ಸಿಗೆ (ಆತ್ಮನಿಗ್ರಹ) ಸಂಬಂಧಿಸಿದಂತೆ, ದ್ವಾದಶಾಂತ ಎಂಬ ಭಾವನೆಯು ಇದಕ್ಕೆ ಮಹತ್ವ ನೀಡಿದೆ. ಪದಶಃ, ಈ ನಿರೂಪಣೆಯು ''12 ಬೆರಳುಗಳ ಅಗಲದ ದೂರದಲ್ಲಿ'' ಎಂಬ ಅರ್ಥವನ್ನು ಕೊಡುತ್ತದೆ. ಬೆರಳಿನ ಅಗಲದ ಅಭಿಪ್ರಾಯವನ್ನು ವ್ಯಕ್ತಿಯ ಬಲಹಸ್ತದ ಮಧ್ಯದ ಬೆರಳಿನ ಅಗಲಕ್ಕೆ ಅನ್ವಯಿಸಲಾಗಿದೆ ಅಥವಾ ಎಂಟು ಯವದ (ಬಾರ್ಲಿ /ಗೋಧಿ) ಕಾಳುಗಳನ್ನು ಒಂದರ ಬದಿಯಲ್ಲೊಂದರಂತೆ ಸಾಲಾಗಿ ಇಟ್ಟಾಗ ಬರುವ ಅಳತೆಗೆ ಅನ್ವಯಿಸಲಾಗಿದೆ. ಮಾನವರ ಪ್ರಾಣಶಕ್ತಿಯ ಈ ಅಳತೆಯು ಪ್ರತಿದಿನವೂ ವ್ಯಯವಾಗುವ ಕುಂಡಲಿನೀ ಶಕ್ತಿಯನ್ನು ಪ್ರತಿನಿಧಿಸುತ್ತದೆ (ನಿಶ್ವಾಸದ ರೂಪದಲ್ಲಿ). ರುದ್ರ-ಯಾಮಲ (17.18.19)ದಲ್ಲಿ ಈ ರೀತಿ ಹೇಳಿದೆ.

ದ್ವಾದಶಾಂಗುಲ ಮಾನೇನ ಆಯುಃಕ್ಷರತಿ ನಿತ್ಯಶಃ ।
ದ್ವಾದ ಶಾಂಗುಲ ವಾಯುಶ್ಚ ಕ್ಷಯಂ ಕುರ್ಯಾದ್ದಿನೇದ್ದಿನೇ ॥
ಯಾವದ್ ವಾಯು ಬಹಿರ್ಯಾತಿ ಕುಂಡಲಿ ಪರದೇವತಾ ।
ತಾವತ್ತಾವ ವತ್ಕುಂಡಲಯಂ ಭವಾಬ್ಧಿ ಪಾಪ ವಿಮೋಕ್ಷಣಂ ॥

ಈ ದೂರ ಅಥವಾ ಸ್ಥಳದ ಮೊದಲಲ್ಲಿ ಹೃದಯ ಕೇಂದ್ರವಿದೆ (ಹೃತ್). ಇಲ್ಲಿಂದ ಪ್ರಾಣವು ಪ್ರಾರಂಭವಾಗುತ್ತದೆ, ಮತ್ತು ಕೊನೆಯಲ್ಲಿ ದ್ವಾದಶಾಂತವಿದೆ. ಇಲ್ಲಿ, ಹೃದಯವೆಂದರೆ, ಆ ಹೆಸರಿನ ಶರೀರದ ಅಂಗವಲ್ಲ, ಆದರೆ ಅದು ವ್ಯಕ್ತಿಯ ಅಸ್ತಿತ್ವದ ಕೇಂದ್ರವಾಗಿದೆ. ಶಾಸ್ತ್ರಗಳಲ್ಲಿ ನಾಲ್ಕು ದ್ವಾದಶಾಂತಗಳನ್ನು ಪರಿಗಣಿಸಲಾಗಿದೆ :

1. ನಾಭಿ ಮತ್ತು ಹೃದಯಗಳ ನಡುವಿನ ಅಂತರ (ಅಧೋ ದ್ವಾದಶಾಂತ)
2. ಹೃದಯದಿಂದ ಕಂಠದವರೆಗೆ
3. ಕಂಠದಿಂದ ಹಣೆಯವರೆಗೆ
4. ಹಣೆಯಿಂದ ಶಿರದವರೆಗೆ (ಊರ್ಧ್ವ ದ್ವಾದಶಾಂತ)

ಓಂ

13. ತ್ರಿಕಾ ಪದ್ಧತಿಯ ಯೋಗದಲ್ಲಿ ''ಓಂ'' -2

ಈ ಹಿಂದೆ ತಿಳಿಸಿರುವ ತ್ರಿಕಾ ಭಾವಲಕ್ಷಣಗಳ ಹನ್ನೆರಡು ವಿವರಣೆಗಳಿಗೆ ಮತ್ತೊಂದು ರೀತಿಯ ಎಣಿಕೆ ಇದೆ. ಅವುಗಳನ್ನು ಮೂರು ಗುಂಪುಗಳನ್ನಾಗಿ ಮಾಡಲಾಗಿದೆ : ಅಧೋ ಭಾಗ (ಅಪರಾ), ಅಧೋ ಮತ್ತು ಊರ್ಧ್ವ (ಪರಾಪರ) ಮತ್ತು ಊರ್ಧ್ವ (ಪರಾ).

1. ಅಧೋ (ಭೌತಿಕ ಶರೀರದಲ್ಲಿ) : ಸ್ಥೂಲ ಶರೀರ

   (ಅ) ಜನ್ಮಾಗ್ರ : ಜನನಾಂಗದ ಪ್ರದೇಶದಲ್ಲಿ (ಲಿಂಗ) (ಜನ್ಮಧಾರಾ)

   (ಆ) ಮೂಲ : ಕಶೇರುಕದ ತಳದಲ್ಲಿ, ಜನನಾಂಗದ ಅಡಿಯಲ್ಲಿ (ಮೂಲಾಧಾರ) (ಬ್ರಹ್ಮಗ್ರಂಥಿ). ಭೌತಿಕ ಶರೀರಕ್ಕೆ ಆತ್ಮವನ್ನು ಬಂಧಿಸುವ ಮೊದಲ ಕುಣಿಕೆ.

   (ಇ) ಕಂದ : ಗೆಡ್ಡೆಯಾಕಾರದ ಬೇರು (ನರಗಳ ಬೊಂತೆ) (ಸ್ವಾಧಿಷ್ಠಾನ)

   (ಈ) ನಾಭಿ : ಹೊಕ್ಕಳಿನ ನಾಳಗಳ ಜಾಲ (ನಿರ್ಮಾಣ ಚಕ್ರ) (ಮಣಿಪೂರ)

2. ಅಧೋ-ಊರ್ಧ್ವ (ಸೂಕ್ಷ್ಮ ಶರೀರದಲ್ಲಿ)

   (ಅ) ಹೃತ್ : ಹೃದಯ (ಅನಾಹತ) (ಧರ್ಮಚಕ್ರ) (ವಿಷ್ಣುಗ್ರಂಥಿ) ; ಭೌತಿಕ ಶರೀರವನ್ನು ಸೂಕ್ಷ್ಮ ಶರೀರಕ್ಕೆ ಬಂಧಿಸುವ ಮಧ್ಯದ ಕುಣಿಕೆ.

   (ಆ) ಕಂಠ : ಗಂಟಲಿನ ತಳದಲ್ಲಿನ ಕುಳಿ (ವಿಶುದ್ಧ) ; ಕಶೇರುಕದ ಮೇಲೆ (ಸಂಭೋಗ - ಚಕ್ರ)

   (ಇ) ತಾಲು : ಅಂಗುಳು, ಬಾಯಿಯ ಮೂಲ.

   (ಈ) ಭ್ರೂಮಧ್ಯ : ಹುಬ್ಬುಗಳ ನಡುವೆ ; ಆಲೋಚನೆಗಳು (ಮನಃಶ್ಚಕ್ರ) (ಆಜ್ಞಾ) ಪರಮಕುಲ (ನಾಸಾಗ್ರ); (ಶಿವಗ್ರಂಥಿ)

   (ಉ) ಲಲಾಟ : ಹಣೆ. ಇಲ್ಲಿ ಓಂಕಾರವು ಬೀಜ-ಶಬ್ದವಾಗಿದೆ. (ಸೋಮ-ಚಕ್ರ) (ಲಲಾಟ); (ಸೋಮ) (ಅರ್ಧಚಂದ್ರ).

3. ಊರ್ಧ್ವ (ಶರೀರದ ಹೊರಗೆ; ಕುಣಿಕೆಗಳ ಆಚೆ); ಪರಾ ಅಥವಾ ಕರಣ.

   (ಅ) ಬ್ರಹ್ಮರಂಧ್ರ : ಶಿಖಾಗ್ರ (ನಿರಾಲಂಬ ಪುರೀ) (ಸಹಸ್ರಾರ): ಶಿಖಾಗ್ರದಿಂದ ನಾಲ್ಕು ಅಂಗುಲಗಳ ಮೇಲೆ.

   (ಆ) ಶಕ್ತಿ : ಶುದ್ಧ ಶಕ್ತಿ (ಶರೀರದಿಂದಾಚೆ)

   (ಇ) ವ್ಯಾಪಿನೀ : ಕುಂಡಲಿನಿಯು ಸಹಸ್ರಾರವನ್ನು ತಲುಪಿದಾಗ. ಉಜ್ಜ್ವಲವಾಗಿ ಪ್ರಕಾಶಿಸುವ ವ್ಯಾಪಕ ಅರಿವು.

ಈ ಮೂರು ಸಂಪರ್ಕ-ಬಿಂದುಗಳು (2-ಬ್ರಹ್ಮಗ್ರಂಥಿಯಂತೆ ಕಾರ್ಯನಿರ್ವಹಿಸುವ ಮೂಲಾಧಾರ; 5-ಹೃತ್, ಅನಾಹತ, ವಿಷ್ಣುಗ್ರಂಥಿ; ಮತ್ತು 8-ಆಜ್ಞಾ ಅಥವಾ ನಾಸಾಗ್ರ, ಶಿವಗ್ರಂಥಿ) ಓಂಕಾರದ ಅ, ಉ, ಮ ಗಳ ಶಬ್ದ ಮಾತ್ರೆಗಳು ಇರುವಲ್ಲಿ ನೆಲೆಗೊಂಡಿವೆ. ಇದು ಓಂಕಾರದ ಲೌಕಿಕ (ಅಪರಾ) ದೃಷ್ಟಿಯಾಗಿದೆ. ನಾಲ್ಕನೆಯ ಬಿಂದು (ತುರ್ಯ ಅಥವಾ ಭೌತಿಕ ಹಾಗೂ ಸೂಕ್ಷ್ಮ ಶರೀರಗಳಿಂದಾಚೆ) 10ನೆಯದಾಗಿದೆ- ಬ್ರಹ್ಮರಂಧ್ರ, ಇದನ್ನು ಪ್ರಸಿದ್ಧವಾದ ವೇದದ ಮಂತ್ರಗಳಾದ, ಪುರುಷ ಸೂಕ್ತದಲ್ಲಿ ಹೇಳಲಾಗಿದೆ. ''ಪುರುಷ''ನು ಶರೀರಕ್ಕಿಂತಲೂ ''ಹತ್ತು'' ಅಂಗುಲಗಳಿಂದ ಅತೀತವಾಗಿದ್ದಾನೆ (ಸಂಖ್ಯೆ 10 ಅಸಂಖ್ಯಾತವನ್ನು ಸೂಚಿಸುತ್ತದೆ) - ಅತ್ಯತಿಷ್ಠದ್ದಶಾಂಗುಲಂ (10.90.1).

ಶಬ್ದ-ಮಾತ್ರೆ - 'ಅ' - ಬ್ರಹ್ಮಗ್ರಂಥಿಯು ನೆಲೆಯಾಗಿರುವ ಅಪರಾ ಗುಂಪಿಗೆ ಸೇರಿದೆ; ''ಉ'' ಶಬ್ದ-ಮಾತ್ರೆಯು ವಿಷ್ಣು ಮತ್ತು ಶಿವಗ್ರಂಥಿಗಳು ಸೇರಿರುವ ಪರಾಪರಾ ಗುಂಪಿಗೆ ಸೇರಿದೆ. ಓಂಕಾರದ ಪರಾ ಅಂಶವು ಅನುಭವಿಸಬೇಕೇ ಹೊರತು, ವಿಚಾರಮಾಡುವುದಕ್ಕಾಗುವುದಿಲ್ಲ. ಕಾಲ ಅಥವಾ ಆಕಾಶದಲ್ಲಿ (time and space) ಇದಕ್ಕೆ ಆದಿಯೂ ಇಲ್ಲ ಅಂತ್ಯವೂ ಇಲ್ಲ.

ಓಂಕಾರದ ಶಬ್ದ-ಮಾತ್ರೆಗಳಿಗೆ ಸಂಬಂಧಿಸಿದಂತೆ ಈ ಮೇಲೆ ನಿರೂಪಿಸಲಾಗಿರುವ ಭೌತಿಕ ಹಾಗೂ ಸೂಕ್ಷ್ಮ ಶರೀರಗಳ ಸಂಪರ್ಕ-ಬಿಂದುಗಳು, ವಿಶೇಷವಾಗಿ ಹಠಯೋಗ ಮತ್ತು ರಾಜ ಯೋಗಗಳ ನಡುವಿನ ಒಂದು ಮುಖ್ಯ ವ್ಯತ್ಯಾಸವನ್ನು ತೋರಿಸುತ್ತವೆ. ಶರೀರದಲ್ಲಿ ಕಾರ್ಯನಿರ್ವಹಿಸುವ ಭೌತಿಕ ಹಾಗೂ ಚೈತನ್ಯ ಶಕ್ತಿಗಳ ಮೇಲೆ ಆಧಾರಿತ ಹಠಯೋಗವು, ಪ್ರಾಣವು ಶರೀರವನ್ನು ಪ್ರವೇಶಿಸಿ ನಿರ್ಗಮಿಸುವ ನಾಸಾಗ್ರದ ಮೇಲೆ ಧ್ಯಾನವನ್ನು ಕೇಂದ್ರೀಕರಿಸುತ್ತಾ ಅಸ್ತಿತ್ವ, ಕಾರ್ಯಾಚರಣೆ, ಪ್ರಾಬಲ್ಯ ಮತ್ತು ಅನುಭವಗಳನ್ನು ಪರಿವರ್ತಿಸಲು ಪ್ರಯತ್ನಿಸುತ್ತದೆ. ಆದರೆ, ರಾಜಯೋಗವು ನಾಸಾಗ್ರಕ್ಕೂ ಮೇಲಿನ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತದೆ (ಭ್ರೂ-ಮಧ್ಯ-ಧ್ಯಾನ), ವಿಶಿಷ್ಟವಾಗಿ ಎರಡು ಕಿವಿಗಳಿಗೂ ಮೇಲಿನ ಶಿರಃ ಪ್ರದೇಶ. ಇಲ್ಲಿನ ಪ್ರಧಾನ ಕೇಂದ್ರಗಳೆಂದರೆ, ಆಜ್ಞಾ ಮತ್ತು ಸಹಸ್ರಾರ; ವಾಸ್ತವವಾಗಿ, ರಾಜ-ಯೋಗವು ಈ ಎರಡು ಕೇಂದ್ರಗಳ ಸಂಯೋಗವನ್ನು ಪಡೆಯಲು ಪ್ರಯತ್ನಿಸುತ್ತದೆ. ಇಲ್ಲಿ ಸಮಾಧಿಸ್ಥಿತಿಯನ್ನು ನಿರ್ವಿಕಲ್ಪ ಶೂನ್ಯವೆಂದು ವಿವರಿಸಲಾಗಿದೆ. ಇದನ್ನು ಶೂನ್ಯತೆ, ಅಥವಾ ಅಭೇದ್ಯ (ವಜ್ರ)ವೆಂದು ಗುರುತಿಸಲಾಗಿದೆ. ಇಲ್ಲಿ ಜೀವವು ಆತ್ಮದೊಂದಿಗೆ ಐಕ್ಯವಾಗುತ್ತದೆ. ಇದುವೇ ನಿರ್ವಾಣ ಅಥವಾ ಬ್ರಹ್ಮ-ನಿರ್ವಾಣ.

ॐ

14. ರೂಪಾಂತರಕ್ಕಾಗಿ ಓಂಕಾರ

ಹಠಯೋಗವು ಸ್ಥೂಲ ಹಾಗೂ ಸೂಕ್ಷ್ಮಶರೀರಗಳ ಪರಿವರ್ತನೆಗೆ (ಪರಾವೃತ್ತಿ) ಸಂಬಂಧಿಸಿದೆ, ಆದರೆ ರಾಜಯೋಗವು ಮೇಲೆ ಹೇಳಿದ ಪರಾಪರಾ ಗುಂಪಿನಲ್ಲಿ ಸೂಕ್ಷ್ಮಾದಿ ಸೂಕ್ಷ್ಮದ ಮಟ್ಟದಲ್ಲಿ(ಮನಸ್ಸು, ಪ್ರಜ್ಞೆ) ಕೆಲಸ ಮಾಡಲು ಯತ್ನಿಸುತ್ತದೆ ಮತ್ತು ಪರಾ ಮಟ್ಟದಲ್ಲಿ ಅಂತಃಶಕ್ತಿಗಳನ್ನು ಹೊರಗೆಡುವುತ್ತದೆ. ರಾಜಯೋಗದ ಒಳ್ಳೆಯ ಉದಾಹರಣೆಯೆಂದರೆ ವಜ್ರ-ಯಾನ. ಇದರಲ್ಲಿ ಮಂತ್ರ (ಸ್ವಾಭಾವಿಕವಾದ ಶಬ್ದ ಬೀಜಗಳ ಪ್ರಚೋದನೆ), ಮುದ್ರಾ (ನಿಶ್ಶಬ್ದ ಶಬ್ದದ ಭಾಷೆ) ಮತ್ತು ಮಂಡಲ (ಮೌನಧ್ಯಾನ)ಗಳನ್ನು ಪ್ರಯೋಗಿಸಲಾಗುತ್ತದೆ. ಇಲ್ಲಿ ಓಂಕಾರವು ಪ್ರಾಮುಖ್ಯತೆಯನ್ನು ಪಡೆಯುತ್ತದೆ [1].

ಇದು ವ್ಯಕ್ತಿಯ ಮೂಲ ಸ್ವಭಾವವಾದ ಓಂಕಾರದ ಶೂನ್ಯತೆ, ಪ್ರಜ್ಞೆ ಮತ್ತು ಕಠಿಣ ಸ್ವಭಾವಗಳನ್ನು ದೃಷ್ಟಾಂತಿಸುತ್ತದೆ. ಇದು ಓಂಕಾರದ ಪರಾದೃಷ್ಟಿಯಾಗಿದೆ. ಹಠಯೋಗವು ಓಂಕಾರದ ಅಪರಾ - ಆಯಾಮದಲ್ಲಿ ಕಾರ್ಯನಿರ್ವಹಿಸಿದರೆ, ರಾಜಯೋಗವು ಪರಾ ದೃಷ್ಟಿಯಲ್ಲಿ ಕಾರ್ಯನಿರ್ವಹಿಸುತ್ತದೆ. ವಜ್ರಯಾನದ ಒಂದು ಸಾಧನೆಯು ಓಂಕಾರವನ್ನು ಈ ರೀತಿ ವಿವರಿಸುತ್ತದೆ : ಎಲ್ಲ ವಸ್ತುಗಳಲ್ಲಿನ ಶೂನ್ಯತೆಯನ್ನು ಅರ್ಥೈಸಿಕೊಳ್ಳುವುದರ ಮೂಲಕ ಓಂಕಾರವು ಬೋಧೆಯ ಪರ್ಯಾಲೋಚನೆಯನ್ನು ಪ್ರಚೋದಿಸುತ್ತದೆ (ಬೋಧಿ-ಚಿತ್ತೋತ್ಪಾದ)[2].

ಈ ಮೊದಲೇ ಸೂಚಿಸಿದಂತೆ, ಓಂಕಾರಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಟಿಬೆಟ್ಟುಗಳಲ್ಲಿ ಹಲವಾರು ಆಧ್ಯಾತ್ಮಿಕ ಸಾಧನೆಗಳಿವೆ. ಅವುಗಳಲ್ಲಿ ಹೆಚ್ಚಿನವು ಉಸಿರಿನ ವೀಕ್ಷಣೆಗೆ ಅಥವಾ ನಿಯಂತ್ರಣಕ್ಕೆ ಸಂಬಂಧಿಸಿದುದಾಗಿವೆ (ಪ್ರಾಣ-ಪ್ರಾಣಾಯಾಮ). ಇದು ಓಂಕಾರ, ಪ್ರಾಣ ಮತ್ತು ಆತ್ಮವನ್ನು ಸಮಾಗಮ ಆಗಿಸುವುದರ ಉದ್ದೇಶದ ಮೇಲೆ ಆಧಾರಗೊಂಡಿದೆ. ಯೋಗಶಾಸ್ತ್ರದಲ್ಲಿ ಪೂರ್ವಭಾವನೆಯೆಂದರೆ, ಆತ್ಮವು (ಚಿತ್, ಸಂವಿತ್, ಶೂನ್ಯ ಅಥವಾ ಈಶ್ವರ ಎಂದು ವಿಧವಿಧವಾಗಿ ಕರೆಯಲ್ಪಡುವ ಪರಿಶುದ್ಧ ಪ್ರಜ್ಞೆ), ಅದು ಭೌತಿಕ ಶರೀರದೊಳಗೆ ನೆಲೆಯಾಗಿಲ್ಲ, ಬದಲಾಗಿ ಶಿರದ ಮೇಲಿರುವ ಪ್ರದೇಶದಲ್ಲಿ ನೆಲೆಯಾಗಿದೆ (ಪರಾ, ವ್ಯಾಪಿನಿ, ಬ್ರಹ್ಮರಂಧ್ರಿ, ಅಥವಾ ಶೂನ್ಯವೆಂದು ಕರೆಯಲ್ಪಡುತ್ತದೆ). ಅಲ್ಲಿ ಆತ್ಮವು ವ್ಯಕ್ತಿಯ ನಿಜವಾದ ಕೇಂದ್ರ ಭಾಗದಲ್ಲಿ ಉಪಸ್ಥಿತವಾಗಿದೆ (ಹೃದಯ ಪ್ರದೇಶ, ಹೃದ್ದೇಶ). ಶರೀರ (ಕಾಯ)ವೆಂದು ಕರೆಯಲ್ಪಡುವ ಮನೋಭೌತ ಜೀವದಲ್ಲಿ ಇದರ ಪ್ರತಿಫಲನ ಅಥವಾ ಪ್ರತಿನಿಧಿಯೇ ಪ್ರಾಣವೆಂದೆನಿಸುತ್ತದೆ (ಪರದೇವತಾ). ಇದು ಜ್ಞಾನ-ಶಕ್ತಿಯಾಗಿ, ಕ್ರಿಯಾ-ಶಕ್ತಿಯಾಗಿ ಮತ್ತು ಇಚ್ಛಾ-ಶಕ್ತಿಯಾಗಿ ಕಾರ್ಯ ವಹಿಸುತ್ತದೆ, ಮತ್ತು ಭೌತಿಕ ಅಸ್ತಿತ್ವಕ್ಕೆ (ಸಂವೃತಿ ಅಥವಾ ವ್ಯವಹಾರ) ಕಾರಣವಾಗಿದೆ. ಇದಕ್ಕೆ ವಿಭಿನ್ನ ಲಕ್ಷಣ ಹೊಂದಿರುವುದು ಆತ್ಮ. ಇದು ಮನೋಭೌತಿಕ ವ್ಯವಸ್ಥೆಗಿಂತ ಅತೀತವಾದದ್ದು (ಪರಮಾರ್ಥ) ಎಂಬುದಾಗಿ ವರ್ಣಿಸಲಾಗಿದೆ.

---

[1] ವಜ್ರಯಾನ ಸೂತ್ರ : ಓಂ ಶೂನ್ಯತಾ ಜ್ಞಾನ ವಜ್ರ ಸ್ವಭಾವಾತ್ಮ ಕೋಹಂ ||

[2] ಬೋಧಿ ಚಿತ್ತೋತ್ಪಾದಂ ಚ ಕುರ್ಯಾತ್ ರತ್ನತ್ರಯಂ ಮೆ ಶರಣಂ ಇತ್ಯಾದಿನಾ । ತತಃ ಶೂನ್ಯತಾಂ ವಿಭಾವಯೇತ್। ಸರ್ವಧರ್ಮಾನ್ ನಿಃಸ್ವಭಾವರೂಪಾನ್ ವಿಭಾವ್ಯ ಅಕ್ಷರಾಖ್ಯಂ ಬೋಧಿಚಿತ್ತಂ ಸ್ವರೂಪಂ ಪ್ರಭಾಸ್ವರಂ (ಪ್ರಕೃತಿ ದೀಪ್ತಿಯುಕ್ತಂ) ಆತ್ಮಾನಂ ಪಶ್ಯೇತ್ ||

15. ಸೋಽಹಂ ಸಾಧನೆ

ಓಂಕಾರವು (ಪ್ರಣವ) ಆತ್ಮ ಮತ್ತು ಪ್ರಾಣ ಇವೆರಡನ್ನೂ ಒಳಗೊಂಡಿದೆ. ಇದು ನಿರಾಕಾರ ಆತ್ಮವನ್ನು ಸಾಕಾರ ಪ್ರಾಣದೊಂದಿಗೆ ಏಕೀಕರಿಸುತ್ತದೆ. ಇದು ಪಿಂಡಾಂಡ ಜೀವನವನ್ನು ಬ್ರಹ್ಮಾಂಡವಾಗಿ ವಿಕಸಿತವಾಗುವಂತೆ ಮಾಡುತ್ತದೆ; ಈ ''ಬೆಳವಣಿಗೆ'', ವಿಸ್ತರಣೆ ಅಥವಾ ವೃದ್ಧಿಯನ್ನು ''ಬ್ರಹ್ಮ'' ಎಂಬುದಾಗಿ ಗುರುತಿಸಲಾಗಿದೆ (ಬೃಹಿ = ವೃದ್ಧಿ). ಆದ್ದರಿಂದ - ಓಂ ಇತಿಬ್ರಹ್ಮ। ಓಂ ಇತೀದಂ ಸರ್ವಂ। ಎಂಬ ಘೋಷಣೆಗಳಿವೆ.

ಇದು ಪ್ರಾಣಾಯಾಮ (ಪ್ರಾಣದ ವಿಸ್ತರಣೆ) ಮತ್ತು ಸೋಽಹಂ ಸಾಧನೆಯ (ಅಜಪಾ-ಜಪ ಅಥವಾ ಹಂಸ ಜಪ) ತತ್ತ್ವಗಳನ್ನೂ ಮತ್ತು ಸಾಧನೆಯನ್ನೂ ವಿವರಿಸುತ್ತದೆ.

ಉಚ್ಛ್ವಾಸ-ನಿಶ್ವಾಸಗಳ ರೂಪದಲ್ಲಿ ಮೌನವಾಗಿ ಆದರೆ ನಿರಂತರವಾಗಿ ಸ್ಪಷ್ಟತೆಯಿಂದ ಪ್ರಾಣವು ''ಹಂಸ ಸೋಹಂ'' ಅನ್ನು ಉಚ್ಚರಿಸುತ್ತಾ, ಉಚ್ಛ್ವಾಸ-ನಿಶ್ವಾಸಗಳ ಅಂತರದ ವಿರಾಮದಲ್ಲಿ ಸೂಕ್ಷ್ಮವಾದ ಓಂಕಾರಕ್ಕೆ ಕಾರಣವಾಗುತ್ತದೆ (ಮಧ್ಯದಶಾ). ಇದು ಬರಿದಾದ ಶೂನ್ಯವಾದ ಸ್ಥಿತಿ-ಪ್ರಾಣವು ಶರೀರದ (ಪಾನ) ಹೊರಗೂ ಹೋಗುವುದಿಲ್ಲ, ಶರೀರದ (ಅಪಾನ) ಒಳಗೂ ಪ್ರವೇಶಿಸುವುದಿಲ್ಲ, ಇಲ್ಲಿ ಪ್ರಾಣವು ವಿಶ್ರಮಿಸುತ್ತಿದೆ (ವಿಶ್ರಾಮ), ಅದು ಶೂನ್ಯವಾಗಿದೆ. ಅಗಾಧ ಗೂಢಾರ್ಥವನ್ನು ಸೂಚಿಸುವ ಕಾಶ್ಮೀರ ಶೈವ ಗ್ರಂಥವಾದ ''ವಿಜ್ಞಾನ - ಭೈರವ' ದಲ್ಲಿ ಈ ರೀತಿ ಹೇಳಿದೆ [1]:

ಗಾಳಿಯನ್ನು ಒಳಕ್ಕೆಳೆದುಕೊಂಡು, ಆಚೆಗೆ ಬಿಡುತ್ತೇವೆ. ಪ್ರಾಣಶಕ್ತಿಯೇ ಗಾಳಿಯನ್ನು ಒಳಗೆ ಬರುವಂತೆಯೂ ಮತ್ತು ಆಚೆಗೆ ಹೋಗುವಂತೆಯೂ ಮಾಡುತ್ತದೆ. ಆದರೆ ಶಕ್ತಿಯೇ ತಾನಾಗಿ ಒಳಗೂ ಬರುವುದಿಲ್ಲ, ಹೊರಗೂ ಹೋಗುವುದಿಲ್ಲ, ಅದು ಕಾರ್ಯನಿರ್ವಹಿಸಲು (ಅರಿವು, ಕ್ರಿಯೆ, ವಿಚಾರ) ಸಾಧ್ಯವಾಗುವಂತೆ ಗಾಳಿಯ ರೂಪವನ್ನು ತಾಳಿ (ಮರುತ್) ಒಳಗೂ ಹೊರಗೂ ಹೋಗುತ್ತದೆ. ಆದಾಗ್ಯೂ ಅದು ವ್ಯಾವಹಾರಿಕ (ಲೌಕಿಕ) ವಿಚಲತೆಗಳಿಂದ ದೂರವಾಗಿ ಇರುತ್ತದೆ. ನಿರ್ವಿಕಲ್ಪತಯಾ ಮಧ್ಯೇ ಶೂನ್ಯತಾ ರೂಪತಾ।

ಅದು ಮಧ್ಯದಲ್ಲಿ ಶೂನ್ಯ, ಕ್ರಿಯಾರಹಿತ (ಉಚ್ಛ್ವಾಸ - ನಿಶ್ವಾಸಗಳ ಅಂತರದಲ್ಲಿ)[2]:

ಉಚ್ಛ್ವಾಸ ಅಥವಾ ನಿಶ್ವಾಸದ ನಂತರ, ಅಲ್ಪಾವಧಿಯ ಸೂಕ್ಷ್ಮ ವಿರಾಮವಿರುತ್ತದೆ; ಇದು

---

[1] ಮರುತೋಂತರ್ಬಹಿರ್ವಾಪಿ ವಿಯದ್ಯುಗ್ಮನಿವರ್ತನಾತ್। ನವ್ರಜೆನ್ನ ವಿಶೇಚ್ಛಕ್ತಿಃ ಮರುದ್ರೂಪ ವಿಕಾಸಿತೆ ॥

[2] ಕುಂಭಿತಾ ರೋಚಿತಾ ವಾಪಿ ಪೂರಿತಾ ಯಾ ಪರಾ ಭವೇತ್। ತದಂತೇ ಶಾಂತನಾಮಾಸೌ ಶಕ್ತ್ಯಾ ಶಾಂತಃ ಪ್ರಕಾಶತೇ ॥

ಗಮನಕ್ಕೆ ಬರುವುದಿಲ್ಲ. ಬೆಳಕು ಮತ್ತು ಶಬ್ದ, ಪ್ರಶಾಂತತೆ ಮತ್ತು ಪ್ರಕಾಶವಾಗಿರುವ ಪರಿಶುದ್ಧ ಪ್ರಾಣ-ಶಕ್ತಿಯನ್ನು ಪ್ರತಿನಿಧಿಸುವ ಈ ವಿರಾಮದ ಅವಧಿಯನ್ನು ವ್ಯಕ್ತಿಯು ಗಮನಿಸಬೇಕೆಂದು ಹೇಳುತ್ತಾರೆ. ''ಅನಾಹತ''ವೆಂದು ಕರೆಯಲಾಗುವ ಹೃದಯ ಕೇಂದ್ರದಲ್ಲಿ ಈ ಶೂನ್ಯ ವಿರಾಮವು ಶರೀರದೊಳಗಡೆ ಇದೆ, ಹಾಗೂ ಶರೀರದಾಚೆ ನಾಸಾಗ್ರದಿಂದ ಹನ್ನೆರಡು ಬೆರಳುಗಳ (ದ್ವಾದಶಾಂತ) ಅಂತರದಲ್ಲಿದೆ. ಅವುಗಳನ್ನು ಕ್ರಮವಾಗಿ ಅಂತಃಕುಂಭಕ ಮತ್ತು ಬಹಿಃ ಕುಂಭಕಗಳೆನ್ನುತ್ತಾರೆ. ಇವೆರಡೂ ಸಂಪೂರ್ಣವಾಗಿ ನಿಶ್ಚಲವಾಗಿರುವ (ಉಚ್ಛ್ವಾಸ-ನಿಶ್ವಾಸಗಳಿಲ್ಲದೆ) ಪ್ರಾಣಶಕ್ತಿಯ ಅಂತಃಶಕ್ತಿಯ ವೈಶಿಷ್ಟ್ಯತೆಯನ್ನು ಹೊಂದಿದೆ.

ಈ ವಿರಾಮವನ್ನು ಪ್ರಶಾಂತತೆಯಿಂದ ಗಮನಿಸಿದಲ್ಲಿ ಮತ್ತು ಮನಸ್ಸನ್ನು ಎಲ್ಲ ಆಲೋಚನಾ ಭಾವನೆಗಳಿಂದ (ನಿರ್ವಿಕಲ್ಪ) ಸಂಪೂರ್ಣವಾಗಿ ದೂರಾಗಿಸಿದಲ್ಲಿ, ಈ ಆಂತರ್ಯವು ಅನೈಚ್ಛಿಕವಾಗಿ ಹಾಗೂ ಆನಂದದ ಭಾವನೆಯಿಂದ ಸ್ವಾಭಾವಿಕವಾಗಿ ವಿಕಸಿತವಾಗುತ್ತದೆ. ಇದು ''ಮಧ್ಯವಿಕಾಸ'' ವೆನಿಸಿದೆ.

ಉಚ್ಛ್ವಾಸ-ನಿಶ್ವಾಸಗಳ ಮೇಲೆ ಗಮನವಿರಿಸುವ ಜೊತೆಗೆ ''ಹಂಸ-ಸೋಹಂ''ಗಳ ಪುನರುಚ್ಚಾರಣೆಯಿಂದ, ಉಸಿರಿನೊಡನೆ ಸಂಯೋಜನೆಗೊಂಡಿರುವ ''ಹ'' ಮತ್ತು ''ಸ'' ಶಬ್ದಗಳನ್ನು ವರ್ಜಿಸಲಾಗುತ್ತದೆ, ಮತ್ತು ಓಂಕಾರವೊಂದೇ ಉಳಿಯುತ್ತದೆ. ಇದು ವಿರಾಮವನ್ನು ಪ್ರತಿನಿಧಿಸುತ್ತದೆ (ಮಧ್ಯದಶ-ಪ್ರಾಣಶಕ್ತಿ). ಅಲ್ಪ ವಿರಾಮಗಳೊಂದಿಗೆ (ಹ್ರಸ್ವ-ಒಂದು ಮಾತ್ರಾ) ಪ್ರಾರಂಭವಾಗಿ ಓಂಕಾರದ ಸ್ಪಷ್ಟೋಚ್ಚಾರಣೆಯು ಲಂಬವಾಗುತ್ತದೆ (ದೀರ್ಘ, ಎರಡು ಮಾತ್ರಾಗಳ ಅಂತರ), ಮತ್ತು ಇನ್ನೂ ದೀರ್ಘವಾಗುತ್ತದೆ (ಪ್ಲುತ-ಮೂರು ಅಥವಾ ಮೂರಕ್ಕಿಂತಲೂ ಹೆಚ್ಚು ಮಾತ್ರಾಗಳು). ಅಂತರವು ಹೆಚ್ಚಾದಂತೆಲ್ಲಾ, ಶೂನ್ಯತೆ, ವಿಶ್ರಾಂತಿ ಹಾಗೂ ಸಂತೋಷವೂ ಸಹ ''ವಿಜ್ಞಾನ-ಭೈರವ''ದಲ್ಲಿ ತಿಳಿಸಿದ ಹಾಗೆ, ವಿಸ್ತರಿಸುತ್ತವೆ [2]:

ॐ

[2] ಪ್ರಣವಾದಿ ಸಮುಚ್ಚಾರಾತ್ ಪ್ಲುತಾಂತೆ ಶೂನ್ಯಭಾವನಾತ್ । ಶೂನ್ಯಯಾ ಪರಯಾ ಶಕ್ತ್ಯಾಶೂನ್ಯತಾಮೇತಿ ಭೈರವಿ ॥

16. ಸಾಕ್ಷಾತ್ಕಾರ ಮತ್ತು ಓಂಕಾರ

ಓಂಕಾರದ ದೀರ್ಘೋಚ್ಚಾರಣೆಯು ಶರೀರದ ದ್ವಾದಶಾಂತಗಳಲ್ಲಿ, ಕೊನೆಯ ನಾಲ್ಕು ದ್ವಾದಶಾಂತಗಳಲ್ಲಿ ಮುಕ್ತಾಯವಾಗುತ್ತದೆ (ಪ್ಲುತಾಂತ). ಇಡಃ ನಾಭಿಯಿಂದ ಪ್ರಾರಂಭವಾಗಿ, ಹೃದಯ (ಅನಾಹತ), ಕಂಠ (ತಾಲು), ಹಣೆಯ-ಮಧ್ಯೆ (ಲಲಾಟ-ಮಧ್ಯ) ಮತ್ತು ಶಿರಾಗ್ರದಲ್ಲಿರುವ ಸೂಕ್ಷ್ಮರಂಧ್ರ (ಬ್ರಹ್ಮ-ರಂಧ್ರ)ದ ಮೂಲಕ ಹಾದು ಹೋಗುತ್ತದೆ. ಪ್ರತಿ ಕೇಂದ್ರವು ಪ್ರಾರಂಭದ ಬಿಂದುವಿನಿಂದ ಕ್ರಮವಾಗಿ 12 ಅಂಗುಲಗಳ ಅಂತರದಲ್ಲಿದೆ (ತಾಂತ್ರಿಕವಾಗಿ ಹೃದಯ ಅಥವಾ ''ಹೃತ್''). ನಾಭಿಯು ಪ್ರಾಣದ ಮೂಲವಾಗಿದೆ. ಹೊರ ಉಸಿರು ಇಲ್ಲಿಂದ ಪ್ರಾರಂಭವಾಗುತ್ತದೆ ಮತ್ತು ಒಳ ಉಸಿರು ಇಲ್ಲಿ ಕೊನೆಯಾಗುತ್ತದೆ. ಇಲ್ಲಿಂದ 12 ಬೆರಳುಗಳ ಅಗಲದ ಅಳತೆಯಲ್ಲಿ ಮೇಲ್ಗಡೆ ಹೃದಯ ಕೇಂದ್ರವಿದೆ (ಹೃತ್) ಅಥವಾ ಅನಾಹತ. ಇದು ಓಂಕಾರದ ಮೊದಲ ಮಾತ್ರೆಯನ್ನು (ಅ) ಆವರಿಸಿರುವ ಮೊದಲ ದ್ವಾದಶಾಂತವಾಗಿದೆ. ಆಗ ಹೃದಯವು ಪ್ರಾರಂಭದ ಬಿಂದುವಾಗಿದೆ, ಮತ್ತೊಂದು ದ್ವಾದಶಾಂತ (ಓಂಕಾರದ ಎರಡನೆಯ ಮಾತ್ರೆ (ಉ)ಯನ್ನು ಆವರಿಸುತ್ತದೆ.) ಕಂಠವು ಪ್ರಾರಂಭಿಕ ಬಿಂದುವಾಗಿ, ಹಣೆಯ ಮಧ್ಯದಲ್ಲಿ ಕೊನೆಗೊಳ್ಳುವ ದ್ವಾದಶಾಂತವು ಮೂರನೆಯದಾಗುತ್ತದೆ (ಓಂಕಾರದ ಮೂರನೆಯ ಮಾತ್ರೆ (ಮ್)ಯನ್ನು ಆವರಿಸುತ್ತದೆ). ನಾಲ್ಕನೆಯ ದ್ವಾದಶಾಂತಕ್ಕೆ ಅನುಗುಣವಾಗಿರುವ ಚತುಷ್ಪಾತಗಳಿರುವ ಓಂಕಾರದ ನಾಲ್ಕನೆಯ ಮಾತ್ರೆಯು ಶಿರದ ಮೇಲಿರುವ ಬ್ರಹ್ಮ-ರಂಧ್ರದಲ್ಲಿ ಕೊನೆಗೊಳ್ಳುತ್ತದೆ.

ಬ್ರಹ್ಮರಂಧ್ರವು, ಪ್ರಾಣದಿಂದ ವ್ಯಾಪಿಸಿರುವ, ಸಚೇತನಗೊಂಡಿರುವ ಹಾಗೂ ನಿಯಂತ್ರಣಗೊಂಡಿರುವ ಮನೋಭೌತಿಕ ಶರೀರದ ಭಾಗವಲ್ಲವೆಂಬುದನ್ನು ಗಮನಿಸಬೇಕು. ಇದು ಶರೀರದಿಂದ ಹೊರಗಿದೆ, ಶರೀರದ ಮೇಲಿದೆ, ಮತ್ತು ಶರೀರದಿಂದ ಪ್ರತ್ಯೇಕವಾಗಿದೆ. ಹೀಗೆ ಕೊನೆಯ ದ್ವಾದಶಾಂತಕ್ಕೆ (ಬ್ರಹ್ಮರಂಧ್ರ) ಏರುವ ಓಂಕಾರವು ಪ್ರಾಣದ ವ್ಯಾಪ್ತಿಯನ್ನು ಮೀರಿದುದಾಗಿದೆ. ಉಪನಿಷತ್ತುಗಳು ಪ್ರಾಣವು ''ವಿರಾಟ'' ವಾಗುತ್ತದೆಂದು ಹೇಳುತ್ತವೆ (ಸರ್ವವ್ಯಾಪಿ ಹಾಗೂ ತೇಜೋಮಯ). ಅದನ್ನು ವ್ಯಕ್ತಿಗತಗೊಳಿಸಿ ಶರೀರದೊಳಗೆ ಬಂಧಿಸಲಾಗುವುದಿಲ್ಲ, ಇದು ಬಂಧನದಿಂದ ಮುಕ್ತಿಯನ್ನು ಸೂಚಿಸುತ್ತದೆ (ಮುಕ್ತಿ, ಮೋಕ್ಷ). ಈ ಅರ್ಥದಲ್ಲಿ, ಪ್ರಾಣವು ಬ್ರಹ್ಮವಾಗಿ ವಿಸ್ತರಿಸುತ್ತದೆ (ಆತ್ಮದೊಂದಿಗೆ ಅನನ್ಯತೆಯನ್ನು ಗುರುತಿಸುತ್ತದೆ). ಓಂಕಾರ ನಿರ್ಣಯದೊಂದಿಗೆ ಪ್ರಾರಂಭವಾಗುವ ಮಾಂಡೂಕ್ಯ ಉಪನಿಷತ್ತು, ಆತ್ಮದೊಂದಿಗೆ ಓಂಕಾರದ ಅನನ್ಯತೆಯನ್ನು ದೃಢೀಕರಿಸುತ್ತದೆ[1]:

ಶರೀರದೊಳಗಿನ ಪ್ರಾಣದೊಂದಿಗೆ ಅನನ್ಯವಾಗಿರುವ ಓಂಕಾರವು ಮೂರು ಮಾತ್ರೆ ಅಥವಾ ಪಾದಗಳನ್ನು ಹೊಂದಿದೆ (ಈ ಪಾದಗಳು ಮೂರು ದ್ವಾದಶಾಂತಗಳನ್ನು ಪ್ರತಿನಿಧಿಸುತ್ತವೆ). ಇದಕ್ಕೂ ಮೀರಿ ಇದು ಆತ್ಮದೊಂದಿಗೆ ತಾದಾತ್ಮ್ಯತೆಯನ್ನು ಪಡೆಯುತ್ತದೆ (ನಾಲ್ಕನೇ ಮಾತ್ರೆ ಅಥವಾ

[1] ಸರ್ವಂ ಹ್ಯೇತದ್ ಬ್ರಹ್ಮ। ಅಯಮಾತ್ಮಾ ಬ್ರಹ್ಮ। ಸೋಯಮಾತ್ಮಾ ಚತುಷ್ಪಾತ್ ॥ (ಮಾಂಡೂಕ್ಯ ಉಪನಿಷತ್ 2)

ಪಾದದಿಂದ ಪ್ರತಿನಿಧಿಸಲ್ಪಡುತ್ತದೆ). ಓಂಕಾರದ ಪೂರ್ಣಸಿದ್ಧಿಯು ಅಂತಿಮ ದ್ವಾದಶಾಂತವಾದ (ತುರ್ಯ-ಶರೀರಕ್ಕೂ ಅತೀತವಾದ) ಬ್ರಹ್ಮ-ರಂಧ್ರದಲ್ಲಿದೆ [2].

ಪ್ರಾಣಶಕ್ತಿಯಿಂದ ಪ್ರೇರಿತವಾದ ಓಂಕಾರವು ಶಿರಾಗ್ರವನ್ನು ತಲುಪಿದಾಗ, ಅದು ಶರೀರ-ಪ್ರತಿಬಂಧಕವನ್ನು ಸೀಳಿಕೊಂಡು ಹುಬ್ಬುಗಳ ಊರ್ಧ್ವ ಸುರುಳಿಯಿಂದ ರಚಿತವಾದ ಸೇತುವೆಯನ್ನು ದಾಟುತ್ತದೆ. ಎಲ್ಲ ಆಲೋಚನಾ-ತರಂಗಗಳಿಂದ ಮುಕ್ತವಾದ ಮನಸ್ಸಿನಿಂದ, ಓಂಕಾರವು ಎಲ್ಲ ಮನೋಭೌತಿಕಗಳಿಗಿಂತಲೂ ಮೇಲೇರುತ್ತದೆ ಮತ್ತು ಸಂಪೂರ್ಣವಾಗಿ ವಿಕಸನಶೀಲವಾಗುತ್ತದೆ ಮತ್ತು ಮುಕ್ತವಾಗುತ್ತದೆ. ಒಮ್ಮೆಗೇ ವ್ಯಕ್ತಿಯು ಶರೀರದಲ್ಲಿ ಎಲ್ಲ ದಿಕ್ಕುಗಳಿಂದಲೂ ವಿಕಸನಶೀಲತೆಯ ಶೂನ್ಯತೆಯನ್ನು ಅನುಭವಿಸುತ್ತಾನೆ. ಇದು ಸುತ್ತಲೂ ಪ್ರಕಾಶಮಾನವಾದ, ವಿಸ್ತಾರವಾದ, ಮೋಡಗಳೇ ಇಲ್ಲದ ಶುದ್ಧ ಆಕಾಶದಂತಿರುತ್ತದೆ [3].

ಅವನಿಗೆ ಒಮ್ಮೆಗೇ ಊರ್ಧ್ವ ಶೂನ್ಯತೆ ಮತ್ತು ಅಧಃಶೂನ್ಯತೆಯ ಅನುಭವವಾಗುತ್ತದೆ; ವಿಕಸನಶೀಲ ಪ್ರಾಣವು ಶರೀರಕ್ಕೆ ಅಂಟಿಕೊಂಡಿರುವುದಿಲ್ಲ; ಅದು ಶರೀರವನ್ನು ಮೀರಿ ಬೆಳೆದಿರುತ್ತದೆ. ಅನುಭವಿಸುತ್ತಿರುವ ಮನಸ್ಸೂ ಸಹ ಶೂನ್ಯವಾಗಿರುತ್ತದೆ [4].

ವಾಸ್ತವದಲ್ಲಿ ಸಂಪೂರ್ಣ ಶರೀರವು ಶೂನ್ಯ ಎಂದೆನಿಸುತ್ತದೆ. ಶರೀರದ ರಚನೆಯ ಎಲ್ಲ ವಸ್ತುಗಳೂ ತಾವೇ ಶೂನ್ಯತೆಯಿಂದ ಕೂಡಿರುತ್ತವೆ [5].

ಆ ಸ್ಥಿತಿಯಲ್ಲಿರುವ ವ್ಯಕ್ತಿಗೆ ತನ್ನ ಶರೀರದ ಅರಿವಿರುವುದಿಲ್ಲ ; ಅವನ ಮನಸ್ಸು ಯೋಚಿಸುವುದಿಲ್ಲ, ಬಾಹ್ಯ ಪ್ರಪಂಚಕ್ಕೆ ಅವನ ಕಣ್ಣು ಮುಚ್ಚಿರುತ್ತದೆ. ತನ್ನ ಸುತ್ತಲೂ ಇರುವ ಪ್ರಪಂಚದಿಂದ ಅವನು ಪ್ರತ್ಯೇಕವಾಗಿರುತ್ತಾನೆ. ಅವನ ದೃಷ್ಟಿಯು ಅವನ ಶಿರಾಗ್ರದಲ್ಲಿರುತ್ತದೆ. ಕಾಲಕ್ರಮೇಣ ಅವನು ಪರಮಸತ್ಯದ ಅನುಭವವನ್ನು ಪಡೆಯುತ್ತಾನೆ [6].

ॐ

---

[2] ತಯಾ ಪೂರ್ಯಾಶು ಮೂರ್ಧಾಂತಂ ಭಂಕ್ತ್ವಾ ಭ್ರೂಕ್ಷೇಪಸೇತುನಾ । ನಿರ್ವಿಕಲ್ಪಂ ಮನಃ ಕೃತ್ವಾ ಸರ್ವೋರ್ಧ್ವೇ ಸರ್ವಗೋದ್ಗಮಃ ॥

[3] ನಿಜದೇಹೇ ಸರ್ವದಿಕ್ಕಂ ಯುಗಪದ್ ಭಾವಯೇದ್ವಿಯತ್ । ನಿರ್ವಿಕಲ್ಪಮನಸ್ತಸ್ಯ ವಿಯತ್ ಸರ್ವಂ ಪ್ರವರ್ತತೇ ॥

[4] ಪೃಷ್ಠಶೂನ್ಯಂ, ಮೂಲಶೂನ್ಯಂ ಯುಗಪದ್ ಭಾವಯೇಚ್ಚಯಃ । ಶರೀರ ನಿರಪೇಕ್ಷಿಣ್ಯಾ ಶಕ್ತ್ಯಾ ಶೂನ್ಯಮನಾ ಭವೇತ್॥

[5] ತನು ದೇಶೇ ಶೂನ್ಯತೈವ ಯಃ ಕ್ಷಣಮಾತ್ರಂ ವಿಭಾವಯೇತ್ । ಸರ್ವ ದೇಹಗತಂ ದ್ರವ್ಯಂ ವಿಯದ್ ವ್ಯಾಪ್ತಂ ವಿಭಾಯೇತ್ ॥

[6] ಕಪಾಲಾಂತರ್ಮನೋ ನ್ಯಸ್ಯ ತಿಷ್ಠನ್ ಮೀಲಿತಲೋಚನಃ । ಕ್ರಮೇಣ ಮನಸೋ ದಾರ್ಢ್ಯಾತ್ ಲಕ್ಷ್ಯೇಲ್ಲಕ್ಷ್ಯಮುತ್ತಮಂ ॥

17. ವಿವಿಧ ಅಭಿಪ್ರಾಯಗಳು

ಪ್ರಾಚೀನ ಭಾರತೀಯ ಗ್ರಂಥವಾದ ಋಗ್ವೇದವು ಈ ಓಂ ಶಬ್ದವನ್ನು ಸ್ಪಷ್ಟವಾಗಿ ಅಥವಾ ಮಹತ್ತ್ವಪೂರ್ಣವಾಗಿ ಹೊಂದಿಲ್ಲವೆಂಬುದು ಕುತೂಹಲವನ್ನು ಹುಟ್ಟಿಸಬಹುದು. ಆದರೆ ಅಲ್ಲಿನ ಮೂರು ಮಂತ್ರಗಳಲ್ಲಿ ಜನ್ಯ ಪದಗಳಾದ ''ಓಮಾನಾಮ್'' (1.34.6, 6.50.7), ಮತ್ತು 'ಓಮಾಸಃ' (1.3.7) ಪದಗಳು ದೊರೆಯುತ್ತವೆ. ಈ ಎರಡೂ ಪದಗಳು 'ಅವ' (ರಕ್ಷಿಸು) ಎಂಬ ಮೂಲದಿಂದ ಬಂದಿವೆ ಎಂದು ವಿವರಿಸಲಾಗಿದೆ (ರಕ್ಷಣೆ - ಯಾಸ್ಕ 12.40, ಓ ಮಾಸಃ ಅವಿತಾರಃ - ಓ ಮಾಸಃ ಎಂದರೆ ರಕ್ಷಣೆ ಕೊಡುವವರು). ಈ ಅರ್ಥದಲ್ಲಿ ವ್ಯಾಕರಣದ ಸೂಕ್ಷ್ಮ-ಅಭಿಪ್ರಾಯ ವ್ಯತ್ಯಾಸವನ್ನು ಈ ರೀತಿ ಸೂಚಿಸಲಾಗಿದೆ :

1. ಅನ್ಯೇಭ್ಯೋಽಪಿ ದೃಶ್ಯಂತೇ । ಪಾಣಿನಿ 3.2.75 ಓ + ಮನ್ ।
ಅನುನಾಸಿಕ ಗ್ರಹಣಂ ಚಾನುವರ್ತತೆ । ಅವತೇಃ ಮನ್ ಪ್ರತ್ಯಯೇ ತಸ್ಯ ಟಿಲೋಪೇ ಓಮಿತಿ ದರ್ಶನಾತ್ (ಕೌಮುದಿ)

2. ಅವಿ ಸಿ ವಿಸಿ ಶುಷಿಭ್ಯಃ ಕಿತ್ । ಉಣಾದಿ ಸೂತ್ರ 1.141 ಅವ ರಕ್ಷಣೆ ಪಿವು
ತಂತುಸಂತಾನೆ ಷೀಂಗ್ ಬಂಧನೇ ಶಷು ಶೋಷಣೆ ಇತ್ಯೇವಂ ಧಾತೂನಾಂ
ಮನ್ ಪ್ರತ್ಯಯಃ । ಕಿಚ್ಚ ॥

''ಅವ'' ಮೂಲವು ಹನ್ನೆರಡಕ್ಕೂ ಹೆಚ್ಚು ಅರ್ಥಗಳನ್ನು ಹೊಂದಿದೆ. ವೇದಾರ್ಥದಲ್ಲಿ ಅವುಗಳೆಲ್ಲವೂ ಜೊತೆಯಾಗಿ ಮತ್ತು ಸಮನಾಗಿ ಸಮಂಜಸವಾಗಿರಲೇಬೇಕು.

ಪ್ರವೇಶಾವಗಮಾದಾನ ತೃಪ್ತಿ ರಕ್ಷಾಕಾಂತಿ ಗತಿಪ್ರೀತಿ ಸ್ವಾಮ್ಯರ್ಥಾರಾಪ್ತಿ ದೀಪ್ತಿ ವೃದ್ಧಯಃ ।
ಅರ್ಥಾ ಜ್ಞೇಯಾ ವಿಪಶ್ಚಿದ್ಭಿರವ ಧಾತೋಸ್ತು ಮನೀಷಿಭಿಃ ॥

1. ಅವತಿ, ಪ್ರವಿಶತಿ (ಸರ್ವಂ ವ್ಯಾಪಕತ್ವೇನ, ಸರ್ವೇ ಚ ಅಸ್ಮಿನ್ ಪ್ರವಿಶಂತೀತಿ).

''ಪ್ರವೇಶಿಸು'' (ವ್ಯಾಪಿಸುವ ಮೂಲಕ); ಅದು ಎಲ್ಲರೊಳಗೂ ಪ್ರವೇಶಿಸುತ್ತದೆ ಮತ್ತು ಎಲ್ಲವೂ ಅದರೊಳಗೆ ಪ್ರವೇಶಿಸುತ್ತದೆ. ಅದು ತನ್ನ ವ್ಯಾಪ್ತಿಯಲ್ಲಿ ಎಲ್ಲವನ್ನೂ ಒಳಗೊಂಡಿದೆ ಮತ್ತು ಸಮಗ್ರವಾಗಿದೆ. ಓತತ್ವವಾಚೀ ಹ್ಯೋಂಕಾರಃ ।

2. ಅವಗಚ್ಛತಿ, ಜಾನಾತಿ (ಸರ್ವಂ ಜ್ಞಾಯತೆ; ನರ್ವೈಶ್ಚ ಜ್ಞೇಯೋ ಭವತಿ).

ಎಲ್ಲವನ್ನೂ 'ತಿಳಿದಿದೆ'; ಅದು ಎಲ್ಲರಿಂದಲೂ ತಿಳಿಯಲ್ಪಡುತ್ತದೆ. 'ಗಂ' ಮೂಲವು (ಹೋಗು) 'ತಿಳಿದುಕೋ' ಎಂಬುದನ್ನು ಸೂಚಿಸುತ್ತದೆ (ಗತ್ಯರ್ಥಕಧಾತೂನಾಂ ಜ್ಞಾನಾರ್ಥತ್ವಾತ್।)

3. ಆದತ್ತೇ (ಸರ್ವಂ) (ಪ್ರಲಯ ಕಾಲೇ ಸರ್ವಂ ಚರಾಚರಮಾದತ್ತೇ । ಸರ್ವೈಃ ಓದೇಯಶ್ಚ।)

'ನಿರ್ಗಮಿಸುತ್ತದೆ' ಪ್ರಳಯ ಕಾಲದಲ್ಲಿ ಎಲ್ಲವನ್ನೂ 'ತೆಗೆದುಕೊಂಡು ಹೋಗುತ್ತದೆ' ಮತ್ತು ನಿಯತಕಾಲದ ನಿದ್ರೆ, ಸಮಾಧಿ ಹಾಗೂ ಮೂರ್ಛೆಯಲ್ಲೂ ಸಹ.

4. ಅವತಿ, ರಕ್ಷತಿ (ರಕ್ಷತಿ ಸರ್ವಾನ್)

ಎಲ್ಲರನ್ನೂ 'ರಕ್ಷಿಸುತ್ತದೆ' ಯಾಸ್ಕರು ಅಳವಡಿಸಿರುವ ಒಂದು ಮುಖ್ಯವಾದ ವ್ಯುತ್ಪತ್ತಿಶಾಸ್ತ್ರದ (etymological) ಅರ್ಥವಾಗಿದೆ.

5. ತೃಪ್ಯತಿ, ತರ್ಪಯತಿ (ಸ್ವಯಂ ತೃಪ್ತಃ । ತರ್ಪಯಿತಾ ಜ ಅನ್ಯೇಷಾಮ್।)

''ತೃಪ್ತಿಹೊಂದು''; ಎಲ್ಲ ಜೀವಿಗಳನ್ನೂ ತೃಪ್ತಿ ಪಡಿಸುತ್ತದೆ. ಇಲ್ಲಿ ತೃಪ್ತಿಯೆಂದರೆ ಪೂರ್ಣವಾಗಿರುವುದು; ಮತ್ತು ಪೂರಯಿಸುವುದಕ್ಕೆ ಮತ್ತೇನೂ ಬೇಕಿಲ್ಲದಿರುವುದು.

6. ಕಾಂತ್ಯಾರ್ಥೇ (ಕಾಂತಿಮಾನ್ ಭವತಿ । ಕಾಂತಿಂ ದದಾತಿ ।)

''ಪ್ರಕಾಶಗೊಳ್ಳುವುದು''; ಬೇರೆಯವರಿಗೂ ತೇಜಸ್ಸನ್ನು ನೀಡುವುದು. ಇದು ತನ್ನಂತಾನೇ ಬೆಳಗುವ ಜ್ಯೋತಿ (ಪ್ರಕಾಶ). ಇದನ್ನು ಬೆಳಗಿಸಲು ಬೇರೆ ಜ್ಯೋತಿ ಇಲ್ಲ.

7. ಗತ್ಯರ್ಥೆ (ಗತಿಮಾನ್ ಭವತಿ । ಗಮಯತಿ ಅನ್ಯಾನ್ । ಪರಮಾ ಗತಿಶ್ಚ।)

''ಚಲಿಸು', ''ಹೋಗು''. ಚಾಲಕ ಶಕ್ತಿಯಾಗುತ್ತದೆ; ಎಲ್ಲ ವಸ್ತುಗಳನ್ನೂ ಚಲಿಸುವಂತೆ ಮಾಡುತ್ತದೆ; ಇದು ಎಲ್ಲರಿಗೂ ಅಂತಿಮವಾಗಿ ವಿರಮಿಸುವ ಪರಮ ನೆಲೆಯಾಗಿದೆ. ಇದು ವ್ಯಾವಹಾರಿಕ ದೃಷ್ಟಿಯಾಗಿದೆ.

8. ಪ್ರೀಣನೆ (ಪ್ರೀಣಾತಿ ಸರ್ವಾನ್ । ಪ್ರೀತೋ ಭವತಿ ।)

''ತೃಪ್ತಿ ಪಡಿಸು'', ''ಸಂತೋಷಗೊಳಿಸು''. ಎಲ್ಲ ಜೀವಿಗಳಿಗೂ ಸುಖವನ್ನುಂಟು ಮಾಡುತ್ತದೆ; ಎಲ್ಲ ವಸ್ತುಗಳಿಂದಲೂ ಸಂತೋಷ ಹೊಂದುತ್ತದೆ. ಸ್ವಯಂ-ಅಸ್ತಿತ್ವದ ಜ್ಯೋತಿಗೆ ಸುಖ-ಸಂತೋಷವೇ ಸ್ವಾಭಾವಿಕ ಗುಣವಾಗಿದೆ. ಇದರಿಂದಾಗಿಯೇ ಸಕಲ ಪ್ರಾಪಂಚಿಕ ಸುಖಗಳೂ ಉಂಟಾಗುತ್ತವೆ. ರಸೋ ವೈಸಃ । ರಸಂಗ್ ಹ್ಯೋ ವಾಯಂ ಲಬ್ಧ್ವಾಽನಂದೀ ಭವತಿ।

9. ಸ್ವಾಮಿ ಭಾವೆ (ಸ್ವಾಮಿಾ ಭವತಿ ಜಗತಂ)

''ಅಧಿಕಾರ ನಡೆಸು'' ''ಆಳು''; ಇದು ಎಲ್ಲವನ್ನೂ ನಿರ್ವಹಿಸುತ್ತದೆ. ಇದು ಈಶಾವಾಸ್ಯ ಉಪನಿಷತ್ತಿನ ''ಈಶ'' ಆಗಿದೆ.

10. ಪ್ರಾ ಪ್ನೋತಿ (ಪ್ರಾಪ್ನೋತಿ । ಸರ್ವಂ ಪ್ರಾಪ್ಯತೆ । ಸರ್ವೈಃ ಪ್ರಾಪ್ತಃ । ಪ್ರಾಪ್ತ ಸರ್ವಸ್ವಃ ।)

'ಎಲ್ಲ ವಸ್ತುಗಳನ್ನೂ ಪಡೆ'. ಇದನ್ನು ಎಲ್ಲರೂ ಪ್ರಾಪ್ತಗೊಳಿಸಿಕೊಳ್ಳಬೇಕು. ವಾಸ್ತವವಾಗಿ ಯಾರು ಏನೇ ಗಳಿಸಿಕೊಳ್ಳಬಯಸಿದರೂ ಅದು ಪರಮ ಸತ್ಯವೊಂದೇ, ಗಳಿಸಿಕೊಳ್ಳಲು ಅದಕ್ಕಿಂತ ಅರ್ಹವಾದುದು ಇನ್ನೊಂದು ಇಲ್ಲ.

11. ದೀಪ್ಯತೆ (ದೀಪ್ಯತೆ ಸ್ವೇನ ಜ್ಯೋತಿಷಾ । ದೀಪಯತಿ ಸರ್ವಾನ್ ಜ್ಞಾನರೂಪೇಣ)

''ಬೆಳಗು'' ಪ್ರಕಾಶವಂತವಾಗು''; ತನ್ನದೇ ಬೆಳಕಿನಿಂದ ಪ್ರಕಾಶಿಸುತ್ತದೆ. ಜ್ಞಾನದ ರೂಪದಲ್ಲಿ ಎಲ್ಲ ವಸ್ತುಗಳನ್ನೂ ಪ್ರಕಾಶಿಸುತ್ತದೆ. ಇಲ್ಲಿ ಜ್ಞಾನ-ಜ್ಯೋತಿ (ಸಂವಿತ್) ಯನ್ನು ಹೇಳಲಾಗಿದೆ. ತೇನ ಭಾಸಾ ಸವಮಿದಂ ವಿಭಾತಿ ।

12. ವರ್ಧತೆ (ವರ್ಧತೆ ಯಥಾ ಯಥಾ ಜ್ಞಾನಂ ದರ್ಶಕಾನಾಂ ವರ್ಧಯತಿ । ಸರ್ವವೃದ್ಧಃ, ಪರಿವೃಢಃ । ಸರ್ವವರ್ಧಕಶ್ಚ।) 'ವೃದ್ಧಿ ಹೊಂದು' 'ಅಭಿವೃದ್ಧಿ ಹೊಂದು' 'ಹೊರಗೆಡವು' (ಪ್ರಕಾಶಗೊಳಿಸು). ಆಧ್ಯಾತ್ಮಿಕ ಉನ್ನತಿಯಲ್ಲಿ ಬೆಳೆದರೆ ಭಕ್ತರ ಮುಂದೆ ಪ್ರಕಾಶವಾಗುತ್ತದೆ; ಸಂಪೂರ್ಣವಾಗಿ ಬೆಳೆದಿರುವ; ಎಲ್ಲವೂ ವೃದ್ಧಿಯಾಗುವುದಕ್ಕೆ ಸಹಾಯ ಮಾಡುತ್ತದೆ. ಇದು ಬ್ರಹ್ಮ (ಬೃಹೀ ವೃದ್ಧಾ).

ಓಂಕಾರದ ಅಭಿವ್ಯಕ್ತತೆಯಲ್ಲಿ ಈ ಎಲ್ಲ ಅರ್ಥಗಳೂ ಮಿಳಿತವಾಗಿವೆ. ಮೇಲೆ ತಿಳಿಸಿದ ಋಗ್ವೇದದ ಮೊದಲ ಮಂತ್ರದಲ್ಲಿ (1.3.7) ಬಹುವಚನದಲ್ಲಿರುವ ಪ್ರಥಮಾ ವಿಭಕ್ತಿಯ ಸಂಬೋಧನೆ ''ಓ ಮಾಸಃ'' ಎಂಬ ಪದವು ''ತೇಜೋಮಯ' ದೇವತೆಗಳನ್ನು (ಇಂದ್ರಿಯ ಕ್ರಿಯೆಗಳು ಮತ್ತು ಮನಸ್ಸು) ಸನಿಹಕ್ಕೆ ಬರುವಂತೆ ಕೇಳಿಕೊಳ್ಳುತ್ತದೆ. ಈ ಮಂತ್ರಕ್ಕೆ ದೇವತೆ ಅಶ್ವಿನಿ ಮತ್ತು ಋಷಿ ಮಧುಚ್ಛಂದ - ವೈಶ್ವಾಮಿತ್ರ; ಓ ಮಾಸಶ್ಚರ್ಷಣೀಧೃತೋ ವಿಶ್ವೇದೇವಾಸ ಆಗತ ।

ದೇವತೆಗಳು (ಅಂದರೆ ಇಂದ್ರಿಯಗಳ ಕ್ರಿಯೆಗಳು - ಬಾಹ್ಯ ಮತ್ತು ಆಂತರಿಕ) ಎಲ್ಲ ಜೀವಿಗಳ ರಕ್ಷಕರೇ ಅಲ್ಲದೆ (ಅವಿತರಾಃ) ಎಲ್ಲ ಮಾನವರಿಂದಲೂ ಹೊಂದಿದವರಾಗಿದ್ದಾರೆ (borne) (ಚರ್ಷಣಿ-ಧೃತ, ಮನುಷ್ಯ - ಧೃತಾಃ). ಕೋರಿಕೊಂಡಾಗ ಅವರು ಪ್ರಕಟವಾಗಿ ರಕ್ಷಣೆ ನೀಡುತ್ತಾರೆ. ಈ ಅರ್ಥದಲ್ಲಿ ಮೇಲಿನ ಎಲ್ಲಾ ಹನ್ನೆರಡು ಅರ್ಥಗಳೂ ಸರಿಯಾಗಿವೆ. ಇದೇ ರೀತಿ ಇನ್ನೊಂದು ಮಂತ್ರವಿದೆ (1.34.6) (ಹಿರಣ್ಯಸ್ತೂಪ - ಆಂಗೀರಸ ಋಷಿ)[1]:

ಪರಮಾನಂದ, ಆಮೋದ, ರಕ್ಷಣೆ ಮತ್ತು ಬೆಳಕಿನ (ಓ ಮಾನಂ) ಮೂಲವಾದ ಓಂಕಾರವನ್ನು, ಸುಖವನ್ನು (ಶಂ ಯೋ) ಅನುಗ್ರಹಿಸುವುದಕ್ಕೆ (ವಹತಂ) ಕೋರಿಕೊಳ್ಳಲಾಗಿದೆ; ಇದರರ್ಥವೆಂದರೆ, ಶರೀರ, ವಾಕ್ಕು ಮತ್ತು ಮನಸ್ಸು (ತ್ರಿಧಾತು)ಗಳಲ್ಲಿ ರಕ್ಷಣೆ (ಶರ್ಮ). ಓಂಕಾರವು ಈ ಮೂರು ಅಂಶಗಳನ್ನು ಹೊಂದಿದೆ. 'ಅ' (ಅಸ್ತಿತ್ವ), 'ಉ' (ಅಭಿವ್ಯಕ್ತತೆ) ಮತ್ತು 'ಮ' (ಮನಸ್ಸು) (1.34.6).

ಶುಕ್ಲ ಯಜುರ್ವೇದದಲ್ಲಿ ಓಂಕಾರವು ಹೆಚ್ಚು ಸ್ಪಷ್ಟವಾಗಿ ಹಾಗೂ ಹೆಚ್ಚು ನಿರ್ದಿಷ್ಟವಾಗಿ ದೊರಕುತ್ತದೆ. ಉದಾಹರಣೆಗೆ 40.15 (ಕಣ್ವ-ಸಂಹಿತೆ 40.17); ಓಂ (ओ३म्) ಕ್ರತೋಸ್ಮರ। ಕ್ಲಿಬೇ ಸ್ಮರ । ಕೃತಂ ಸ್ಮರ ॥

ಇದನ್ನು ಅನುಭವಾತ್ಮಕ ಆತ್ಮಕ್ಕೆ ಅದು ಕರ್ತೃವೆಂದು ಸಂಬೋಧಿಸಲಾಗಿದೆ (ಕ್ರತೋ). ತೃಪ್ತಿ ಹೊಂದಿದ ಅಸ್ತಿತ್ವಕ್ಕೆ (ಕ್ಲಿಬೆ) (ಓಂ ಸ್ಮರಾ); ಓಂಕಾರವನ್ನು ಸ್ಮರಿಸು ನಿನ್ನ ಜೀವನದ ಉದ್ದೇಶವನ್ನು ಸ್ಮರಿಸು (ಕೃತಂ). ಓಂಕಾರವು ಪರಮ ಸತ್ಯವೆಂದು ಶುಕ್ಲ ಯಜುರ್ವೇದವು ವಿವರಿಸುತ್ತದೆ (40.17)[2].

---

[1] ಓ ಮಾನಂ ಶಂಯೋರ್ಮಮಕಾಯ ಸೂನವೆ ತ್ರಿಧಾತು ಶರ್ಮ ವಹತಂ ಶುಭಸ್ಪತೀ ।

[2] ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿ ಹಿತಂ ಮುಖಂ । ಯೋಽಸಾವಾದಿತ್ಯೇ ಪುರುಷಃ ಸೋಽಸಾ ವಹಂ । ಓಂ (ओ३म्) ಖಂ ಬ್ರಹ್ಮ ॥ ಶುಕ್ಲ ಯ. (40.17)

''ಸತ್ಯ''ದ ಮುಖವು ಸುವರ್ಣದ ಮುಚ್ಚಳದಿಂದ ಮುಚ್ಚಲ್ಪಟ್ಟಿದೆ (ಇಲ್ಲಿ ಸೂರ್ಯ - ಅವನ ಪ್ರಕಾಶವು ಅವನಲ್ಲಿರುವ ದೇವತೆಯ ''ಸತ್ಯವನ್ನು'' ಅಡಗಿಸಿಡುತ್ತದೆ); ಯಾವ ಚೇತನವು ಅಸ್ತಿತ್ವದಲ್ಲಿದ್ದೂ ಆವೃತಗೊಂಡ ಸೂರ್ಯನಲ್ಲಿ ಇರುವ ಸತ್ಯವೂ ನನ್ನಲ್ಲಿಯೂ ಇದೆ. ಆ ಚೇತನವು ಓಂಕಾರವೆಂದು ಸೂಚಿಸುವ ಆ ಅಭಿವ್ಯಕ್ತತೆಯೇ, (ಖಮ್ ಅರ್ಥಾತ್, ಆಕಾಶ, ಸೂರ್ಯ) ವಿಭಿನ್ನ ಅರ್ಥ ನೀಡುವ ವಿವರಗಳಿವೆ (40.17).

ವೇದಗಳು ಓಂಕಾರವನ್ನು (ओ३म्) ಎಂಬುದಾಗಿ ಸೂಚಿಸುತ್ತದೆ. 'ಓ' ಮತ್ತು 'ಮ' ಅಕ್ಷರಗಳ ನಡುವೆ ಬಂದಿರುವ (३) (ಮೂರು) ಅಂಕಿಯು, ವ್ಯಂಜನೋಚ್ಚಾರಣೆಯು (articulation) ಮೂರು ಅಥವಾ ಅದಕ್ಕೂ ಹೆಚ್ಚಿನ ''ಮಾತ್ರೆ''ಗಳಲ್ಲಿ ಇರುವುದನ್ನು ಸೂಚಿಸುತ್ತದೆ. ಈ ಮೂರು ''ಮಾತ್ರೆ''ಗಳು, ಶಬ್ದವು ಮೂಲಾಧಾರದಿಂದ ಜನಿತವಾಗಿ ಅನಾಹತಕ್ಕೆ (ಹೃದಯ) ಮುಂದುವರೆದು, ಆಜ್ಞಾ (ಶಿರ)ದಲ್ಲಿ ವ್ಯಾಪಿಸುವುದನ್ನು ಸೂಚಿಸುತ್ತದೆ. ಅವು ಅಗ್ನಿ (ಅ), ವಾಯು (ಉ) ಮತ್ತು ಆದಿತ್ಯ (ಮ) ಎಂಬ ಮೂರು ಕ್ಷೇತ್ರಗಳನ್ನು ಪ್ರತಿನಿಧಿಸುತ್ತದೆ. ಭೂಮಿ (ಭೂಃ), ಮಧ್ಯಕ್ಷೇತ್ರ, ಅಂತರಿಕ್ಷ ಮತ್ತು ಸ್ವರ್ಗ (ಸ್ವಾಹಾ).

ಈ ಸಂದರ್ಭದಲ್ಲಿ ಗಮನಿಸಬೇಕಾದ ವಿಷಯವೆಂದರೆ, ಓಂಕಾರದ ಈ ಮೂರು ಮುಖ್ಯ ಘಟಕಗಳು ಮೂರು ವೇದಗಳಿಂದ ಉತ್ಪತ್ತಿಯಾದುದು [3].

ಇನ್ನೊಂದು ಸಂದರ್ಭದಲ್ಲಿ ಮನುವು (2.74) ಓಂಕಾರವನ್ನು ಪ್ರತಿ ಮಂತ್ರದ ಆದಿಯಲ್ಲಿಯೂ ಮತ್ತು ಅಂತ್ಯದಲ್ಲಿಯೂ ಸೇರಿಸಬೇಕೆಂಬ ನಿಯಮವನ್ನು ವಿಧಿಸಿದ್ದಾನೆ. ಏಕೆಂದರೆ, ಅದು ಪ್ರಾರಂಭದಲ್ಲಿ ಇಲ್ಲದಿದ್ದರೆ, ಆ ಮಂತ್ರದ ಸಾರವು ಸೋರಿ ಹೋಗುತ್ತದೆ, ಮತ್ತು ಅದು ಕೊನೆಯಲ್ಲಿಲ್ಲದಿದ್ದರೆ, ಮಂತ್ರದ ಪ್ರಧಾನ ಭಾಗವೇ ಕ್ಷಯಿಸುತ್ತದ್ದೆ[4].

ॐ

[3] ವೇದತ್ರಯಾ ತ್ಸಮುದ್ಧೃತ್ಯ ಪ್ರಣವಂ ನಿರ್ಮಮೇಪುರಾ ॥

[4] ಅಕಾರಂ ಚಾಪ್ಯುಕಾರಂ ಚ ಮಕಾರಂಚ ಪ್ರಜಾಪತಿಃ । ವೇದ ತ್ರಯಾನ್ನಿರ ದುಹದ್ ಭೂರ್ಭುವಃ ಸ್ವರಿತಿ ಚ ॥ ಬ್ರಹ್ಮಣಃ ಪ್ರಣವಂ ಕುರ್ಯಾದಾದಾವಂತೇ ಚ ಸರ್ವದಾ । ಸ್ರವತ್ಯನೋಂಕೃತಂ ಪೂರ್ವಂ ಪುರಸ್ತಾಚ್ಚ ವಿಶೀರ್ಯತಿ ॥

ನಮ್ಮ ಪ್ರಕಟಣೆಗಳು

I. ವೇದ ಸಾಹಿತ್ಯ

1. ಋಗ್ವೇದವನ್ನು ಯಾಕೆ ಓದಬೇಕು 30
2. ಅಥರ್ವ ವೇದದ ಅಂತರಂಗ 40
3. ವೇದ ಪ್ರಕಾಶ 20
4. ಭೂ ಸೂಕ್ತ (ಅಥರ್ವ ವೇದ) 15
5. ಅಂತರ್ಯಜ್ಞ 12
6. ಸರಸ್ವತಿ - ದೈವೀಪ್ರೇರಣೆಯ ಅಧಿದೇವತೆ 10
7. ಆಧುನಿಕರಿಗಾಗಿ ವೇದ ಜ್ಞಾನ 10
8. ಮಂತ್ರಗಳ ಮೂಲಕ ಪರಮಾನಂದ ಪ್ರಾಪ್ತಿ 12
10. ಇಂದ್ರ ಸಹಸ್ರನಾಮ ಸ್ತೋತ್ರಮ್ 20
11. ರುದ್ರ ಮಂತ್ರಗಳು 40
12. ವೇದ ಮಂತ್ರಗಳಲ್ಲಿ ಗಣಪತಿ 30
13. ದೈವೀ ಸಂಕಲ್ಪದ ಅಧಿದೇವತೆ - ಅಗ್ನಿ 65
14. ಅಗ್ನಿ ಸಹಸ್ರನಾಮ 18
15. ವಾಯು ಹಾಗೂ ಸೋಮ ಸಹಸ್ರನಾಮ 27

II. ಇತರೆ

16. ನಿಶ್ಚಿತ ಪ್ರಯೋಜನಗಳಿಗಾಗಿ ಪ್ರಾಣಾಯಾಮ ಹಾಗೂ ಆಸನಗಳು 35
17. ಸಾವಿನ ಸೊಬಗು ಹಾಗೂ ಪುನರ್ಜನ್ಮದ ಮರ್ಮ 25
18. ನೆಮ್ಮದಿಯ ಬಾಳು ನಿಮ್ಮದಾಗಿಸಿಕೊಳ್ಳಿ 35
19. ಶ್ರೀ ಮಾತೆ 45
20. ಯಂತ್ರಗಳು 45
21. ಸಾವಿತ್ರಿ - ಸಾರ ಸಂಗ್ರಹ 16
22. ದಿವ್ಯ ಜೀವನ 18
23. ಒಂದು ವರ್ಷದ ಜೈಲು ಜೀವನದ ಅನುಭವ 25
24. ಶ್ರೀವಿದ್ಯಾ ಸಾರಸುಧಾ 15
25. ಪ್ರಗತಿಪರ ಜೀವನ 20
26. ಆಧುನಿಕ ಮಾನವನಿಗಾಗಿ ಯೋಗ 25
27. ವಿವಾಹದ ಸಂಕೇತ 15
28. ಭಾರತೀಯ ನವಜನ್ಮ 22
29. ಶ್ರೀ ಅರೋಬಿಂದೊ - ಜೀವನ ಪರಿಚಯ 48

SAKSI PUBLICATIONS

I. On Veda

1.	Rig Veda Mantra Samhita	540
2.	Secrets of Rig Veda	450
3.	Krishna Yajur Veda Taittiriya Samhita (Text, Transliteration & Translation)	1200
4.	Krishna Yajur Veda Taittiriya Samhita Complete Text in Devanagari	200
5.	Krishna Yajur Veda Taittiriya Samhita Mantras	450
6.	Why Read Rig Veda	40
7.	Internal Yajna	15
8.	Sarasvati - Goddess of Inspiration	30
9.	The Light of Veda	20
10.	How to Manifest Bliss	15
11.	Rudra Mantras	65
12.	Essentials of Atharva Veda	45
13.	Shanti Mantras	22
14.	Veda Upanishad & Tantra	20
15.	Divinizing Life: The Path of Atri Rishi	275
16.	Lights on The Upanishads	100
17.	Veda Mantras and Suktas widely used in Worship	45
18.	Essentials of Krishna & Shukla Yajur Veda	60
19.	Essence of Tantra	25
20.	Soma - The Delight of Existence	15
21.	Ganapati, Brahmanaspati & Kumara	35
22.	Essentials of Rig Veda	45
23.	Secrets of Effective Work	22
24.	Indra - The Lord of Divine Mind	18
25.	Agni in Rig Veda	95
26.	Hymns on Creation & Death	50
27.	Purusha Sukta	46

II. Others

28.	Pranayama with Postures	50
29.	Prayers	20
30.	Work, Enjoyment and Progress	75
31.	Symbolism of Marriage	15
32.	Om - The Ultimate Word	30